# ಸಾಹಿತ್ಯದ ಚತುರ್ಮುಖಗಳು



ಆರ್. ಶಂಕರನಾರಾಯಣನ್
ಎನ್. ರಂಗನಾಥ ಶರ್ಮಾ

# ವಾದಿ

ಅರಿಕೇಸರಿಯ ಓಲಗದಲ್ಲಿ 'ಕವಿ, ಗಮಕಿ, ವಾದಿ, ವಾಗ್ಮಿ ಪ್ರವರರೂ ಪಂಡಿತರೂ ನೆಗಳ್ದ ಮಾತರಿವವರೂ' ಇದ್ದರೆಂದು ಪಂಪ ಮಹಾಕವಿ ಹೇಳಿದ್ದಾನೆ. ಪೊನ್ನನು ತಾನು ಕವಿಯೂ ಗಮಕಿಯೂ ವಾದಿಯೂ ವಾಗ್ಮಿಯೂ ಆಗಿದ್ದೇನೆಂದು ಹೇಳಿಕೊಂಡಿದ್ದಾನೆ. ಶ್ರೀ ವಾದಿರಾಜಮುನಿ ಪುಂಗವರನ್ನು 'ಕವಿ, ಗಮಕಿ, ವಾದಿ, ವಾಗ್ಮಿ ಪ್ರವರರು' ಎಂದು ದುರ್ಗಸಿಂಹನು ವರ್ಣಿಸಿದ್ದಾನೆ. ಅನಂತನಾಥ ಪುರಾಣದಲ್ಲಿ 'ಕವಿ, ಗಮಕಿ, ವಾದಿ, ವಾಗ್ಮಿ'ಗಳ ವಿಚಾರ ಬಂದಿದೆ. ಸಂಸ್ಕೃತ ಕಾವ್ಯಗಳಲ್ಲಿಯೂ ಈ ವಿಷಯ ಬಂದಿದೆ. ಸಮಂತಭದ್ರಾಚಾರ್ಯರು ಕವಿ, ಗಮಕಿ, ವಾದಿ, ವಾಗ್ಮಿಗಳ ಕೀರ್ತಿಯನ್ನೊಬ್ಬರೇ ಪಡೆದಿದ್ದರೆಂದು ಜಿನಸೇನಾಚಾರ್ಯರು ಮಹಾಪುರಾಣದಲ್ಲಿ ಹೇಳಿದ್ದಾರೆ. ಒಬ್ಬನೇ ವ್ಯಕ್ತಿ ಕವಿಯೂ ಗಮಕಿಯೂ ವಾದಿಯೂ ವಾಗ್ಮಿಯೂ ಆಗಿರಲು ಸಾಧ್ಯ. ಸಮಂತಭದ್ರಾಚಾರ್ಯರೂ ವಾದಿರಾಜಮುನಿಗಳೂ ಅಂಥವರಾಗಿದ್ದರೆಂದು ಜಿನಸೇನಾಚಾರ್ಯರೂ ದುರ್ಗಸಿಂಹನೂ ಹೇಳಿಯೇ ಇದ್ದಾರೆ. ಏಕೆಂದರೆ ಕವಿತ್ವಾದಿಗಳು ಪರಸ್ಪರ ವಿರುದ್ಧಗುಣಗಳಲ್ಲ. ಆದರೆ, ಒಬ್ಬನೇ ಎಲ್ಲವೂ ಆಗಿರಬೇಕೆಂಬ ನಿಯಮವೂ ಇಲ್ಲ. ಇವರಲ್ಲಿ ಕವಿ, ಗಮಕಿಗಳ ವಿಚಾರವು ಹಿಂದಿನ ಎರಡು ಲೇಖನಗಳಲ್ಲಿ ವಿಸ್ತಾರವಾಗಿ ಬಂದಿದೆ. ಇಲ್ಲಿ ವಾದಿಯ ವಿಚಾರವನ್ನು ಪ್ರಸ್ತಾವಿಸಲಾಗಿದೆ. ವಾಗ್ಮಿಯ ವಿಚಾರವನ್ನು ಮುಂದಿನ ಲೇಖನದಲ್ಲಿ ಪರಿಶೀಲಿಸಲಾಗುವುದು.

ಮೇಲೆ ಉದ್ಧರಿಸಿದ ಕವಿಗಳ ಮಾತಿನಲ್ಲಿ ಒಂದು ವಿಶೇಷವನ್ನು ನಾವು ಗಮನಿಸಬೇಕು. ಪಂಪಕವಿಯು ಕವಿ, ಗಮಕಿ, ವಾದಿ, ವಾಗ್ಮಿಗಳಿಗಿಂತ ಬೇರೆಯಾಗಿ ಪಂಡಿತರನ್ನೂ ಮಾತರಿವವರನ್ನೂ ಹೇಳಿದ್ದಾನೆ. ಉಳಿದವರೆಲ್ಲರೂ ಮೊದಲಿನ ನಾಲ್ವರನ್ನು ಹೆಸರಿಸಿದ್ದಾರೆಯೇ ಹೊರತು ಪಂಡಿತರನ್ನೂ ಮಾತರಿವವರನ್ನೂ ಪೃಥಕ್ಕರಿಸಿ ಹೇಳಿಲ್ಲ. ಪಂಪನು ಆ ಇಬ್ಬರನ್ನು ಪೃಥಕ್ಕರಿಸಿದ್ದಾನಷ್ಟೆ. ಆತನ ಆಶಯವೇನು ? ಪಂಡಿತರೂ ಮಾತರಿವವರೂ ವಾದಿ ವಾಗ್ಮಿಗಳಲ್ಲಿ ಸೇರಿಹೋಗುವುದಿಲ್ಲವೆ ? ಒಬ್ಬನು ಪಂಡಿತನೂ ಮಾತರಿವವನೂ ಆಗದಿದ್ದರೆ ಅವನು ವಾದಿಯೋ ವಾಗ್ಮಿಯೋ ಆಗುತ್ತಾನೆಯೆ ?

ಆದ್ದರಿಂದ ಪಂಡಿತರನ್ನೂ ಮಾತರಿವವರನ್ನೂ ಪೃಥಕ್ಕರಿಸಿ ಹೇಳಿದ ಪಂಪ ಕವಿಯ ಆಶಯವೇನಿರಬಹುದೆಂದು ಆಲೋಚಿಸುವುದು ಯುಕ್ತವಾಗಿದೆ.

ಪಂಡಿತ ಎಂಬ ಶಬ್ದಕ್ಕೆ ವಿದ್ವಾಂಸನೆಂಬ ಅರ್ಥ ಪ್ರಸಿದ್ಧವಾಗಿದೆ. ತರ್ಕ ವ್ಯಾಕರಣಾದಿ ವಿವಿಧ ಶಾಸ್ತ್ರಗಳನ್ನೋ ಅಥವಾ ಯಾವುದಾದರೊಂದು ಶಾಸ್ತ್ರವನ್ನೋ ಚೆನ್ನಾಗಿ ಅಭ್ಯಾಸ ಮಾಡಿದವನು ವಿದ್ವಾಂಸ. ಅವನು ತಿಳಿದದ್ದು ನಮ್ಮ ಪ್ರಾಚೀನಶಾಸ್ತ್ರವಾಗಿರಬಹುದು ಅಥವಾ ಆಧುನಿಕ ವಿಜ್ಞಾನ ಶಾಸ್ತ್ರದ ವಿವಿಧ ಶಾಖೆಗಳಲ್ಲೊಂದಾಗಿರಬಹುದು. ಒಟ್ಟಿನಲ್ಲಿ ಯಾವುದಾದರೊಂದು ವಿದ್ಯೆಗಾಗಿ ಶ್ರಮಿಸಿ ಪಾರಂಗತನಾದವನು ಎನ್ನಬಹುದು. ಅಮರಕೋಶದಲ್ಲಿ– 'ಧೀರೋ ಮನೀಷೀ ಜ್ಞಃ ಪ್ರಜ್ಞಃ ಸಂಖ್ಯಾವಾನ್ ಪಂಡಿತಃ ಕವಿಃ 'ಎಂದಿದೆ. ವಿದ್ವಾಂಸನನ್ನು ಬೋಧಿಸುವ ಹಲವಾರು ಪರ್ಯಾಯ ಪದಗಳಲ್ಲಿ ಪಂಡಿತ ಶಬ್ದ ಸೇರಿದೆ. ಇಂತಹ ವಿದ್ಯಾವಂತನೊಬ್ಬನು ಕವಿ ಗಮಕಿ ವಾದಿ ವಾಗ್ಮಿಗಳಲ್ಲಿ ಸೇರಿಹೋಗುತ್ತಾನೆಂಬ ನಿಯಮವೇನೂ ಇಲ್ಲ. ವಿದ್ವಾಂಸರೆಲ್ಲರೂ ಕವಿಗಳಲ್ಲ ವೆಂಬುದು ಸ್ಪಷ್ಟವಾದ ಸಂಗತಿ. ವಾದಿಯೆಂದರೆ ಯಾವುದಾದರೊಂದು ಶಾಸ್ತ್ರೀಯ ವಿಷಯದಲ್ಲಿ ಯುಕ್ತಿ, ಪ್ರತ್ಯುಕ್ತಿಗಳಿಂದ ಪ್ರತಿವಾದಿಯ ಹೇಳಿಕೆಯನ್ನು ಖಂಡಿಸಿ ತನ್ನ ಸಿದ್ಧಾಂತವನ್ನು ಮಂಡಿಸಲು ಸಮರ್ಥನಾದವನು. ವಾಗ್ಮಿಯಾದರೋ ಸಭೆಯಲ್ಲಿ ಒಂದಾನೊಂದು ವಿಷಯದ ಮೇಲೆ ತಡೆಯಿಲ್ಲದ ವಾಗ್ಧೋರಣೆಯನ್ನು ಮೆರೆಸಿ ಸಭಾಸದರ ಮೆಚ್ಚುಗೆಯನ್ನು ಗಳಿಸಬಲ್ಲವನು. ಒಬ್ಬ ಪಂಡಿತನು ಈ ವಿಚಾರಗಳನ್ನು ಬಲ್ಲವನಾದರೂ ವಾಗ್ವೈಖರಿ ಇಲ್ಲದ್ದರಿಂದ ವಾದಕ್ಕೂ ಇಳಿಯದೆ, ವಾಗ್ಧೋರಣೆಯನ್ನೂ ಮೆರೆಸಲಾಗದೆ ಇರಬಹುದು. ಯಾರಾದರೂ ಜಿಜ್ಞಾಸೆಯಿಂದ ಪ್ರಶ್ನೆ ಮಾಡಿದರೆ ಉತ್ತರ ಹೇಳುವ ಶಕ್ತಿ ಇರುತ್ತದೆ. ಉತ್ತರವನ್ನೂ ಸರಿಯಾಗಿ ಹೇಳುತ್ತಾನೆ. ಆದರೆ ಸಭೆಯಲ್ಲಿ ವಾಗ್ವೈಭವವನ್ನು ಮೆರೆಸಲಾರ. ಇಂತಹ ಪಂಡಿತರನ್ನು ಪಂಪನು ಮನಸ್ಸಿನಲ್ಲಿಟ್ಟುಕೊಂಡಿರಬಹುದು. ಪಂಡಿತ ಶಬ್ದಕ್ಕೆ ಇನ್ನೊಂದು ಅರ್ಥ ವಿಶೇಷವೂ ಉಂಟು. ಭಗವದ್ಗೀತೆಯಲ್ಲಿ 'ಸಾಂಖ್ಯಯೋಗೌ ಪೃಥಗ್ ಬಾಲಾಃ ಪ್ರವದಂತಿ ನ ಪಂಡಿತಾಃ', 'ಪಂಡಿತಾಃ ಸಮದರ್ಶಿನಃ' ಎಂಬಲ್ಲಿ ಈ ಶಬ್ದದ ಬಳಕೆಯಾಗಿದೆ. ಪಂಡಾ ಎಂದರೆ ಆತ್ಮವಿಷಯಕವಾದ ಬುದ್ಧಿ. ಅದುಳ್ಳವನು ಪಂಡಿತ. ಆತ್ಮಜ್ಞಾನಿಯೆಂದರ್ಥ. ಆತ್ಮಜ್ಞಾನಿಯು ಸಮಸ್ತ

ವಿದ್ವಾಂಸರಿಗಿಂತ ಶ್ರೇಷ್ಠನಾದವನು. ಷಂಪಕವಿಯು ಜ್ಞಾನಿ ಎಂಬ ಅರ್ಥದಲ್ಲಿ ಉಳಿದವರಿಗಿಂತ ವಿಶಿಷ್ಟನಾದವನೆಂದು ಈ ಅರ್ಥದಲ್ಲಿ ಬಳಸಿರುವ ಸಾಧ್ಯತೆ ಇದೆ. ಹೀಗೆ ಒಂದು ವಿಶೇಷವನ್ನು ಹೇಳಿ ಪಂಪನ ಪ್ರಯೋಗವನ್ನು ಸಮರ್ಥಿಸಬೇಕಾಗುತ್ತದೆ.

ಇನ್ನು 'ನೆಗಳ್ದ ಮಾತರಿವವರು' ಎಂದರೆ ಯಾರು ? ಇದಕ್ಕೆ ಅನೇಕ ಅರ್ಥ ಸಾಧ್ಯ. ಇನ್ನೊಬ್ಬರು ಆಡಿದ ನುಡಿಯ ಗೂಢಾರ್ಥವನ್ನು ಗ್ರಹಿಸ ಬಲ್ಲವನು ಎಂಬುದೊಂದು. ಸಮಯೋಚಿತವಾಗಿ ಥಟ್ಟನೆ ಎರಡು ಮಾತು ಗಳನ್ನು ಸಮರ್ಪಕವಾಗಿ ಹೇಳಬಲ್ಲವನು ಎಂಬುದಿನ್ನೊಂದು. ಎಂತಹ ಸಂದರ್ಭದಲ್ಲಿಯೂ ಚಮತ್ಕಾರಿಯಾದ ಮಾತನ್ನಾಡಿ ನಗಿಸಬಲ್ಲವನು ಎಂಬುದು ಮತ್ತೊಂದು. ಈ ವಿಧದಲ್ಲಿ ಮಾತಾಡುವುದಕ್ಕೆ ಪಾಂಡಿತ್ಯದ ಅಪೇಕ್ಷೆ ಏನೂ ಇಲ್ಲ. ಕೆಲವರಿಗೆ ನಿಸರ್ಗದತ್ತವಾಗಿ ಇಂತಹ ಕಲೆ ಒಲಿದಿರುತ್ತದೆ. ಇವರೆಲ್ಲ ರನ್ನೂ ಮಾತರಿವವರ ಗುಂಪಿನಲ್ಲಿ ಸೇರಿಸಿಕೊಳ್ಳಬಹುದು. ಈ ಜನರು ಕವಿ, ವಾದಿ, ವಾಗ್ಮಿ ಪಂಡಿತರಲ್ಲಿ ಸೇರತಕ್ಕವರಲ್ಲವೆಂದು ಪೃಥಕ್ಕರಿಸುವುದು ಯುಕ್ತವೇ ಆಗುತ್ತದೆ. ಸ್ಥಿತಸ್ಯ ಗತಿಶ್ಚಿಂತನೀಯಾ – ಎಂದು ಸಂಸ್ಕೃತದಲ್ಲಿ ಒಂದು ನ್ಯಾಯವಿದೆ. ಒಂದು ಗ್ರಂಥದಲ್ಲಿ ಒಂದು ಶಬ್ದ ಅಥವಾ ವಾಕ್ಯವು ಅನಾವಶ್ಯಕವೊ ಪುನರುಕ್ತವೋ ಪ್ರಕೃತಕ್ಕೆ ಹೊಂದದೆ ಇರುವಂತಹುದೋ ಆಗಿರುವುದು ಸಂಭವ. ಅಂತಹ ಪ್ರಸಂಗದಲ್ಲಿ ಯಾವುದಾದರೊಂದು ಕ್ರಮ ದಿಂದ ಅದನ್ನು ಸಮರ್ಥಿಸಬೇಕು ಎಂದು ಈ ನ್ಯಾಯದ ತಾತ್ಪರ್ಯ.

ನಮಗೆ ಪ್ರಕೃತವಾದದ್ದು ವಾದಿಯ ವಿಷಯ. ವಾದಿ ಎನ್ನುವುದು ಸಂಸ್ಕೃತ ಶಬ್ದ. ವದತಿ ಇತಿ ವಾದೀ – ಎಂದು ಶಬ್ದದ ವ್ಯುತ್ಪತ್ತಿ. ಕರ್ತ್ರರ್ಥದಲ್ಲಿ ವದ ಧಾತುವಿನ ಮೇಲೆ 'ಣಿನಿ' ಎಂಬ ಪ್ರತ್ಯಯ ಬಂದಿದೆ. ಮಾತಾಡತಕ್ಕವನು ಎಂದು ಶಬ್ದಾರ್ಥ. ಹಾಗಾದರೆ ಮಾತಾಡಬಲ್ಲವರೆಲ್ಲರೂ ಮಾತಾಡುತ್ತಾರೆ. ಅವರೆಲ್ಲರೂ ವಾದಿಯೆನಿಸುತ್ತಾರೊ ? ವಾದಮಾಡ ತಕ್ಕವರು–ಮೇಲಿಂದ ಮೇಲೆ ಯುಕ್ತಿಗಳನ್ನೊಡ್ಡಿ ಎದುರಾಳಿಗೆ ಉತ್ತರ ಹೇಳತಕ್ಕವರು – ವಾದಿಗಳೆನಿಸುತ್ತಾರೆ. ಆದ್ದರಿಂದ ವಾದಿಶಬ್ದವು ಅರ್ಥ ವಿಶೇಷದಲ್ಲಿ ರೂಢವಾಗಿದ್ದು ಯೋಗರೂಢವೆನಿಸುತ್ತದೆ. ಇದು ಕೇವಲ

ಯೌಗಿಕ ಶಬ್ದವಲ್ಲ. ವಾಸ್ತವವಾಗಿ ವದತೇ ಇತಿ ವಾದೀ ಎಂದು ವಿಗ್ರಹಿಸುವುದು ಉತ್ತಮಪಕ್ಷ. ವದಧಾತು ಪರಸ್ಮೈಪದಿಯಾದ್ದರಿಂದ ವದತಿ ಎನ್ನುವುದು ಸಾಮಾನ್ಯವಾದ ಅರ್ಥ. ಅರ್ಥವಿಶೇಷದಲ್ಲಿ ಆತ್ಮನೇಪದ ಬರುತ್ತದೆ. ಆಗ ವದತೇ ಎಂದು ರೂಪ. ಅರ್ಥ ವಿಶೇಷ ಯಾವುದು ? 'ಭಾಸನೋಪಸಂಭಾಷಾ ಜ್ಞಾನ ಯತ್ನ ವಿಮತ್ಯುಪಮಂತ್ರಣೇಷು ವದಃ' (೧-೩-೪೭) ಎಂದು ಪಾಣಿನಿ ಸೂತ್ರವಿದೆ. ಭಾಸನ ಮೊದಲಾದ ಅರ್ಥಗಳಲ್ಲಿ ವದ ಧಾತುವಿಗೆ ಆತ್ಮನೇಪದ ಬರುತ್ತದೆಯೆಂದು ಸೂತ್ರಾರ್ಥ. ಪ್ರಕೃತದಲ್ಲಿ ನಮಗೆ ಬೇಕಾದದ್ದು ಭಾಸನ, ಜ್ಞಾನ – ಎಂಬ ಎರಡು ಅರ್ಥಗಳು. ಭಾಸನವೆಂದರೆ ತನ್ನ ಪ್ರತಿಭೆಯಿಂದ ಪ್ರಕಾಶಿಸುವುದು. ಉದಾ : ಶಾಸ್ತ್ರೇ ವದತೇ. ಶಾಸ್ತ್ರದ ವಿಷಯದಲ್ಲಿ ಪ್ರತಿಭೆಯಿಂದ ಪ್ರಕಾಶಿಸುತ್ತ ಮಾತಾಡುತ್ತಾನೆ ಎಂದರ್ಥ. ಜ್ಞಾನಾರ್ಥವನ್ನಿಟ್ಟುಕೊಂಡರೆ ಶಾಸ್ತ್ರವನ್ನು ಚೆನ್ನಾಗಿ ತಿಳಿದು ಮಾತಾಡುತ್ತಾನೆ ಎಂದರ್ಥ. ವಾದಿಯಲ್ಲಿ ಭಾಸನ, ಜ್ಞಾನವೆರಡೂ ಇರಬೇಕಾದವು. ಆದಕಾರಣ ವದತೇ ಇತಿ ವಾದೀ ಎಂದು ವಿಗ್ರಹಿಸುವುದು ಯುಕ್ತ. ವಾದಿಯಿದ್ದಮೇಲೆ ಪ್ರತಿವಾದಿ ಇರಬೇಕಷ್ಟೆ. ಪ್ರತಿವದತೀತಿ ಪ್ರತಿವಾದೀ. ವಾದಿಯ ಮಾತಿಗೆ ಪ್ರತಿಯಾಗಿ ಉತ್ತರಕೊಡತಕ್ಕವನು ಪ್ರತಿವಾದಿ. ಇನ್ನೊಂದು ಅರ್ಥವಿಶೇಷ ಉಂಟು. ಪ್ರತಿಯೆಂಬ ಉಪಸರ್ಗವಿರುವುದರಿಂದ ತಾಚ್ಛೀಲ್ಯವೆಂದು ಅರ್ಥವಿಶೇಷದಲ್ಲಿಯೂ ಹಿಂದೆ ಹೇಳಿದ ಣಿನಿ ಪ್ರತ್ಯಯ ಬರಬಹುದು. ಆಗ ಪ್ರತಿವಾದ ಮಾಡುವ ಸ್ವಭಾವದವನೆಂದು ಅರ್ಥ. ಆಗ ಪ್ರತಿವದತೀತಿ ಪ್ರತಿವಾದೀ, ಪ್ರತಿ ವದತೇ ಇತಿ ಪ್ರತಿವಾದೀ ಎಂದು ಎರಡು ವಿಧದಲ್ಲಿಯೂ ವಿಗ್ರಹ ಹೇಳಲು ಶಕ್ಯತೆ ಇದೆ.

ಲೌಕಿಕ ವಿಷಯದಲ್ಲಿಯೂ ವಾದಿ ಪ್ರತಿವಾದಿಗಳಿರಬಹುದು. ನ್ಯಾಯಾಲಯದಲ್ಲಿ ನಡೆಯುವ ವಾದ ಪ್ರತಿವಾದಗಳು ಲೋಕವ್ಯವಹಾರಕ್ಕೆ ಸಂಬಂಧಿಸಿದವು. ನ್ಯಾಯಾಲಯದ ವಾದಿ ಪ್ರತಿವಾದಿಗಳೆಂದರೆ ವಕೀಲರ ಕಕ್ಷಿದಾರರು. ವಾದ ಪ್ರತಿವಾದಗಳನ್ನು ಮಾಡತಕ್ಕವರು ವಕೀಲರೇ. ಯಾರ ಪರವಾಗಿ ಅವರು ವಕಾಲತ್ತನ್ನು ವಹಿಸಿ ಮಾತಾಡುತ್ತಾರೋ ಆ ಕಕ್ಷಿದಾರರನ್ನೇ ವಾದಿಯೆಂದೂ ಪ್ರತಿವಾದಿಯೆಂದೂ ವ್ಯವಹರಿಸುತ್ತಾರೆ. ನ್ಯಾಯಾಲಯದಲ್ಲಲ್ಲದೆ

ಹೊರಗಡೆಯಲ್ಲಿಯೂ ವಾದವೂ ಪ್ರತಿವಾದವೂ ನಡೆಯಬಹುದು. ಇತಿಹಾಸ ಪುರಾಣಗಳಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಇದನ್ನು ಸಂವಾದವೆಂದು ಕರೆಯುವ ರೂಢಿ ಇದೆ. ರಾಮಾಯಣದಲ್ಲಿ ವಾಲಿ ಸುಗ್ರೀವರ ಸಂವಾದ, ಶ್ರೀರಾಮ ವಾಲಿಗಳ ಸಂವಾದ, ಸೀತಾ ರಾವಣ ಸಂವಾದ, ಸೀತಾ ಹನುಮಂತರ ಸಂವಾದ, ಹನೂಮದ್ರಾವಣ ಸಂವಾದ – ಇವು ಪ್ರಸಿದ್ಧವಾದವು. ಮಹಾಭಾರತದಲ್ಲಿ ಅಂಬಾ ಭೀಷ್ಮಸಂವಾದ, ದ್ರೌಪದೀ ಯುಧಿಷ್ಠಿರ ಸಂವಾದ, ಶ್ರೀ ಕೃಷ್ಣ ದುರ್ಯೋಧನ ಸಂವಾದ, ಶ್ರೀ ಕೃಷ್ಣ ಕರ್ಣರ ಸಂವಾದ, ಕರ್ಣ ಶಲ್ಯ ಸಂವಾದ, ಭೀಮ ದುರ್ಯೋಧನ ಸಂವಾದಗಳು ಪ್ರಸಿದ್ಧವಾಗಿವೆ. ಈ ಸಂವಾದಗಳಿಗೆ ಯಕ್ಷಗಾನದ ತಾಳ ಮದ್ದಲೆ ಪ್ರಸಂಗಗಳಲ್ಲಿ ಕಳೆ ಏರುತ್ತದೆ. ಅರ್ಥಗಾರರ ವಾದ ಕೌಶಲವನ್ನು ಅಲ್ಲಿ ನೋಡಬೇಕು. ವಾದ ಪ್ರತಿವಾದಗಳಲ್ಲಿ ಕೆಲವು ಅರ್ಥಗಾರರು ತುಂಬ ವಿಖ್ಯಾತರಾಗಿದ್ದಾರೆ. ಯಕ್ಷಗಾನ ಪ್ರಸಂಗದಲ್ಲಿ ಶ್ರೋತೃಗಳು ಸೇರುವುದು ಮುಖ್ಯವಾಗಿ ಈ ಅರ್ಥಗಾರರ ವಾದ ಪ್ರತಿವಾದ ಕೌಶಲವನ್ನು ಕೇಳುವುದಕ್ಕಾಗಿಯೇ. ಮಾದರಿಗಾಗಿ ಒಂದು ಚಿಕ್ಕ ಸಂವಾದವನ್ನು ನೋಡೋಣ. ಸುಂದರಕಾಂಡದಲ್ಲಿ ಹನುಮಂತ ರಾವಣನ ಸಭೆಯಲ್ಲಿ ಬಂದಿಯಾಗಿ ನಿಂತಿದ್ದಾನೆ. ಅವರಿಗೆ ಈ ಪ್ರಕಾರ ಪ್ರಶ್ನೋತ್ತರಗಳು ನಡೆಯುತ್ತಿವೆ.

**ರಾವಣ :** ಎಲೈ, ಯಾರು ನೀನು ?

**ಹನುಮಂತ :** ನಿನಗೆ ಕಾಣಿಸುವುದಿಲ್ಲವೆ ? ಇಪ್ಪತ್ತು ಕಣ್ಣುಗಳಿದ್ದರೂ ನಾನು ಯಾರೆಂದು ಕಾಣಲಾರೆಯಾ ?

**ರಾವಣ :** ನೀನೊಬ್ಬ ಮಂಗ ಎಂಬುದು ಕಾಣುತ್ತಿದೆ. ನೀನು ಯಾವ ಪಕ್ಷದಿಂದ ಬಂದಿದ್ದೀಯೆ ಎಂದು ಕೇಳುತ್ತಿದ್ದೇನೆ.

**ಹನುಮಂತ :** ಪಕ್ಷ ಏರುವುದು ಪಕ್ಷಿಗಳಿಗೆ, ನಾನು ವಾನರ, ನನಗೆ ಯಾವ ಪಕ್ಷವೂ (ರೆಕ್ಕೆಯೂ) ಇಲ್ಲ !

**ರಾವಣ :** ಯಾರ ಪ್ರೇರಣೆಯಿಂದ ಬಂದಿದ್ದೀಯೆ ?

**ಹನುಮಂತ :** ಸ್ವಪ್ರೇರಣೆಯಿಂದ.

ರಾವಣ : ಏನನ್ನೋ ಕೇಳಿದರೆ ಏನನ್ನೋ ಹೇಳುತ್ತಾನೆ. ನಿನ್ನ ಸ್ವಾಮಿ ಯಾರು ?

ಹನುಮಂತ : ಕಿಷ್ಕಿಂಧಾಧಿಪತಿಯಾದ ಸುಗ್ರೀವ ಮಹಾರಾಜ.

ರಾವಣ : ಓಹೋ ! ಸುಗ್ರೀವನ ಗುಲಾಮ ನೀನು !

ಹನುಮಂತ : ಸುಗ್ರೀವನ ಅಣ್ಣ ವಾಲಿಯ ಗುಲಾಮ ನೀನು ಎಂಬುದನ್ನು ಮರೆಯಬೇಡ !

ರಾವಣ : (ಸಿಟ್ಟಿನಿಂದ) ನನ್ನ ನಗರಕ್ಕೆ ಕಳ್ಳತನದಿಂದ ಏಕೆ ಬಂದೆ ?

ಹನುಮಂತ : ಕಳ್ಳತನದಿಂದ ಬರಲಿಲ್ಲ. ಲಂಕೆಯ ಕಾವಲುಗಾರ್ತಿ ಲಂಕಿಣಿಯನ್ನು ಗುದ್ದಿ ಅವಳಿಗೆ ತಿಳಿಸಿ ಬಂದಿದ್ದೇನೆ !

ರಾವಣ : ಹಾಗಿದ್ದರೆ ದರೋಡೆಕಾರ ನೀನು.

ಹನುಮಂತ : ನಾನು ಯಾವ ವಸ್ತುವನ್ನೂ ದೋಚಲಿಲ್ಲ. ದರೋಡೆಕಾರ ಹೇಗಾಗುತ್ತೇನೆ ?

ರಾವಣ : (ಕ್ರೋಧದಿಂದ) ನನ್ನ ಅನುಮತಿಯಿಲ್ಲದೆ ಅಶೋಕವನವನ್ನೇಕೆ ಪ್ರವೇಶಿಸಿದೆ ?

ಹನುಮಂತ : ಶ್ರೀರಾಮನ ಅನುಮತಿ ಇಲ್ಲದೆ ಅವನ ಪರ್ಣಶಾಲೆಯನ್ನು ನೀನೇಕೆ ಪ್ರವೇಶಿಸಿದೆ ?

ರಾವಣ : ಸೀತೆಯನ್ನು ಎಳೆದು ತರುವುದಕ್ಕಾಗಿ ಹೋದೆ.

ಹನುಮಂತ : ಆ ಸೀತಾದೇವಿಯನ್ನೇ ನೋಡುವುದಕ್ಕಾಗಿ ನಾನು ಹೋದೆ !

ಈ ರೀತಿಯಲ್ಲಿ ಪ್ರಶ್ನೋತ್ತರಗಳನ್ನು ಬೆಳೆಸಲಾಗುತ್ತದೆ. ಇದೊಂದು ವಾದದ ಕ್ರಮ. ಕವಿಯೂ ವಾದಿಯಾಗಿರಬಲ್ಲನು. ಅವನು ತನ್ನ ಕಾವ್ಯದಲ್ಲಿ ಚಿತ್ರಿಸಿದ ಪಾತ್ರಗಳ ಮೂಲಕ ವಾದ ಪ್ರತಿವಾದಗಳನ್ನು ಚಮತ್ಕಾರವಾಗಿ ಬೆಳೆಸಿ ಕಾವ್ಯಕ್ಕೆ ಕಳೆಯೇರಿಸುತ್ತಾನೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಇವಕ್ಕೆ ಸೊಗಸಾದ ನಿದರ್ಶನ ಸಿಗುತ್ತದೆ. ಹರಿಶ್ಚಂದ್ರನು ಅರಣ್ಯಕ್ಕೆ ಬಂದು ಬೇಟೆಯಾಡಿ ದಣಿದು ವಿಶ್ವಾಮಿತ್ರಮುನಿಯ ಆಶ್ರಮದ ಪರಿಸರಕ್ಕೆ ಬಂದಿದ್ದಾನೆ. ಆಗ ವಿಶ್ವಾಮಿತ್ರನ ಮಾಯಾಕನ್ನಿಕೆಯರಾದ ಹೊಲತಿಯರು

ರಾಜನೆದುರು ಒಂದು ಮಧುರವಾಗಿ ಹಾಡುತ್ತಾರೆ. ಆಗ ಸಂತೃಪ್ತನಾಗಿ 'ಸರ್ವಾಭರಣಮಂ ಗಾಣರಾಣಿಯರಿಗಿತ್ತನು'. ಹರಿಶ್ಚಂದ್ರನನ್ನು ಕಾಡಿಸಿ ವಿಶ್ವಾಮಿತ್ರನ ಬಲೆಯೊಳಗೆ ಸಿಕ್ಕಿಸಬೇಕೆಂದೇ ಬಂದ ಆ ಕನ್ನಿಕೆಯರು ಆಭರಣಗಳಿಂದ ಈ ಸೆಕೆಯಲ್ಲಿ ಪ್ರಯೋಜನವೇನೆಂದು ನುಡಿದು, ರಾಜನ ಮುತ್ತಿನ ಶ್ವೇತಚ್ಛತ್ರವನ್ನೇ ಬೇಡುತ್ತಾರೆ. ಆ ಸಂದರ್ಭದಲ್ಲಿ ಹರಿಶ್ಚಂದ್ರನಿಗೂ ಹೊಲತಿಯರಿಗೂ ಈ ರೀತಿ ಸಂವಾದ ನಡೆಯುತ್ತದೆ.

ರಾಜ : ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದೊಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದರ ಕೆಳಗೆ ।
ಕವಿವ ನೆಳಲೊಳಗಾವನಿರ್ದನಾತಂಗೆ ತಾಂ
ತವಿಲೆಡರು ಬಡತನಂ ರೋಗವಪಕೀರ್ತಿ ಪರಿ
ಭವಭಯಂ ಹರೆವುದಿದನಱಿದಱಿದು ಸತ್ತಿಗೆಯ ಕೊಡಬಹುದೆ
ಹೇಳೆಂದನು ॥

ಕನ್ನಿಕೆಯರು: ಗಾಡಿಕಾತಿಯರಾಗಿ ವಿಟಲಕ್ಷಣಂ ಮನದ
ಪಾಡಱಿಯಲೆಂದೆವಱಿಂ ಸಲುಗೆ ಶಂಕಿಸದೆ
ನೀಡಿದೊಡೆ ಕೀರ್ತಿ ಕರುಣಿಸಿ ಕೊಡಲು ಪುಣ್ಯವೀ ಸತ್ತಿಗೆಯೊಳಹು
ದೆಂದರು ॥

ರಾಜ : ಅನುನಯದೊಳೆಲ್ಲಮಂ ಕೊಡಬಹುದು ಬಿಡಬಹುದು
ಜನನಿಯಂ ಜನಕನಂ ನಲ್ಲಳಂ ದೈವಮಂ
ಮನವಾರೆ ನಂಬಿ ನಚ್ಚಿರ್ದ ಪರಿವಾರಮಂ ಕೊಡುವ ಬಿಡುವತಿಕಲಿಗಳು ।
ಜನರೊಳಗೆ ಜನಿಸರೆಂದೆನಲು–

ಕನ್ನಿಕೆಯರು: ......................ನೀನೀಗ ಪೇ
ಳ್ದನಿತರೊಳು ಬೇಡಿದಡೆ ಕೊಡಬೇಡ ಕೊಡೆಯನೀ
ಯೆನೆ ಲೋಭವೇಕರಸಯೆನಲಿದಲ್ಲದೆ ಬೇರೆ ಮಾತೆಪಿತರಿಲ್ಲೆಂದನು ॥

ರಾಜ : ಲೋಗರಿಗೆ ಕೊಡಬಾರದಾಗಿ ಸತಿ ವಂಶಗತ
ವಾಗಿ ಬಂದುದಱಿಂದ ತಂದೆ ಪಟ್ಟವ ಕಟ್ಟು
ವಾಗಲರ್ಚಿಸಿಕೊಂಬುದಾಗಿ ದೈವಂ ನೆಳಲ ತಂಪನೊಸೆದೀವುದಾಗಿ ।
ಸಾಗಿಸುವ ತಾಯ್ ಧುರದೊಳರಿಗಳಂ ನಡುಗಿಸುವು
ದಾಗಿ ಚತುರಂಗಬಲವೆನಿಸಿತೀ ಛತ್ರವೆಂ
ಬಾಗಳಿದನಱಿದಱಿದು ಬೇಡುವರನತಿಮರುಳರೆನ್ನರೇ ಮೂಜಗದೊಳು ॥

ಕನ್ನಿಕೆಯರು: ಇಳೆಯೊಳಗೆ ಹೆಸರುಳ್ಳ ದಾನಿಯೆಂಬುದನು ಕೇ
ಳ್ದೆಳಸಿ ಕಟ್ಟಾಸೆವಟ್ಟೆಯ್ತಂದು ಬೇಡಿ ನಿ
ಷ್ಫಲವಾಗದಂತೆ ನಾವತಿಮುಱುಗದಂತಳಲದಂತೆ ಬಿಸುಸುಯ್ಯದಂತೆ ।
ತಿಳಿದು ನೀನೆಮಗೆ ವಲ್ಲಭನಾಗಿ ಚಿತ್ತದು
ಮ್ಮಳಿಕೆಯಂ ಕಳೆ ಹರಿಶ್ಚಂದ್ರಭೂನಾಥಯೆಂ
ದಳವಳಿದು ಬಾಯ್ಬಿಟ್ಟು ಕೈಮುಗಿದು ನುಡಿವರೊಲವಿಂದನಾಮಿಕ
ಸತಿಯರು ॥

ರಾಜ : ಲಲಿತವಸುಮತಿ ಹುಟ್ಟಿವಂದು ಹುಟ್ಟಿದ ಸೂರ್ಯ
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ
ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕೊಡುವ ಭೂಪರಿಲ್ಲೆಂದು
ತನಕ ।
ಹೊಲತಿಯರು ಬಂದಾವು ಸತಿಯರಾದಪ್ಪೆವೆಂ
ಬುಲಿಹವೆಂಬುದು ಬಂದ ಕಾಲಗುಣವೋ ನಿಂದ
ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು ಕೋಪಿಸಿದ
ನವನೀಶನು ॥

ಕನ್ನಿಕೆಯರು: ಪಾವನಕ್ಷೀರಮಂ ಕೊಡುವ ಕೆಚ್ಚಲ ಮಾಂಸ
ವಾವ ಲೇಸಿನಿದುಳ್ಳ ಮಧುವನೊಸೆದೀವ ನೊಳ
ವಾವ ಲೇಸಧಿಕ ಕಸ್ತೂರಿಯಂ ಕೊಡುವ ಮೃಗನಾಭಿ ತಾನಾವ ಲೇಸು ।
ದೇವರಿಗೆ ಸಲ್ಲವೇ ಉತ್ತಮಗುಣಂಗಳಿ
ರ್ದಾವ ಕುಂದಂ ತಳೆಯಲಾಱವವನೀಶ ಕೇಳ್
ಭಾವಿಸುವೊಡಿಂದೆಮ್ಮ ರೂಪು ಜವ್ವನವಿರಲು ಕುಂದಮಾತೇಕೆಂದರು ॥

ರಾಜ : ಆಕ್ಕಕ್ಕು ಬಚ್ಚಲುದಕಂ ತಿಳಿದಡಾರ ಮೀ
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳಡಾವನೂ
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ
ಯೋಗ್ಯಂ ।
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ
ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವೀ ಮಾತು ತಾ
ಹೊಲೆಯೆಂದನು ॥

ಕನ್ನಿಕೆಯರು: ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪ ನೆಱೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ ಮುಡಿಗಳಿಂ ಸುಳಿವ
ತಂಗಾಳಿಯಿಂ ॥
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯುಂಟಾಯ್ತು
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮವುವೊಂದಧಿಕವೇ
ಎಂದರು ॥

ರಾಜ : ಕಂಡಱಿವವ್ವೆಸಲೇ ನಯನೇಂದ್ರಿಯಂ ಘ್ರಾಣ
ಕೊಂಡಱಿವವ್ವೆಸಲೇ ವಾಸನೆಯ ಕರ್ಣಂಗ
ಳುಂಡಱಿವವ್ವೆಸಲೇ ಶಬ್ದಮಂ ದೂರದಿಂದಲ್ಲದವು ಮುಟ್ಟಲಿಲ್ಲ ।
ಭಂಡತನವೀ ಮಾತಿದಕ್ಕೆಯುಪಮಾನವೇ
ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದಡಂ
ಕಂಡು ವಾಸಿಸಿದಡಂ ಬೆಂದವೇ ಕಾಳುಗೆಡೆಯದೆ ಹೋಗಿ ನೀವೆಂದನು ॥

ಹೀಗೆ ಮುಂದುವರಿಯುತ್ತವೆ ಇವರ ಪ್ರಶ್ನೋತ್ತರಗಳು.

ಇದೊಂದು ವಾದದ ವೈಖರಿಯೇ ಆಗಿದೆ. ಇಲ್ಲಿ ಕವಿಯು ಕಾವ್ಯದ ಸೊಗಸನ್ನು ವಾದಕ್ಕೆ ಸೇರಿಸಿ ಸಹೃದಯರು ತಲೆದೂಗುವಂತೆ ಮಾಡಿದ್ದಾನೆ. ಹೀಗೆಯೇ ಭರತೇಶ ವೈಭವ, ಗದುಗಿನ ಭಾರತ, ತೊರವೆ ರಾಮಾಯಣ – ಮೊದಲಾದ ಕಾವ್ಯಗಳಲ್ಲಿಯೂ ಕವಿಪ್ರತಿಭೋನ್ಮೀಲಿತ ಸಂವಾದಗಳನ್ನು ಕಾಣಬಹುದು.

ಪಂಪಾದಿಕವಿಗಳು ರಾಜಸಭೆಗಳಲ್ಲಿ ವಾದಿಗಳು ವಿರಾಜಿಸುತ್ತಿದ್ದರೆಂದು ವರ್ಣಿಸಿದ್ದಾರೆ. ಅವರು ಹೇಳುವ ವಾದಿಗಳು ನಾನಾಶಾಸ್ತ್ರಗಳಲ್ಲಿ ಪರಿಣತರಾದ ವಾದಿಗಳು. ಹೊರ ದೇಶಗಳಿಂದ ಬಂದ ವಿದ್ವಾಂಸರನ್ನು ಎದುರಿಸಿ ರಾಜ ಸಭೆಯಲ್ಲಿ ವಾದಮಾಡಿ ಜಯಿಸಬಲ್ಲವರು. ಭೂಪತಿಗಳು ಅಂತಹ ವಾದ ಗೋಷ್ಠಿಯನ್ನೇರ್ಪಡಿಸಿ ವಾದದಲ್ಲಿ ಗೆದ್ದವರಿಗೆ ಚಿನ್ನದ ಕಡಗಗಳನ್ನಿತ್ತು ಪದಕಗಳಿಂದ ಸಂಮಾನಿಸುತ್ತಿದ್ದರು. ವಾದೀಭಸಿಂಹ, ತರ್ಕಚೂಡಾಮಣಿ,

ಪ್ರತಿವಾದಿಭಯಂಕರ, ಪಂಡಿತರತ್ನ–ಇತ್ಯಾದಿ ಬಿರುದುಗಳನ್ನು ಸಹ ಕೊಡುತ್ತಿದ್ದರು. ವಿವಿಧಶಾಸ್ತ್ರಗಳಲ್ಲಿ ಪಾರಂಗತರಾದ ಪಂಡಿತರು ವಾದಮಾಡುವ ಹುಮ್ಮಸ್ಸಿನಿಂದಲೇ ಸಭೆಯಿಂದ ಸಭೆಗೆ ವಾದಮಾಡುವ ಉದ್ದೇಶದಿಂದಲೇ ರಾಷ್ಟ್ರವ್ಯಾಪಿಯಾಗಿ ಸಂಚಾರಮಾಡುತ್ತಿದ್ದುದುಂಟು ಕೀರ್ತಿಲಾಭ, ಧನಲಾಭಗಳೆರಡೂ ಅವರ ಉದ್ದೇಶ. ದೇಹಬಲವನ್ನು ಪ್ರದರ್ಶಿಸುವುದಕ್ಕಾಗಿ ಜಟ್ಟಿಗಳು ಇದೇ ರೀತಿಯಲ್ಲಿ ಸಂಚರಿಸುತ್ತಿದ್ದರು. ವಾದಗೋಷ್ಠಿಯಾದರೋ ಪಂಡಿತರ ಬುದ್ಧಿಬಲವನ್ನೂ ವಿದ್ಯಾಬಲವನ್ನೂ ಪ್ರದರ್ಶಿಸುವ ಜಟ್ಟಿಕಾಳಗವೇ ಆಗಿತ್ತು. ವಾದಮಾಡುವ ಸಾಮರ್ಥ್ಯವುಳ್ಳ ವಿದ್ವಾಂಸರನ್ನು ತಮ್ಮ ಆಸ್ಥಾನವಿದ್ವಾಂಸರನ್ನಾಗಿ ನೇಮಿಸಿಕೊಳ್ಳುವುದು ಅರಸರಿಗೆ ಒಂದು ಹೆಮ್ಮೆಯ ಸಂಗತಿಯಾಗಿತ್ತು. ಈ ಕಾರಣದಿಂದಲೇ ನವೀನ ತರ್ಕಶಾಸ್ತ್ರವು ಸರ್ವಾಂಗ ಪರಿಪುಷ್ಟವಾಗಿ ಬೆಳೆದದ್ದು. ಬೇರೆಬೇರೆ ದಾರ್ಶನಿಕ ಗ್ರಂಥಗಳನ್ನು ಖಂಡಿಸಿ ತಮ್ಮ ದರ್ಶನವನ್ನು ಬೆಳೆಸುವ ಉದ್ದೇಶದಿಂದ ತರ್ಕಶಾಸ್ತ್ರವು ಬೆಳೆಯಿತು. ಬೌದ್ಧರಲ್ಲಿ ಧರ್ಮಕೀರ್ತಿ, ದಿಙ್ನಾಗ ಮೊದಲಾದವರು ಬೌದ್ಧ ತರ್ಕವನ್ನು ಬೆಳೆಸಿದರು. ಜೈನರಲ್ಲಿ ಉಮಾಸ್ವಾಮಿ, ಭಟ್ಟಾಕಳಂಕ, ಅಮೃತಚಂದ್ರಸೂರಿ ಮೊದಲಾದವರಿಂದ ಜೈನತರ್ಕ ಬೆಳೆಯಿತು. ವೈದಿಕದರ್ಶನಾನುಸಾರಿಯಾದ ತರ್ಕಶಾಸ್ತ್ರವು ಅತಿವಿಸ್ತೃತವಾಗಿದೆ. ವಾಚಸ್ಪತಿಮಿಶ್ರ, ಉದಯನಾಚಾರ್ಯ, ಉದ್ಯೋತಕರ ಮೊದಲಾದವರು ಬೌದ್ಧ ಜೈನರ ವಾದಕ್ಕೆ ಉತ್ತರ ಹೇಳುವುದಕ್ಕಾಗಿ ಗ್ರಂಥಗಳನ್ನು ರಚಿಸಿ ವಾದಗ್ರಂಥಗಳಿಗೆ ಪೀಠಿಕೆ ಹಾಕಿದರು. ಅನಂತರ ಗಂಗೇಶೋಪಾಧ್ಯಾಯ, ಜಗದೀಶ, ಗದಾಧರ – ಮೊದಲಾದವರು ವಾದಗ್ರಂಥಗಳನ್ನು ಅದ್ಭುತ ರೀತಿಯಲ್ಲಿ ಬೆಳೆಸಿದರು. ಜಯದೇವ ಎಂಬ ಒಬ್ಬ ತಾರ್ಕಿಕನು ತನ್ನ ಒಂದು ವಾದವನ್ನು ಸ್ಥಾಪಿಸುವುದಕ್ಕಾಗಿ ಒಂದು ಪಕ್ಷದ ವರೆಗೆ (ಹದಿನೈದು ದಿನಗಳ ವರೆಗೆ) ವಾದಿಸಬಲ್ಲವನಾಗಿದ್ದನೆಂದೂ ಆದ್ದರಿಂದ ಅವನಿಗೆ ಪಕ್ಷಧರಮಿಶ್ರ ಎಂಬ ಹೆಸರು ಬಂದಿತೆಂದೂ ಹೇಳುತ್ತಾರೆ ! ನವೀನತರ್ಕದ ಪ್ರವೇಶದಿಂದ ವಾದಿಗಳಲ್ಲಿ ಒಂದು ಪರಿಷ್ಕಾರಯುಗವೇ ಪ್ರಾರಂಭವಾಯಿತು. ಪ್ರತಿಯೊಂದು ವಿಷಯಕ್ಕೂ ನಾನಾ ಸಂಬಂಧಗಳನ್ನು ಸೇರಿಸಿ, ಅವಚ್ಛೇದಕಾವಚ್ಛಿನ್ನಗಳೆಂಬ ಶಬ್ದಗಳನ್ನು ಮಾರುದ್ದ ಪಂಕ್ತಿಯಿಂದ ಲಕ್ಷಣವನ್ನು ಪರಿಷ್ಕರಿಸಲು ಹೋಡುವುದು ಈ ಪರಿಷ್ಕಾರದ

ಮುಖ್ಯ ಲಕ್ಷಣ. ಅಂತಹ ಪರಿಷ್ಕಾರದಲ್ಲಿ ಮತ್ತೆ ಒಂದು ದೋಷವನ್ನು ಹುಡುಕಿ ಪ್ರತಿವಾದಿಯು ಹೇಳುತ್ತಾನೆ. ಆಗ ವಾದಿಯು ಇನ್ನೊಂದು ವಿಶೇಷಣವನ್ನು ಕೊಟ್ಟು ತಾನು ಹೇಳಿದ ಲಕ್ಷಣವನ್ನು ಮತ್ತೆ ಪರಿಷ್ಕರಿಸುತ್ತಾನೆ ಹೀಗೆ ವಾದಪ್ರತಿವಾದಗಳು ಬೆಳೆಯುತ್ತವೆ. ಈ ಬಗೆಯ ವಾದಕ್ಕೆ ತೀವ್ರವಾದ ಬುದ್ಧಿಶಕ್ತಿ ಬೇಕು. ಆ ಪರಿಷ್ಕಾರವನ್ನು ಅರ್ಥಮಾಡಿಕೊಳ್ಳುವಾಗ ಸಾಮಾನ್ಯ ಜನರಿಗೆ ಗಿರ್ರೆಂದು ತಲೆ ತಿರಗಲಾರಂಭಿಸಿದರೆ ಅಚ್ಚರಿಯಿಲ್ಲ. ಈ ತಾರ್ಕಿಕರ ಹೊಡೆತದ ಪರಿಣಾಮವಾಗಿ ವೇದಾಂತ ವ್ಯಾಕರಣ ಶಾಸ್ತ್ರಗಳಲ್ಲಿಯೂ ಈ ಪದ್ಧತಿ ಪ್ರವೇಶಿಸಿತು. ಅಲಂಕಾರ ಶಾಸ್ತ್ರಕ್ಕೂ ಸಹ ಇದರ ಸೋಂಕು ವ್ಯಾಪಿಸಿತು.

ಗೌತಮರ ನ್ಯಾಯಸೂತ್ರದಲ್ಲಿ ಪ್ರಮಾಣ – ಪ್ರಮೇಯ – ಸಂಶಯ ಮುಂತಾದ ಹದಿನಾರು ಪದಾರ್ಥಗಳ ತತ್ತ್ವಜ್ಞಾನದಿಂದ ಮೋಕ್ಷವು ಲಭಿಸುತ್ತದೆ–ಎಂದು ಹೇಳಿದೆ. ಪದಾರ್ಥಗಳ ಸ್ವರೂಪವನ್ನು ನಿರ್ಣಯಿಸುವುದಕ್ಕೆ ಅವುಗಳಲ್ಲಿ ವಾದ-ಜಲ್ಪ – ವಿತಂಡಾ ಮೊದಲಾದವು ತುಂಬ ಉಪಯುಕ್ತವಾಗುತ್ತವೆ. 'ವಾದ – ವಾದಿ ಎಂಬ ಕೋಲಾಹಲಕ್ಕೆ ಮೂಲ ಕಾರಣವಾದದ್ದು ಇದು. ವಾದವೆಂದರೆ 'ತತ್ತ್ವಬುಭುತ್ಸೋಃ ಕಥಾ'. ಹಾಗೆಂದರೆ ವಸ್ತುತತ್ತ್ವವನ್ನರಿಯಬೇಕೆಂಬ ಇಚ್ಛೆಯುಳ್ಳವನ ಹೇಳಿಕೆ. ಇದು ಮುಂದಿನ ವಿಚಾರಗಳಿಗೆ ಅವಕಾಶಮಾಡಿಕೊಡುತ್ತದೆಯಾದ್ದರಿಂದ ಪ್ರಧಾನವಾದದ್ದು. ಭಗವದ್ಗೀತೆಯಲ್ಲಿ ಎಲ್ಲ ಪದಾರ್ಥಗಳಲ್ಲಿಯೂ ಶ್ರೇಷ್ಠನಾದವನು ನಾನು ಎಂದು ಶ್ರೀ ಕೃಷ್ಣನು ವಿವರಿಸುತ್ತಿರುವಾಗ 'ಅಧ್ಯಾತ್ಮವಿದ್ಯಾ ವಿದ್ಯಾನಾಂ ವಾದಃ ಪ್ರವದತಾಮಹಮ್' ಎಂದು ಹೇಳುತ್ತಾನೆ (೧೦.೩೨). 'ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆ ನಾನು, ಪ್ರವಕ್ತೃಗಳಲ್ಲಿ ವಾದವೇ ನಾನು' ಎಂದು ಆ ಮಾತಿನ ಅರ್ಥ. ವಾದಿಯಾಗಲಿ ಪ್ರತಿವಾದಿಯಾಗಲಿ ತಾನು ವಾದಿಸುವಾಗ ಜಲ್ಪ, ವಿತಂಡಾ, ಹೇತ್ವಾಭಾಸ ಮೊದಲಾದ ಯಾವುದೇ ದೋಷವು ಬಾರದಂತೆ ಬಹಳ ಎಚ್ಚರಿಕೆಯಿಂದಿರಬೇಕು. ದೋಷಯುಕ್ತವಾದ ಹೇಳಿಕೆಯನ್ನಿತ್ತರೆ ಅವನ 'ನಿಗ್ರಹ'ವಾಯಿತೆಂದು ತಿಳಿಯಬೇಕು – ಎಂದರೆ ವಾದದಲ್ಲಿ ಸೋತನೆಂದರ್ಥ. ಆದ್ದರಿಂದ ವಾದದಲ್ಲಿ ಸಂಭವಿಸುವ ಈ ದೋಷಗಳಿಗೆ 'ನಿಗ್ರಹಸ್ಥಾನ' ಎಂದು ಹೆಸರಿಟ್ಟಿದ್ದಾರೆ.

ಶಾಸ್ತ್ರೀಯವಾದ ವಾದ ವಿವಾದಗಳು ಈಗಲೂ ನಡೆಯುತ್ತವೆ. ಪಂಡಿತರ ಈ ಸಭೆಯನ್ನು ವಾಕ್ಯಾರ್ಥ ಸಭೆಯೆಂದು ಕರೆಯುವುದು ರೂಢಿಯಲ್ಲಿದೆ. ತರ್ಕ ವ್ಯಾಕರಣಾದಿ ಶಾಸ್ತ್ರಗಳಲ್ಲಿ ಒಬ್ಬನು ವಾದಿ, ಇನ್ನೊಬ್ಬ ಪ್ರತಿವಾದಿ ಇವರ ವಾದಗಳಲ್ಲಿ ದೋಷವೇನಾದರೂ ಸಂಭವಿಸಿತೆ-ಎಂಬುದನ್ನು ಪರಿಶೀಲಿಸಿ ತೀರ್ಪುಹೇಳುವ ಮಧ್ಯಸ್ಥನಾದ ಒಬ್ಬ ವಿದ್ವಾಂಸನಿರುತ್ತಾನೆ. ತೀರ್ಪುಗಾರನಾದ ಈ ವಿದ್ವಾಂಸನಿಗೆ ಘನಿಷ್ಠವಾದ ಪಾಂಡಿತ್ಯವಿದ್ದು ಉಭಯರಿಗೂ ಸಂಮತವಾಗಿರಬೇಕು. ಈ ಮಧ್ಯಸ್ಥನಾದ ವಿದ್ವಾಂಸನನ್ನು ಕ್ರಿಕೆಟ್ ಆಟಗಳಲ್ಲಿರುವ 'ಅಂಪೈರ್'ಗೆ (Umpire) ಹೋಲಿಸಬಹುದು. ಇದು ಬರಿಯ ಹೋಲಿಕೆ. ಅಂಪೈರ್ ಕ್ರೀಡಾಪಟುವಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ. ಆದರೆ ಶಾಸ್ತ್ರೀಯವಾದ ವಿವಾದಗಳಲ್ಲಿ ಮಧ್ಯಸ್ಥನಾಗತಕ್ಕವನು ಆಯಾ ಶಾಸ್ತ್ರದಲ್ಲಿ ಘನವಿದ್ವಾಂಸನೇ ಆಗಿರಬೇಕಾಗುತ್ತದೆ.

ಶಾಸ್ತ್ರಕಾರರು ಗೊತ್ತುಮಾಡಿ ವ್ಯವಸ್ಥೆಮಾಡಿರುವ ಈ ವಾದಪ್ರಕಾರವು ಅವಶ್ಯ ಮನನೀಯವಾದದ್ದು. ರಾಜಕೀಯವೇ ಮುಂತಾದ ಯಾವುದೇ ಲೌಕಿಕ ವಿಷಯದಲ್ಲಾಗಲಿ ಶಾಸ್ತ್ರವಿಷಯದಲ್ಲಾಗಲಿ ಗಂಭೀರವಾದ ಪ್ರಬಂಧವನ್ನು ರಚಿಸತಕ್ಕವರು ತಮ್ಮ ವಿಚಾರವನ್ನು ನಿರೂಪಿಸುವಾಗ ಈ ವಾದ ದೋಷಗಳು ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ವಿಶೇಷವಾಗಿ ವಕಾಲತ್ತನ್ನು ವಹಿಸಿ ನ್ಯಾಯಾಲಯಗಳಲ್ಲಿ ವಾದ ಹೂಡುವ ನ್ಯಾಯವಾದಿಗಳಿಗೂ ತೀರ್ಪುಕೊಡುವ ನ್ಯಾಯಾಧೀಶರಿಗೂ ಸಹ ಇದು ಉಪಯುಕ್ತವಾದದ್ದು. ಕನ್ನಡದಲ್ಲಿ ಈ ವಾದ ದೋಷಗಳನ್ನು ಇದುವರೆಗೆ ಯಾರೂ ವಿವರಿಸಿರುವಂತೆ ಕಾಣುವುದಿಲ್ಲ. ಆದ್ದರಿಂದ ಈ ಲೇಖನದಲ್ಲಿ ಈ ಪ್ರಕಾರಗಳನ್ನು ಈಗ ನಿರೂಪಿಸಲಾಗುತ್ತದೆ. ಈ ನಿರೂಪಣೆ ಸಾಮಾನ್ಯ ವಾಚಕರಿಗೂ ಅರ್ಥವಾಗಬೇಕೆಂಬ ಉದ್ದೇಶದಿಂದ ಯಥಾಶಕ್ತಿ ತಿಳಿಯಾದ ಭಾಷೆಯನ್ನು ಬಳಸಿದೆ. ಆದರೂ ವಿಷಯವು ಗಂಭೀರವಾದ್ದರಿಂದ ವಾಚಕರು ಸಾವಧಾನದಿಂದ ಗಮನಿಸಬೇಕು. ಇವುಗಳಲ್ಲಿ ಮುಖ್ಯವಾದದ್ದು ಹೇತ್ವಾಭಾಸ ಹೇತುವೆಂದರೆ ಸರಿಯಾದ ಕಾರಣ, ನಿಮಿತ್ತ. ಅದು ದೋಷರಹಿತವಾಗಿದ್ದರೆ ಸದ್ಧೇತುವೆನಿಸುತ್ತದೆ. ದೋಷ ಸಹಿತವಾಗಿದ್ದರೆ ಅಸದ್ಧೇತು-ಹೇತ್ವಾಭಾಸ ಎನಿಸುತ್ತದೆ. ಹೇತ್ವಾಭಾಸವೆಂದರೆ ಹೇತುವಿನಂತೆ ತೋರತಕ್ಕದ್ದು,

ಸರಿಯಾದ ಹೇತುವಲ್ಲದ್ದು. ಹೇತುವಿನಿಂದ ಉಂಟಾಗುವ ಜ್ಞಾನವು ಅನುಮಿತಿ ಯಾಗಿರುತ್ತದೆ.

ಒಂದು ವಸ್ತುವಿನ ಯಥಾರ್ಥ ಜ್ಞಾನವು ನಾಲ್ಕು ಬಗೆಯ ಪ್ರಮಾಣ ಗಳಿಂದ ಆಗುತ್ತದೆ. ಒಂದು ಪ್ರತ್ಯಕ್ಷ. ಇದು ನಮ್ಮ ಶ್ರೋತ್ರಾದಿಜ್ಞಾನ ಗಳಿಂದ ನೇರವಾಗಿ ಆಗತಕ್ಕದ್ದು. ಕಣ್ಣಿಂದ ನೋಡಿದ್ದು, ಕಿವಿಯಿಂದ ಕೇಳಿದ್ದು ಇತ್ಯಾದಿ. ಎರಡನೆಯದು ಹೇತುಜ್ಞಾನದಿಂದಾಗುವ ಅನುಮಿತಿ, ಇದಕ್ಕೆ ಸಾಧನವಾದ ಪ್ರಮಾಣ ಅನುಮಾನ. ಇದನ್ನು ಮುಂದೆ ವಿವರಿಸ ಲಾಗುತ್ತದೆ. ಮೂರನೆಯದು ಉಪಮಾನ. ಒಂದು ಹೋಲಿಕೆಯಿಂದ ಇನ್ನೊಂದು ವಸ್ತು ಯಾವುದೆಂದು ನಿರ್ಧರಿಸುವುದು ಉಪಮಿತಿ. ಒಂದು ಹಂದಿಯನ್ನು ತೋರಿಸಿ ಈ ರೀತಿ ಕಾಡಿನಲ್ಲಿರತಕ್ಕ ಪ್ರಾಣಿ ಕಾಡುಹಂದಿ ಎಂದು ಹೇಳಿದರೆ ಕಾಡಿಗೆ ಹೋಗಿ ನೋಡಿ ಕಾಡುಹಂದಿ ಯಾವುದೆಂದು ಕಂಡು ಹಿಡಿಯುವುದು ಉಪಮಿತಿ. ಸಾದೃಶ್ಯ ಜ್ಞಾನವನ್ನು ಉಪಮಾನ ಪ್ರಮಾಣ ವೆನ್ನುತ್ತಾರೆ. ಶಬ್ದವೆಂದರೆ ಆಪ್ತವಾಕ್ಯ. ತಾನು ಸತ್ಯವಾಗಿ ತಿಳಿದದ್ದನ್ನು ಯಾವುದೇ ವಂಚನೆ ಮೊದಲಾದ ಉದ್ದೇಶವಿಲ್ಲದೆ ಯಾವನು ಯಥಾರ್ಥವಾಗಿ ಹೇಳುತ್ತಾನೋ ಅವನು ಆಪ್ತನೆನಿಸುತ್ತಾನೆ. ಅವನು ಹೇಳಿದ್ದರಿಂದ ನಮಗಾಗುವುದು ಶಾಬ್ದಜ್ಞಾನ ಹೀಗೆ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ–ಎಂಬ ನಾಲ್ಕು ಪ್ರಮಾಣಗಳಿಂದ ನಮಗೆ ಯಥಾರ್ಥ ಜ್ಞಾನವಾಗುತ್ತದೆ ಯೆಂದು ತಾರ್ಕಿಕರ ಅಭಿಪ್ರಾಯವಿದೆ. ಇವುಗಳಲ್ಲದೆ ಅನುಪಲಬ್ಧಿ, ಅರ್ಥಾಪತ್ತಿ, ಐತಿಹ್ಯ–ಎಂಬಿವೂ ಪ್ರಮಾಣಗಳೆಂದು ಕೆಲವರ ಅಭಿಪ್ರಾಯ ವಿದೆ. ಇದು ಹೇಗಾದರೂ ಇರಲಿ. ನಮಗೆ ಪ್ರಕೃತವಾದದ್ದು ಅನುಮಾನ; ವಾದೋಪಯುಕ್ತವಾದ ಲಕ್ಷಣ. ಇವುಗಳಿಂದ ಶಾಸ್ತ್ರದಲ್ಲಿರುವ ವಾಕ್ಯದ ಅರ್ಥವನ್ನೋ ಸೂತ್ರಾರ್ಥವನ್ನೋ, ಇನ್ನು ಯಾವುದಾದರೊಂದು ಪ್ರಮೇಯ ವನ್ನೋ ನಿರ್ಧರಿಸುವುದು ವಾದದ ತಿರುಳು

ಅನುಮಾನದಲ್ಲಿ ಐದು ಅವಯವಗಳುಂಟು. ಅವುಗಳಲ್ಲಿ ಪಕ್ಷ, ಸಾಧ್ಯ, ಹೇತು–ಎಂಬ ಮೂರು ಮುಖ್ಯವಾದವು. ಪರ್ವತದಲ್ಲಿ ಬೆಂಕಿ ಇದೆ. ಹೊಗೆ ಇರುವುದರಿಂದ ಎಂಬ ಅನುಮಾನದಲ್ಲಿ ಪರ್ವತವು ಪಕ್ಷ, ಬೆಂಕಿಯು

ಸಾಧ್ಯ, ಹೊಗೆಯು ಹೇತು. ಈ ಹೇತು ಸದ್ಧೇತುವಾಗಬೇಕಾದರೆ ವ್ಯಾಪ್ತಿ ಇರಬೇಕು. ಎಲ್ಲಿ ಹೊಗೆ ಇರುತ್ತದೆಯೋ ಅಲ್ಲಿ ಬೆಂಕಿ ಇದ್ದೇ ಇರುತ್ತದೆ. ಎಲ್ಲಿ ಬೆಂಕಿ ಇಲ್ಲವೋ ಅಲ್ಲಿ ಹೊಗೆ ಇರುವುದಿಲ್ಲ ಎಂಬ ತಿಳಿವಳಿಕೆಯೇ ವ್ಯಾಪ್ತಿ. ಹೊಗೆಯು ಈ ವ್ಯಾಪ್ತಿ ವಿಶಿಷ್ಟವಾಗಿ ಪಕ್ಷವಾದ ಪರ್ವತದಲ್ಲಿದೆ. ಇಂತಹ ಹೇತುವಿಗೆ ಲಿಂಗವೆಂದು ಹೆಸರು. ಈ ಲಿಂಗದ ಪರಾಮರ್ಶವೇ ಅನುಮಾನ. ಇದರಿಂದ ಪರ್ವತದಲ್ಲಿ ಬೆಂಕಿ ಇದೆ ಎಂಬ ಜ್ಞಾನ ಹುಟ್ಟುತ್ತದೆ. ಈ ಜ್ಞಾನಕ್ಕೆ ಅನುಮಿತಿಯೆಂದು ಹೆಸರು. ಲಿಂಗಪರಾಮರ್ಶವೇ ಅನುಮಿತಿಗೆ ಕಾರಣವಾದ ಅನುಮಾನವೆನಿಸುತ್ತದೆ. ಇಷ್ಟು ಸಾಮಾನ್ಯ ಜ್ಞಾನವಿದ್ದರೆ ಮುಂದೆ ಹೇಳುವ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು ಸುಲಭ.

## ನಿಗ್ರಹ ಸ್ಥಾನಗಳು

೧. ಹೇತು ಅಥವಾ ವ್ಯಾಪ್ತಿ ವಿಶಿಷ್ಟಲಿಂಗವೆಂಬುವೇನುಂಟೋ ಅದರಲ್ಲಿ ದೋಷವಿದ್ದರೆ ಹೇತ್ವಾಭಾಸವೆನಿಸುತ್ತದೆ. ಸವ್ಯಭಿಚಾರ, ವಿರುದ್ಧ, ಸತ್ಪ್ರತಿಪಕ್ಷ, ಅಸಿದ್ಧ, ಬಾಧಿತ–ಎಂದು ಐದು ಹೇತ್ವಾಭಾಸಗಳಿವೆ.

ಅ. ಸವ್ಯಭಿಚಾರ : ಇದಕ್ಕೆ ಅನೈಕಾಂತಿಕ ಎಂದೂ ಹೆಸರಿದೆ. ಇದು ಮೂರು ವಿಧ – ಸಾಧಾರಣ, ಅಸಾಧಾರಣ,ಅನುಪಸಂಹಾರಿ ಎಂದು.

೧ ಸಾಧಾರಣ : ಉದಾ :– ಪರ್ವತದಲ್ಲಿ ಬೆಂಕಿ ಇದೆ, ಪರ್ವತವು ಪ್ರಮೇಯವಾದ್ದರಿಂದ (ಜ್ಞೇಯವಾದ್ದರಿಂದ) ಇದು ದುಷ್ಟ ಹೇತು. ಏಕೆಂದರೆ, ಒಂದು ಕೆರೆಯೂ ಪ್ರಮೇಯವಾಗಿರುತ್ತದೆ. ಅದರಲ್ಲಿ ಬೆಂಕಿ ಇರುವುದಿಲ್ಲ. ಇಲ್ಲಿ ಹೇತು ವ್ಯಭಿಚರಿತವಾಯಿತು.

೨. ಅಸಾಧಾರಣ : ಶಬ್ದವು ಅನಿತ್ಯ, ಅದರಲ್ಲಿ ಶಬ್ದತ್ವವಿರುವುದರಿಂದ. ಈ ಹೇತು ಕೇವಲ ಶಬ್ದದಲ್ಲಿ ಮಾತ್ರ ಇದೆ. ಅನಿತ್ಯವಾದ ಬೇರೆ ಯಾವ ವಸ್ತುವಿನಲ್ಲೂ ಇಲ್ಲ. ಆದ್ದರಿಂದ ಶಬ್ದವು ಅನಿತ್ಯವೆಂದು ಸಾಧಿಸುವುದಕ್ಕೆ ಈ ಹೇತುವಿನಿಂದ ಆಗುವುದಿಲ್ಲ.

೩, ಅನುಪಸಂಹಾರಿ : ಸರ್ವವೂ ಅನಿತ್ಯ, ಪ್ರಮೇಯವಾದ್ದರಿಂದ. ಸರ್ವವಸ್ತುಗಳೂ ಪ್ರಮೇಯಗಳೇ ಆದ್ದರಿಂದ ಅನಿತ್ಯವೆಂದು ಸಾಧಿಸಲು ಒಂದು ದೃಷ್ಟಾಂತವೇ ಸಿಗುವುದಿಲ್ಲ.

ಆ. **ವಿರುದ್ಧ :** ಶಬ್ದವು ನಿತ್ಯ, ಕೃತಕವಾದ್ದರಿಂದ. ಕೃತಕವಾದ ಗಡಿಗೆ ಮೊದಲಾದದ್ದು ಅನಿತ್ಯವೆಂಬುದು ಪ್ರಸಿದ್ಧವಾಗಿದೆ. ಹೀಗಿರುವಾಗ ಕೃತಕವಾದ್ದರಿಂದ ನಿತ್ಯ ಎನ್ನುವುದು ವಿರುದ್ಧವಾದ ಹೇತು.

ಇ. **ಸತ್ಪ್ರತಿಪಕ್ಷ :** ಶಬ್ದವು ನಿತ್ಯ, ಶ್ರೋತ್ರೇಂದ್ರಿಯಗ್ರಾಹ್ಯವಾದ್ದರಿಂದ. ಶಬ್ದತ್ವದ ಹಾಗೆ. ಇಲ್ಲಿ ಶಬ್ದತ್ವವು ನಿತ್ಯವೂ ಹೌದು, ಶ್ರೋತ್ರೇಂದ್ರಿಯ ಗ್ರಾಹ್ಯವೂ ಹೌದು, ಆದರೆ ಈ ಹೇತು ಸರಿಯಲ್ಲ. ಏಕೆಂದರೆ, ಶಬ್ದವು ಅನಿತ್ಯ. ಕೃತಕವಾದ್ದರಿಂದ ಗಡಿಗೆಯು ಹಾಗೆ ಎಂದು ಪ್ರತಿವಾದಿಯು ಸವಾಲನ್ನು ಹಾಕಲು ಬರುತ್ತದೆ. ಈ ರೀತಿ ಸವಾಲಿಗೆ ಪ್ರೈಯೊಡ್ಡುವ ಹೇತು ಸತ್ಪ್ರತಿಪಕ್ಷವೆನಿಸಿ, ಹೇತ್ವಾಭಾಸವಾಗುತ್ತದೆ. ಇಂತಹ ಹೇತುವಿನಿಂದ ಸತ್ಯವನ್ನು ಸಾಧಿಸಲಾಗುವುದಿಲ್ಲ.

ಈ. **ಅಸಿದ್ಧ :** ಈ ಹೇತ್ವಾಭಾಸವು ಆಶ್ರಯಾಸಿದ್ಧ, ಸ್ವರೂಪಾಸಿದ್ಧ, ವ್ಯಾಪ್ಯತ್ವಾಸಿದ್ಧ ಎಂದು ಮೂರು ವಿಧ.

೧. ಆಶ್ರಯಾಸಿದ್ಧ: **'ಮೊಲದ ಕೊಂಬು ಗಟ್ಟಿಯಾಗಿರುತ್ತದೆ. ಕೊಂಬು ಆದ್ದರಿಂದ, ಎತ್ತಿನ ಕೊಂಬಿನಂತೆ'** ಇಲ್ಲಿ ಹೇತುವಿಗೆ ಪಕ್ಷವಾದ ಮೊಲದ ಕೊಂಬು ಆಶ್ರಯ. ಮೊಲಕ್ಕೆ ಕೊಂಬೇ ಇರುವುದಿಲ್ಲವಾದ್ದರಿಂದ ಇದು ಆಶ್ರಯಾಸಿದ್ಧ.

೨. ಸ್ವರೂಪಾಸಿದ್ಧ: ಶಬ್ದವು ಅನಿತ್ಯ, ಕಣ್ಣಿಗೆ ಕಾಣುವುದರಿಂದ, ರೂಪದಂತೆ. ಇಲ್ಲೂ ಪಕ್ಷವಾದ ಶಬ್ದವು ಇದ್ದರೂ ಕಣ್ಣಿಗೆ ಕಾಣುವುದೆಂಬ ಹೇತು ಅದರಲ್ಲಿಲ್ಲ. ಆದ್ದರಿಂದ ಹೇತುವೇ ಸ್ವರೂಪದಿಂದ ಅಸಿದ್ಧವಾಗಿದೆ.

೩. ವ್ಯಾಪ್ಯತ್ವಾಸಿದ್ಧ : 'ಪರ್ವತದಲ್ಲಿ ಹೊಗೆ ಇದೆ' ಬೆಂಕಿ ಇರುವುದರಿಂದ. ಬೆಂಕಿ ಇದ್ದಲ್ಲಿ ಹೊಗೆ ಇರುತ್ತದೆಯೆಂಬ ವ್ಯಾಪ್ತಿ ಇಲ್ಲ. ಕಾದ ಕೆಂಡದಲ್ಲಿ ಅಥವಾ ಕಬ್ಬಿಣದ ಗೋಳಕದಲ್ಲಿ ಬೆಂಕಿ ಇದ್ದರೂ ಹೊಗೆ ಇರುವುದಿಲ್ಲ. ಹೊಗೆ ಇರಬೇಕಾದರೆ ಹಸಿ ಸೌದೆಯ ಸಂಬಂಧ ಇರಬೇಕು. ಹಸಿ ವಸ್ತುವಿನ ಸಂಬಂಧವಿಲ್ಲದೆ ಬೆಂಕಿ ಇರಲಾರದು ಈ ಸ್ಥಳದಲ್ಲಿ

ಹಸಿಯು ಸೌದೆಯ ಸಂಬಂಧಕ್ಕೆ ಉಪಾಧಿ ಎಂದು ಹೆಸರು. 'ಬೆಂಕಿ ಇರುವುದರಿಂದ' – ಎಂಬ ಹೇತು ಉಪಾಧಿ ಇದ್ದರೆ ಮಾತ್ರ ಸದ್ಧೇತು ವಾಗುತ್ತದೆ. 'ಧೂಮವಿರುವುದರಿಂದ ವಹ್ನಿ ಇದೆ' ಎಂಬ ಅನುಮಿತಿ ಯಲ್ಲಾದರೋ ಹೇತುವಾದ ಧೂಮ ವಹ್ನಿ ವ್ಯಾಪ್ಯವಾಗಿದೆ. ವ್ಯಾಪ್ಯತ್ವಾ ಸಿದ್ಧದಲ್ಲಿ ಹೇತುವಾದ ವಹ್ನಿ ಧೂಮವ್ಯಾಪ್ಯವಾಗಿಲ್ಲ. ವಹ್ನಿ ಇದ್ದರೆ ಧೂಮವಿರುತ್ತದೆ ಎಂಬ ವ್ಯಾಪ್ತಿ ಇಲ್ಲ. ಆದಕಾರಣ ಇಲ್ಲಿ ಹೇತುವಾದ ಬೆಂಕಿಯಲ್ಲಿ ಧೂಮ ವ್ಯಾಪ್ಯತೆ ಇಲ್ಲ.

ಉ. **ಬಾಧಿತ :** 'ಬೆಂಕಿಯು ಉಷ್ಣವಲ್ಲ, ದ್ರವ್ಯವಾದ್ದರಿಂದ', ಇಲ್ಲಿ ಬೆಂಕಿಯಲ್ಲಿ ಅನುಷ್ಣತ್ವವು ಸಾಧ್ಯವಾಗಿದೆ. ಇದು ಬಾಧಿತ. ಏಕೆಂದರೆ ಬೆಂಕಿಯಲ್ಲಿ ಅನುಷ್ಣತ್ವವಿಲ್ಲ – ಉಷ್ಣತ್ವವೇ ಇದೆ ಎಂಬುದು ಪ್ರತ್ಯಕ್ಷ ಸಿದ್ಧವಾಗಿದೆ. ಸಾಧ್ಯಾಂಶವೇ ಇಲ್ಲಿ ಬಾಧಿತ.

ಇವಿಷ್ಟು ಹೇತ್ವಾಭಾಸಗಳು. ಇವುಗಳಿಂದ ವಸ್ತುತತ್ತ್ವವನ್ನು ನಿರ್ಧರಿಸಲಾಗುವುದಿಲ್ಲ. ಇಂತಹ ಹೇತ್ವಾಭಾಸಗಳಿಂದ ವಾದ ಮಾಡಿದರೆ ಅದು ನಿಗ್ರಹಸ್ಥಾನವಾಗುತ್ತದೆ. ಈ ನಿಗ್ರಹಸ್ಥಾನವು ವಾದಿಯ ಅಪಜಯಕ್ಕೆ ಕಾರಣವಾಗುತ್ತದೆ. ವಾದಿಸತರ್ಕವನು ತಪ್ಪು ಹೇಳುತ್ತಾನೆಂದು ತೀರ್ಮಾನ ವಾಗುತ್ತದೆ. ಇದೇ ಬಗೆಯ ಉಳಿದ ನಿಗ್ರಹಸ್ಥಾನಗಳನ್ನು ಈಗ ಪರಿಚಯ ಮಾಡಿಕೊಡಲಾಗುತ್ತದೆ.

## ನಿಗ್ರಹಸ್ಥಾನ

೨. **ಪ್ರತಿಜ್ಞಾಹಾನಿ :** ತಾನು ಯಾವುದನ್ನು ಸಾಧಿಸಲು ಪ್ರತಿಜ್ಞೆ ಮಾಡಿರು ತ್ತಾನೋ ಅದನ್ನೇ ಬಿಟ್ಟುಕೊಡುವುದು ಪ್ರತಿಜ್ಞಾಹಾನಿ. ಉದಾ :–

**ವಾದಿ :** ಇಂದ್ರಿಯ ಗೋಚರವಾಗುವುದರಿಂದ ಶಬ್ದವು ಅನಿತ್ಯ, ಗಡಿಗೆಯ ಹಾಗೆ.

**ಪ್ರತಿವಾದಿ** . ಹಾಗೆ ಹೇಳಲಾಗುವುದಿಲ್ಲ. ದ್ರವ್ಯದಲ್ಲಿರುವ ಘಟತ್ವಾದಿ ಜಾತಿಯೂ ಇಂದ್ರಿಯ ಗೋಚರವಾಗುತ್ತದೆ. ಈ ಜಾತಿಯು ನಿತ್ಯವೆಂದು ನೀನೇ ಒಪ್ಪಿದ್ದೀಯೆ.

**ವಾದಿ :** ಹಾಗಿದ್ದರೆ ಶಬ್ದವು ನಿತ್ಯವೇ ಆಗಲಿ ! ಗಡಿಗೆಯೂ ನಿತ್ಯವೇ ಆಗಲಿ !

೩. **ಪ್ರತಿಜ್ಞಾಂತರ :** ಮಾಡಿದ ಪ್ರತಿಜ್ಞೆಗೆ ಅನಂತರ ಇನ್ನೊಂದು ವಿಶೇಷಣವನ್ನು ಸೇರಿಸುವುದು. ಉದಾ :–

**ವಾದಿ :** ಮನುಷ್ಯರನ್ನು ಕೊಲ್ಲುವುದು ಅಧರ್ಮ. ಶಾಸ್ತ್ರದಲ್ಲಿ ನಿಷಿದ್ಧವಾದ್ದರಿಂದ.

**ಪ್ರತಿವಾದಿ :** ಯುದ್ಧದಲ್ಲಿ ಮನುಷ್ಯರನ್ನು ಕೊಲ್ಲುವುದು ಧರ್ಮವೇ ಆಗುತ್ತದೆ. 'ತಸ್ಮಾದ್ಯುಧ್ಯಸ್ವ ಭಾರತ' ಎಂದು ಶ್ರೀ ಕೃಷ್ಣನು ಅರ್ಜುನನಿಗೆ ಬೋಧಿಸಿದ್ದಾನೆ.

**ವಾದಿ :** ಹಾಗಾದರೆ 'ಯುದ್ಧದ ಹೊರತಾಗಿ ಉಳಿದ ಸಂದರ್ಭದಲ್ಲಿ ಮನುಷ್ಯರನ್ನು ಕೊಲ್ಲುವುದು ಅಧರ್ಮ' ಎಂದು ನನ್ನ ಪ್ರತಿಜ್ಞೆ.

೪. **ಪ್ರತಿಜ್ಞಾವಿರೋಧ** ತನ್ನ ಪ್ರತಿಜ್ಞೆಯನ್ನು ಸಾಧಿಸಲು ವಿರುದ್ಧವಾದ ಹೇತುವನ್ನು ಹೇಳಿಬಿಡುವುದು. ಉದಾ :–

**ವಾದಿ :** ಮನಸ್ಸು ಅಣುಪರಿಮಾಣ ಉಳ್ಳದ್ದು, ದೇಹದ ಎಲ್ಲ ಕಡೆಯಲ್ಲಿಯೂ ಉಪಲಬ್ಧವಾಗುವುದರಿಂದ.

**ಪ್ರತಿವಾದಿ :** ದೇಹದ ಎಲ್ಲ ಕಡೆಯಲ್ಲಿಯೂ ಇರತಕ್ಕದ್ದು ಅಣು ಹೇಗಾಗುತ್ತದೆ ? ಇದು ವಿರುದ್ಧವಾದ ಹೇತು.

೫. **ಪ್ರತಿಜ್ಞಾಸಂನ್ಯಾಸ :** ತನ್ನ ಪ್ರತಿಜ್ಞೆಯಲ್ಲಿ ದೋಷವಿದೆಯೆಂದು ಪ್ರತಿವಾದಿಯು ಹೇಳಿದಾಗ ಮೊದಲು ಹೇಳಿದ ಪ್ರತಿಜ್ಞೆಯನ್ನೇ ಬಿಟ್ಟುಬಿಡುವುದು. ಉದಾ :–

**ವಾದಿ :** ಸೃಷ್ಟಿಕರ್ತನಾದ ಈಶ್ವರನು ಇಲ್ಲ. ಪ್ರಕೃತಿಯೇ ಜಗತ್ತಿನ ಕರ್ತೃ.

**ಪ್ರತಿವಾದಿ :** ಜ್ಞಾನ, ಇಚ್ಛೆಗಳಿಲ್ಲದ ಕರ್ತೃವನ್ನು ನಾವು ಎಲ್ಲಿಯೂ ಕಂಡಿಲ್ಲ. ಪ್ರಕೃತಿಯು ಜಡವಾದ್ದರಿಂದ ಅದರಲ್ಲಿ ಜ್ಞಾನೇಚ್ಛೆಗಳಿಲ್ಲ. ಅದು ಹೇಗೆ ಕರ್ತೃವಾದೀತು ?

**ವಾದಿ :** ಈಶ್ವರನಿಲ್ಲವೆಂದು ಹೇಗೆ ಹೇಳುವುದು ? ಈಶ್ವರನಿದ್ದಾನೆಂದು ಒಪ್ಪಲೇಬೇಕು !

೬. **ಹೇತ್ವಂತರ :** ಪ್ರತಿಜ್ಞಾಸಿದ್ಧಿಗಾಗಿ ಒಂದು ಹೇತುವನ್ನು ಹೇಳಿದಾಗ, ಪ್ರತಿವಾದಿಯು ಅದರಲ್ಲಿ ದೋಷವನ್ನು ತೋರಿಸುತ್ತಾನೆ. ಆಗ ಹೇತುವನ್ನು ತಿದ್ದಿ ಬೇರೆ ವಿಧದಲ್ಲಿ ಹೇಳುವುದು. ಉದಾ :–

**ವಾದಿ :** ಮನುಷ್ಯರು ವಸ್ತುವನ್ನು ನೋಡಬಲ್ಲರು, ಕಣ್ಣುಗಳಿರುವುದರಿಂದ.

**ಪ್ರತಿವಾದಿ :** ಕುರುಡರಾದ ಮನುಷ್ಯರು ಕಣ್ಣುಗಳಿದ್ದರೂ ನೋಡಲಾರರು.

**ವಾದಿ :** 'ಕುರುಡುತನವಿಲ್ಲದ ಕಣ್ಣುಗಳಿರುವುದರಿಂದ' ಎಂದು ಹೇಳುತ್ತೇನೆ. ಪ್ರತಿಜ್ಞಾಂತರದಲ್ಲಿ ಪ್ರತಿಜ್ಞೆಗೆ ಒಂದು ವಿಶೇಷಣವನ್ನು ಸೇರಿಸಬೇಕಾಗುತ್ತದೆ. ಹೇತ್ವಂತರದಲ್ಲಿ ಹೇತುವಿಗೇ ಒಂದು ವಿಶೇಷಣವನ್ನು ಸೇರಿಸಬೇಕಾಗುತ್ತದೆ.

೭. **ಅರ್ಥಾಂತರ :** ವಾದಕ್ಕೆ ಬೇಕಾಗದೆ ಇರುವ ವಿಷಯವನ್ನು ಅನಾವಶ್ಯಕವಾಗಿ ಮಧ್ಯದಲ್ಲಿ ತುರುಕುವುದು. ಇದು ಎಲ್ಲ ಸ್ಥಳಗಳಲ್ಲಿಯೂ ಬರಬಹುದು. ಉದಾ :– 'ಪರ್ವತೋ ವಹ್ನಿಮಾನ್ ಧೂಮವತ್ತ್ವಾತ್' ಎಂಬ ಅನುಮಾನದಲ್ಲಿ ಸಹ ಅರ್ಥಾಂತರವನ್ನು ಹೇಳಬಾರದು. ಹೇಗೆಂದರೆ ಧೂಮವತ್ತ್ವಾತ್ ಎಂಬುದು ಪಂಚಮ್ಯಂತ ಏಕವಚನ. ಧೂಮ ಶಬ್ದದ ಮೇಲೆ ಮತುಪ್ ಪ್ರತ್ಯಯ ಬಂದಿದೆ. ಭಾವಾರ್ಥದಲ್ಲಿ 'ತ್ವ' ಪ್ರತ್ಯಯ ಬಂದಿದೆ, ಇತ್ಯಾದಿ. ಇದು ಅನಿವಾರ್ಯವಾಗಿ ಹೊತ್ತುಗಳೆಯುವ ಉಪಾಯವಾದ್ದರಿಂದ ನಿಗ್ರಹಸ್ಥಾನವಾಗಿದೆ.

೮. **ನಿರರ್ಥಕ** ಅರ್ಥವಾಗದ ಹೇತುವನ್ನು ಹೇಳುವುದು ಉದಾ :– 'ಸಮುದ್ರದ ನೀರು ಉಪ್ಪು. ಜಳಜಳವಾದ್ದರಿಂದ'.

೯. **ಅಪಾರ್ಥಕ :** ಪರಸ್ಪರ ಅನ್ವಯವಿಲ್ಲದಂತಹ ಪ್ರತಿಜ್ಞಾವಾಕ್ಯವನ್ನು ಹೇಳುವುದು. ಉದಾ :– ಬೆಂಕಿ ಗಾಳಿ ಆಕಾಶ–ಇವು ದೃಶ್ಯ. ಅದೃಶ್ಯ ದ್ರವ್ಯವಾದ್ದರಿಂದ.

೧೦. **ಅವಿಜ್ಞಾತಾರ್ಥ :** ಪ್ರತಿವಾದಿಗಾಗಲಿ ಸದಸ್ಯರಿಗಾಗಲಿ ಗೊತ್ತಿರದ ಅಪ್ರಸಿದ್ಧ ಶಬ್ದವನ್ನು ಬಳಸುವುದು, ಯಾರಿಗೂ ಅರ್ಥವಾಗದಷ್ಟು ವೇಗವಾಗಿ ಮಾತಾಡುವುದು. ಇದಕ್ಕೆ ಉದಾಹರಣೆ ಬೇಕಿಲ್ಲ.

೧೧. **ಅಪ್ರಾಪ್ತಕಾಲ :** ವಾಕ್ಯ ಘಟಕವಾದ ಶಬ್ದಗಳನ್ನು ವ್ಯುತ್ಕ್ರಮದಿಂದ ಹೇಳುವುದು. ಉದಾ :– ಗೊರಸುಗಳಿಲ್ಲ ಕಾಲಿಗೆ ಕುದುರೆಯಾದ್ದರಿಂದ ಕುದುರೆಗೆ.

೧೨. **ನ್ಯೂನ :** ಹೇತುವನ್ನು ಹೇಳದೆ ಕೇವಲ ಪ್ರತಿಜ್ಞಾವಾಕ್ಯವನ್ನು ಹೇಳುವುದು. ಉದಾ :– 'ಆತ್ಮ ಎಂಬ ವಸ್ತುವಿಲ್ಲ.' ಇಲ್ಲಿ ಹೇತುವನ್ನೇ ಹೇಳಲಿಲ್ಲವಾದ್ದರಿಂದ ವಾದಿಯು ನಿಗ್ರಹೀತನಾದನೆಂದು ತಿಳಿಯಬೇಕು.

೧೩. **ಅಧಿಕ:** ಒಂದು ಸಲಕ್ಕೆ ಅದೇ ಅರ್ಥದ ಅನೇಕ ಹೇತುಗಳನ್ನು ಹೇಳುವುದು. ಉದಾ :– ಶಬ್ದವು ಅನಿತ್ಯ, ಶಬ್ದವಾದ್ದರಿಂದ ಮತ್ತು ಶ್ರೋತ್ರೇಂದ್ರಿಯ ಗ್ರಾಹ್ಯವಾದ್ದರಿಂದ.

೧೪. **ಅನನುಭಾಷಣ** ವಾದಿಯು ಹೇಳಿದ್ದನ್ನು ಪ್ರತಿವಾದಿಯು ಅನುವಾದ ಮಾಡಿ ಅನಂತರ ಉತ್ತರ ಹೇಳಬೇಕೆಂಬುದು ವಾದದ ನಿಯಮಗಳಲ್ಲೊಂದು. ಸಭಾಸದರು ಎಚ್ಚರಿಸಿದರೂ ಪ್ರತಿವಾದಿಯು ಅನುವಾದ ಮಾಡದೆ ಹೋದರೆ ಈ ದೋಷ ಸಂಭವಿಸುತ್ತದೆ,

೧೫. **ಅಜ್ಞಾನ** ವಾದಿಯು ಮತ್ತೆ ಮತ್ತೆ ಹೇಳಿದರೂ ಪ್ರತಿವಾದಿಯು ಅವನ ಹೇಳಿಕೆಯನ್ನು ಅರ್ಥಮಾಡಿಕೊಳ್ಳದೆ ಹೋಗುವುದು. ಇದು ಪ್ರತಿವಾದಿಯ ಪರಾಜಯಕ್ಕೆ ನಿಮಿತ್ತ.

೧೬ **ಅಪ್ರತಿಭಾ :** ವಾದಿಯು ಹೇಳಿದ್ದು ಅರ್ಥವಾದರೂ ಉತ್ತರವೇನೆಂದು ಹೊಳೆಯದೆ ಹೋಗುವುದು.

೧೭. **ವಿಕ್ಷೇಪ :** ವಾದಿಗೆ ಅಥವಾ ಪ್ರತಿವಾದಿಗೆ ಉತ್ತರವನ್ನು ಹೇಳಲಾರದೆ, ಯಾವುದಾದರೊಂದು ನೆಪವನ್ನೊಡ್ಡಿ ಸಭೆಯಿಂದ ಎದ್ದು ಹೋಗುವುದು,

೧೮. **ಮತಾನುಜ್ಞಾ :** ತನ್ನ ಪಕ್ಷದ ಮೇಲೆ ಹೇಳಿದ ದೋಷಕ್ಕೆ ಉತ್ತರವನ್ನೇ ಹೇಳದೆ ಎದುರಾಳಿಯ ಮೇಲೆ ಹೊಸ ಸವಾಲನ್ನೊಡ್ಡುವುದು.

೧೯. **ಪರ್ಯನುಯೋಜ್ಯಾನುಯೋಗ :** ಎದುರು ಪಕ್ಷದವನು ನಿಗ್ರಹಸ್ಥಾನಕ್ಕೆ ಯೋಗ್ಯವಾದ ತಪ್ಪನ್ನು ಮಾಡಿದ್ದರೂ ಅದು ಗೊತ್ತಾಗದೆ ಸುಮ್ಮನಾಗುವುದು.

೨೦. **ಅಪಸಿದ್ಧಾಂತ :** ಯಾವ ಶಾಸ್ತ್ರದಲ್ಲಿ ವಾದ ನಡೆಯುತ್ತದೆಯೋ ಆ ಶಾಸ್ತ್ರದ ಮರ್ಯಾದೆಯಿಂದಲೇ ಉತ್ತರಿಸಬೇಕು. ತರ್ಕಶಾಸ್ತ್ರದಲ್ಲಿ ವಾದ ನಡೆಯುವಾಗ ವೇದಾಂತ ಶಾಸ್ತ್ರವನ್ನನುಸರಿಸಿ ಹೇಳಿದರೆ ಅಪಸಿದ್ಧಾಂತವಾಗುತ್ತದೆ.

೨೧. **ನಿರನುಯೋಜ್ಯಾನುಯೋಗ :** ವಾದದಲ್ಲಿ ನಿಗ್ರಹಸ್ಥಾನವಾಗದಿದ್ದರೂ ಎದುರಾಳಿಯು ಹೇಳಿದ್ದರಲ್ಲಿ ನಿಗ್ರಹಸ್ಥಾನವಿದೆಯೆಂದು ವಾದಿಸುವುದು.

೨೨. **ಪುನರುಕ್ತ :** ವಾದಿಯು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಿರುವುದು. ಉತ್ತರ ಹೊಳೆಯದೆ ವ್ಯರ್ಥವಾಗಿ ಮತ್ತೆ ಮತ್ತೆ ಹೇಳುವುದರಿಂದ ಅದು ಪುನರುಕ್ತ ದೋಷವಾಗುತ್ತದೆ.

ಇವೆಲ್ಲವೂ ವಾದಿಯ ಮಾತುಗಳಲ್ಲಿ ಸಂಭವಿಸತಕ್ಕ ದೋಷಗಳು. ಇವಲ್ಲದೆ ಇನ್ನೂ ಕೆಲವು ದೋಷಗಳಿವೆ—

೧. **ವಿತಂಡಾ :** ತನ್ನ ಪಕ್ಷವನ್ನು ಸಾಧಿಸುವುದಕ್ಕೆ ಬೇಕಾದ ಯಾವ ಯುಕ್ತಿಯನ್ನೂ ಹೇಳದೆ ಎದುರು ಪಕ್ಷವನ್ನು ಮಾತ್ರ ಖಂಡಿಸುವುದು. ಹೇಗೆಂದರೆ–'ಈಶ್ವರನು ಇಲ್ಲ' ಎಂದು ವಾದಿಸಬೇಕಾದದ್ದು ನಾಸ್ತಿಕನ ಪಕ್ಷ. ಈಶ್ವರನಿಲ್ಲ – ಎಂಬುದನ್ನು ಸ್ಥಾಪನೆ ಮಾಡದೆ ಈಶ್ವರನಿದ್ದರೆ ಹೀಗೇಕೆ ಆಗುತ್ತಿತ್ತು ? ಎಂದು ಆಸ್ತಿಕ ವಾದವನ್ನು ದೂರುತ್ತ ಹೋಗುವುದು. ಇದಕ್ಕೆ ವಿತಂಡಾ ವಾದವೆಂದು ಹೆಸರು. ಅನಾವಶ್ಯಕವಾಗಿ ಶುಷ್ಕತರ್ಕವನ್ನು ಬೆಳೆಸುವುದು ವಿತಂಡಾವಾದವೆಂದು ಜನರು ತಿಳಿದುಕೊಂಡಿದ್ದಾರೆ. ವಿತಂಡಾ ಎಂದರೆ ಅದಲ್ಲ.

೨. ಛಲ : ವಾದಿಯ ಮಾತಿಗೆ ಅರ್ಥಾಂತರವನ್ನು ಕಲ್ಪಿಸಿ ಆಕ್ಷೇಪಿಸುವುದು. ಉದಾ :– 'ಪ್ರಹ್ಲಾದನ ಭಕ್ತಿಗೆ ಹರಿಯು ಒಲಿದನು', ಎಂದು ಹೇಳಿದಾಗ 'ಹರಿ ಎಂದರೆ ಕಪಿಯೆಂದರ್ಥ. ಯಾವ ಕಪಿ ಪ್ರಹ್ಲಾದನಿಗೆ ಒಲಿಯಿತು ?' ಎಂದು ಆಕ್ಷೇಪಿಸಿದರೆ ಛಲವೆನಿಸುತ್ತದೆ.

೩. ಜಾತಿ : ಇದು ವಾದಿ ಪ್ರತಿವಾದಿಗಳ ಉತ್ತರದಲ್ಲಿ ಬರತಕ್ಕ ದೋಷ. ಸ್ವವ್ಯಾಘಾತಕವಾದ ಉತ್ತರವೇ ಅದು. ತನ್ನ ಪಕ್ಷಕ್ಕೆ ವ್ಯಾಘಾತ ವನ್ನುಂಟುಮಾಡುವ ವಿಷಯವನ್ನು ಅಂಗೀಕರಿಸಿದಂತೆಯೇ ಆಗಿಬಿಡು ತ್ತದೆ. ಹಾಗೆ ಅಂಗೀಕಾರವಾಗುತ್ತದೆಂಬುದು ಗೊತ್ತಿಲ್ಲದೆ ಎದುರಾಳಿ ಯನ್ನು ಆಕ್ಷೇಪಿಸಿದರೆ ಜಾತಿಯೆಂಬ ದೋಷವಾಗುತ್ತದೆ. ಇದನ್ನು ಅಸದುತ್ತರ ಎಂದು ಕರೆಯುತ್ತಾರೆ. ಜಾತಿಯಲ್ಲಿ ಸಾಧರ್ಮ್ಯಸಮಾ, ವೈಧರ್ಮ್ಯಸಮಾ, ಉತ್ಕರ್ಷಸಮಾ, ಅಪಕರ್ಷಸಮಾ–ಇತ್ಯಾದಿಯಾಗಿ ಇಪ್ಪತ್ತುನಾಲ್ಕು ಒಳಭೇದಗಳಿವೆ. ಮಾದರಿಗಾಗಿ ಎರಡು ಉದಾಹರಣೆ ಗಳನ್ನಿಲ್ಲಿ ಕೊಡಲಾಗಿದೆ—

೧. **ಅಪಕರ್ಷಸಮಾ :**

**ವಾದಿ :** ಶಬ್ದವು ಅನಿತ್ಯ, ಕೃತಕವಾದ್ದರಿಂದ, ಘಟದ ಹಾಗೆ.

**ಪ್ರತಿವಾದಿ :** ಕೃತಕವಾದ್ದರಿಂದ ಘಟದಂತೆ ಅನಿತ್ಯವಾಗುವುದಾದರೆ, ಕೃತಕವಾದ್ದರಿಂದಲೇ ಘಟದ ಹಾಗೆ ಶ್ರೋತ್ರೇಂದ್ರಿಯ ಗ್ರಾಹ್ಯವಾಗದೆ ಹೋಗಲಿ !

ಇಲ್ಲಿ ಶಬ್ದವು ನಿತ್ಯವೆಂದು ಹೇಳತಕ್ಕವನು ಪ್ರತಿವಾದಿ. ಅವನು ಎತ್ತಿದ ಆಕ್ಷೇಪಣೆಯಲ್ಲಿ ಶಬ್ದವನ್ನು ಅನಿತ್ಯವೆಂದು ಒಪ್ಪಿಕೊಂಡಂತಾಯಿತು. ಪ್ರತಿ ವಾದಿಯು ಕೊಟ್ಟ ಉತ್ತರವು ಸ್ವಪಕ್ಷವ್ಯಾಘಾತಕವಾದ ಉತ್ತರವಾಗುತ್ತದೆ.

೨. ಪ್ರತಿದೃಷ್ಟಾಂತಸಮಾ : ಒಂದು ದೃಷ್ಟಾಂತದಿಂದ ಸಾಧ್ಯವನ್ನು ಸಾಧಿಸಿದಾಗ ಹಾಗೆಯೇ ಇನ್ನೊಂದು ದೃಷ್ಟಾಂತದಿಂದ ಸಾಧ್ಯಕ್ಕೆ ವಿರುದ್ಧವಾದ ಧರ್ಮವನ್ನು ಸಾಧಿಸುವುದು. ಉದಾ :–

**ವಾದಿ :** ಆತ್ಮನಲ್ಲಿ ಕ್ರಿಯೆ ಇದೆ. ಕ್ರಿಯಾ ಹೇತುವಾದ ವಾಯು ಸಂಯೋಗವಿರುವುದರಿಂದ, ಮರದ ಎಲೆಯಂತೆ.

**ಪ್ರತಿವಾದಿ :** ಆತ್ಮನಲ್ಲಿ ಕ್ರಿಯೆ ಇಲ್ಲ. ಅವನು ವಿಭುವಾದ್ದರಿಂದ, ಆಕಾಶದ ಹಾಗೆ.

ಎಲೆಯು ದೃಷ್ಟಾಂತದಿಂದ ಆತ್ಮನಲ್ಲಿ ಕ್ರಿಯೆಯನ್ನು ಸಾಧಿಸುವುದಾದರೆ ಆಕಾಶದ ದೃಷ್ಟಾಂತದಿಂದ ಆತ್ಮನಲ್ಲಿ ಕ್ರಿಯೆ ಇಲ್ಲವೆಂದೂ ಸಾಧಿಸಬಹುದಲ್ಲ. ಇಲ್ಲಿ ವಿನಿಗಮಕವೇ ಇಲ್ಲ. ಇಂತಹ ದೋಷಗಳು ವಾದದಲ್ಲಿ ಬರಬಾರದು. (ವಿನಿಗಮಕ–ಎರಡರಲ್ಲಿ ಯಾವುದು ಸರಿಯೆಂದು ವ್ಯವಸ್ಥಾಪಕವಾದ ಕಾರಣ)

## ಪರಿಷ್ಕಾರ ವಿಧಾನ

ಪರಿಷ್ಕಾರ ವಿಧಾನವು ಪ್ರಾಯಶಃ ನವೀನ ತಾರ್ಕಿಕರ ಕಾಲದಲ್ಲಿ ಆರಂಭವಾಗಿ ಪೂರ್ಣವಾಯಿತೆಂದು ಹೇಳಬಹುದು. ಇವರು ಪ್ರತಿಯೊಂದು ಪ್ರಮೇಯವನ್ನು ಪರಿಷ್ಕರಿಸಿ ಯಾವ ದೋಷವೂ ಇಲ್ಲದಂತೆ ಹೇಳಬೇಕೆನ್ನುತ್ತಾರೆ. ಒಂದು ಚಿಕ್ಕ ಉದಾಹರಣೆಯನ್ನು ನೋಡಬಹುದು. 'ಗಂಧವತೀ ಪೃಥಿವೀ 'ಎಂಬುದು ಪೃಥ್ವಿಯ ಲಕ್ಷಣ. ಲಕ್ಷಣವೆಂದರೆ ಅಸಾಧಾರಣಧರ್ಮ. ಈ ಲಕ್ಷಣವು ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವಗಳಿಂದ ದೂರವಾಗಿರಬೇಕು. ಅದನ್ನು ಮುಂದೆ ವಿವರಿಸಲಾಗುತ್ತದೆ. ಗಂಧವಿರುವುದು ಪೃಥ್ವಿಯ ಲಕ್ಷಣ ಹೇಗಾಗುತ್ತದೆ ? ನೀರಿನಲ್ಲಿಯೂ ವಾಸನೆ ಇರುತ್ತದೆಯಲ್ಲ ? ಎಂದು ಆಕ್ಷೇಪ. ಅದಕ್ಕೆ ಉತ್ತರವೇನೆಂದರೆ, ನೀರಿನಲ್ಲಿ ವಾಸನೆ ಬರಬೇಕಾದರೆ ಪೃಥ್ವಿಯ ಸೂಕ್ಷ್ಮಕಣಗಳು ಸಂಯೋಗ ಸಂಬಂಧದಿಂದ ಅದರಲ್ಲಿ ಸೇರಿಕೊಂಡಿರುತ್ತವೆ. ಗಂಧವಿರುವುದು ಪೃಥ್ವೀಕಣಗಳಲ್ಲಿಯೇ. ಪೃಥ್ವೀಕಣಗಳ ಸಂಸರ್ಗದಿಂದ ನೀರು ವಾಸನೆಯುಳ್ಳದ್ದಾಗಿರುವಂತೆ ಕಂಡುಬರುತ್ತದೆ. ಆದ್ದರಿಂದ ಸಮವಾಯ ಸಂಬಂಧದಿಂದ ಗಂಧವನ್ನು ಧರಿಸಿರುವುದು ಪೃಥ್ವಿಯ ಲಕ್ಷಣ ಎನ್ನಬೇಕು. ಲಕ್ಷಣವನ್ನು ಹೀಗೆ ಪರಿಷ್ಕರಿಸಲಾಗುತ್ತದೆ. 'ಸಮವಾಯಸಂಬಂಧಾವಚ್ಛಿನ್ನ ಗಂಧನಿಷ್ಠಾಧೇಯತಾ ನಿರೂಪಿತಾಧಿಕರಣತಾವತೀ ಪೃಥ್ವೀ' ಗಂಧವು ಸಮವಾಯ ಸಂಬಂಧದಿಂದ ಪೃಥ್ವಿಯಲ್ಲಿದೆ. ಆದ್ದರಿಂದ ಗಂಧದಲ್ಲಿ ಆಧೇಯತೆ

ಇದೆ. ಪೃಥ್ವಿಯಲ್ಲಿ ಅಧಿಕರಣತೆಯಿದೆ. ಆಧೇಯತೆಗೂ ಅಧಿಕರಣತೆಗೂ ಯಾವ ಸಂಬಂಧ ? ನಿರೂಪ್ಯ ನಿರೂಪಕಭಾವ ಸಂಬಂಧ, ಆಧೇಯತೆಯಿಂದ ಅಧಿಕರಣತೆ ನಿರೂಪಿತವಾಗಿದೆ. ಆಧೇಯತೆಯಾದರೋ ಸಮವಾಯ ಸಂಬಂಧದಿಂದ ಗಂಧದಲ್ಲಿದೆ. ಅಧಿಕರಣತೆಯೂ ಸಮವಾಯ ಸಂಬಂಧದಿಂದ ಪೃಥ್ವಿಯಲ್ಲಿದೆ. ಈ ಆಧೇಯತೆ ಮತ್ತು ಅಧಿಕರಣತೆಗಳು ಸಮವಾಯ ಸಂಬಂಧದಿಂದ ಅವಚ್ಛಿನ್ನವಾಗಿವೆ. ಏಕೆಂದರೆ, ಗಂಧವು ಸಮವಾಯ ಸಂಬಂಧದಿಂದ ಪೃಥ್ವಿಯಲ್ಲಿದೆ. ನೆಲದ ಮೇಲೆ ಗಡಿಗೆಯಿದೆ ಎನ್ನುವಾಗ ಸಂಯೋಗ ಸಂಬಂಧದಿಂದ ಗಡಿಗೆ ಇರುತ್ತದೆ. ಆಗ 'ಸಂಯೋಗ ಸಂಬಂಧಾವಚ್ಛಿನ್ನ' ಎನ್ನಬೇಕು. ಇದೊಂದು ಸರಳವಾದ ಉದಾಹರಣೆ.

ವಾದಪ್ರತಿವಾದಗಳನ್ನು ಮಾಡತಕ್ಕವರು ಅನೇಕವೇಳೆ ಒಂದೊಂದು ಪದಾರ್ಥದ ಲಕ್ಷಣವನ್ನು ಹೇಳಬೇಕಾಗಿ ಬರುತ್ತದೆ. ಲಕ್ಷಣವೆಂದರೆ, ಆ ಪದಾರ್ಥದಲ್ಲಿರುವ ಅಸಾಧಾರಣಧರ್ಮ. ಅಂತಹ ಧರ್ಮವು ಪದಾರ್ಥದ ನಿಜಸ್ವರೂಪವನ್ನು ಪರಿಚಯ ಮಾಡಿಕೊಡುತ್ತದೆ. ಅಸಾಧಾರಣಧರ್ಮವೆಂದರೆ ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವಗಳೆಂಬ ಮೂರುದೋಷಗಳಿಂದ ರಹಿತವಾದ ಧರ್ಮ. ಉದಾ:–'ರೋಮವಲ್ಲಾಂಗೂಲವತ್ತ್ವಂ ಪಶೋರ್ಲಕ್ಷಣಂ' ರೋಮಗಳಿರತಕ್ಕ ಬಾಲವನ್ನು ಪಡೆದಿರುವುದು ಪಶುವಿನ ಲಕ್ಷಣ. ಪಶುವೆಂದರೆ ಯಾವ ಪ್ರಾಣಿಯೆಂಬುದನ್ನು ಪರಿಚಯಮಾಡಿಕೊಡುವಾಗ ಈ ಲಕ್ಷಣವನ್ನು ಹೇಳಲಾಗುತ್ತದೆ. ಹಸು, ಎಮ್ಮೆ, ಕುದುರೆ, ಕುರಿ, ಹುಲಿ, ಸಿಂಹ ಮೊದಲಾದ ಎಲ್ಲ ಪಶುಗಳಿಗೂ ರೋಮವಿರುವ ಬಾಲವಿರುತ್ತದೆ. ಇಲ್ಲಿ 'ರೋಮವಿರುವ' ಎಂಬ ವಿಶೇಷಣವನ್ನು ಸೇರಿಸದೆ 'ಬಾಲವನ್ನು ಪಡೆದಿರುವುದು ಪಶುವಿನ ಲಕ್ಷಣ' ಎಂದಿಷ್ಟೇ ಹೇಳಿದರೆ ಅತಿವ್ಯಾಪ್ತಿ ದೋಷ ಬರುತ್ತದೆ. ಹೇಗೆಂದರೆ – ಹಲ್ಲಿ, ಹಾವು, ಮೊಸಳೆ, ಮೀನು ಮೊದಲಾದ ಪ್ರಾಣಿಗಳಿಗೆ ಬಾಲವಿರುತ್ತದೆ. ಬಾಲದಲ್ಲಿ ರೋಮಗಳಿಲ್ಲ. ಆದ್ದರಿಂದ ರೋಮವಿರುವ ಬಾಲ ಎಂದು ಹೇಳಲೇಬೇಕು. ಇನ್ನು 'ಲಾಂಗೂಲ' ಎಂಬುದನ್ನು ಬಿಟ್ಟು 'ರೋಮವತ್ತ್ವಂ ಪಶೋರ್ಲಕ್ಷಣಂ' ಎಂದು ಹೇಳಿದರೆ ಹೇಗೆ ? ಆಗಲೂ ಅತಿವ್ಯಾಪ್ತಿ ಇದೆ. ಮನುಷ್ಯನಲ್ಲಿ ರೋಮವಿರುವುದರಿಂದ ಅವನು ಪಶುವಾಗಬೇಕಾಗುತ್ತದೆ ! ಈ ರೀತಿ ಲಕ್ಷಣದಲ್ಲಿರುವ ಒಂದೊಂದು ಪದಕ್ಕೂ ಪ್ರಯೋಜನವನ್ನು ಹೇಳಬೇಕು. ಇದಕ್ಕೆ

ದಳಕೃತ್ಯ ಎಂದು ಹೆಸರು. ದಳವೆಂದರೆ ವಿಶೇಷಣ, ಕೃತ್ಯವೆಂದರೆ ಪ್ರಯೋಜನ. ಮೇಲೆ ಮೂರು ಬಗೆಯ ದೋಷಗಳ ಹೆಸರನ್ನು ಹೇಳಿದೆ. ಅವುಗಳಿಗೆ ಇವು ಉದಾಹರಣೆಗಳು—

೧. **ಅವ್ಯಾಪ್ತಿ** – 'ಲಕ್ಷ್ಯೈಕದೇಶಾವೃತ್ತಿತ್ವಮವ್ಯಾಪ್ತಿಃ' ಲಕ್ಷ್ಯದ ಎಂದರೆ ಯಾವುದಕ್ಕೆ ಲಕ್ಷಣವನ್ನು ಹೇಳುತ್ತೇವೋ ಅದರ ಒಂದಂಶದಲ್ಲಿ ಲಕ್ಷಣ ವಿಲ್ಲದೆ ಹೋದರೆ ಅವ್ಯಾಪ್ತಿ ದೋಷ ಬರುತ್ತದೆ.

ಉದಾ:– 'ಕೆಂಪಾಗಿರುವುದು ಹಸುವಿನ ಲಕ್ಷಣ'. ಈ ಲಕ್ಷಣವು ಕಪ್ಪಾದ ಅಥವಾ ಬಿಳಿಯ ಹಸುವಿನಲ್ಲಿಲ್ಲ. ಇದು ಅವ್ಯಾಪ್ತಿಯಿಂದ ಕೂಡಿದ ದುಷ್ಟ ಲಕ್ಷಣ.

೨. **ಅತಿವ್ಯಾಪ್ತಿ**–'ಅಲಕ್ಷ್ಯವೃತ್ತಿತ್ವಮತಿವ್ಯಾಪ್ತಿಃ' ಲಕ್ಷ್ಯವಲ್ಲದ್ದರಲ್ಲಿ ಲಕ್ಷಣ ಬಂದರೆ ಅತಿವ್ಯಾಪ್ತಿ ದೋಷ

ಉದಾ :– ಕೊಂಬಿರುವುದು ಗೋವಿನ ಲಕ್ಷಣ. ಕೊಂಬು ಎಮ್ಮೆಗೂ ಇರುತ್ತದೆ, ಕುರಿಗೂ ಇರುತ್ತದೆ, ಜಿಂಕೆಗೂ ಇರುತ್ತದೆ.

೩. **ಅಸಂಭವ** – 'ಲಕ್ಷ್ಯಮಾತ್ರಾವರ್ತನಮಸಂಭವಃ' ಯಾವುದೇ ಒಂದು ಲಕ್ಷ್ಯದಲ್ಲಿಯೂ ಇಲ್ಲದೆ ಹೋಗುವುದು ಅಸಂಭವವೆಂಬ ದೋಷ.

ಉದಾ :– 'ಸೀಳಾಗದಿರುವ ಒಂದೇ ಗೊರಸು ಇರುವುದು ಗೋವಿನ ಲಕ್ಷಣ.' ಪ್ರತಿಯೊಂದು ಗೋವಿನ ಗೊರಸೂ ಸೀಳಾಗಿರುತ್ತದೆ. ಸೀಳಾಗದಿರುವ ಗೊರಸು ಯಾವ ಗೋವಿಗೂ ಇಲ್ಲ, ಆದ್ದರಿಂದ ಇದು ಅಸಂಭವದೋಷಯುಕ್ತವಾಗಿವೆ. ಈ ಮೂರು ದೋಷಗಳಲ್ಲಿ ಯಾವುದೂ ಲಕ್ಷಣದಲ್ಲಿರಬಾರದು. ಇದ್ದರೆ ಆ ವಾದಿಯು ಸೋತನೆಂದು ತಿಳಿಯಬೇಕು.

ಮೇಲ್ಕಂಡ ಮೂರು ದೋಷಗಳಿಲ್ಲದ ಅಸಾಧಾರಣಧರ್ಮವು ಲಕ್ಷಣ ವೇನೋ ಆಗುತ್ತದೆ. ಆದರಲ್ಲಿಯೂ ಇನ್ನು ಮೂರು ದೋಷಗಳು ಬರುವ ಸಂಭವ ಇರುತ್ತದೆ. ಆತ್ಮಾಶ್ರಯ, ಅನ್ಯೋನ್ಯಾಶ್ರಯ, ಚಕ್ರಕ – ಎಂಬ

ಹೆಸರಿನವು ಈ ದೋಷಗಳು. ಶಾಸ್ತ್ರದಲ್ಲಿ ಇವು ತಿರಸ್ಕೃತವಾಗಿರುವುದರಿಂದ ಲಕ್ಷಣವನ್ನು ಹೇಳುವಾಗ ತುಂಬ ಎಚ್ಚರದಿಂದಿರಬೇಕಾಗುತ್ತದೆ. ಇವುಗಳ ವಿವರಣೆ ಇಂತಿದೆ—

೧. **ಆತ್ಮಾಶ್ರಯ :** ಒಂದು ವಸ್ತುವಿನ ಪರಿಚಯಮಾಡಿಸುವುದಕ್ಕಾಗಿ ಲಕ್ಷಣವನ್ನು ಹೇಳುತ್ತೇವೆ. ಆ ಲಕ್ಷಣದಲ್ಲಿಯೇ ಆ ವಸ್ತುವೂ ಸೇರಿ ಹೋಗಿದ್ದರೆ ವಸ್ತುವನ್ನು ಪರಿಚಯಮಾಡಿಕೊಟ್ಟಂತಾಗುವುದಿಲ್ಲ. ಆತ್ಮಾಶ್ರಯವು ಸ್ವಗ್ರಹಸಾಪೇಕ್ಷಗ್ರಹಕ. ಗ್ರಹ ಎಂದರೆ ಜ್ಞಾನ. ತನ್ನ ಜ್ಞಾನವಾದ ಮೇಲೆ ತನ್ನ ಲಕ್ಷಣದ ಜ್ಞಾನವಾಗುವುದಾದರೆ ಆತ್ಮಾಶ್ರಯ

ಉದಾ: ಜ್ವರದ ಲಕ್ಷಣವೇನು ? ಎಂದು ಪ್ರಶ್ನೆ. ಜ್ವರದ ಚಿಹ್ನೆಗಳಿರುವ ರೋಗವೇ ಜ್ವರ ಎಂದು ಉತ್ತರ ! ಜ್ವರವೆಂದರೇನೆಂಬುದೇ ಗೊತ್ತಿಲ್ಲದವನಿಗೆ ಜ್ವರದ ಚಿಹ್ನೆಗಳು ಯಾವುವೆಂದು ಗೊತ್ತಿರುತ್ತದೆಯೇ ? ಇಲ್ಲಿ ತನ್ನ ಎಂದರೆ – ಜ್ವರದ ಜ್ಞಾನವಾದ ಮೇಲೆಯೇ ತನ್ನ ಲಕ್ಷಣದ ಜ್ಞಾನವಾಗಿ ತನ್ನ ಜ್ಞಾನವಾಗುತ್ತದೆ. ಲಕ್ಷಣವು ಈ ರೀತಿ ಇರಬಾರದು.

೨. **ಅನ್ಯೋನ್ಯಾಶ್ರಯ :** ಇದು ಆತ್ಮಾಶ್ರಯಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿರುತ್ತದೆ. ಸ್ವಗ್ರಹಸಾಪೇಕ್ಷಗ್ರಹಾಪೇಕ್ಷಗ್ರಹಕ ಇದು. ತನ್ನ ಜ್ಞಾನವಾಗುವುದಕ್ಕೆ ಬೇಕಾದ ಇನ್ನೊಂದು ಪದಾರ್ಥದ ಜ್ಞಾನಕ್ಕೆ ಮತ್ತೆ ತನ್ನ ಜ್ಞಾನವೇ ಅಪೇಕ್ಷಿತವಾದರೆ ಅನ್ಯೋನ್ಯಾಶ್ರಯವಾಗುತ್ತದೆ.

ಉದಾ : ರಾಮನು ಯಾರು ? ದಶರಥನ ಮಗ ರಾಮ. ದಶರಥನೆಂದರೆ ಯಾರು ? ರಾಮನ ತಂದೆ. ಇಲ್ಲಿ ರಾಮ, ದಶರಥ – ಈ ಇಬ್ಬರ ಪರಿಚಯವೂ ಇಲ್ಲದವರಿಗೆ ರಾಮನ ಪರಿಚಯ ಮಾಡಿಕೊಡಲು ಹೀಗೆ ಹೇಳಿದರೆ ಅನ್ಯೋನ್ಯಾಶ್ರಯವಾಗುತ್ತದೆ. ರಾಮನು ಯಾರೆಂದು ತಿಳಿಯುವುದೇ ಇಲ್ಲ.

೩. **ಚಕ್ರಕ :** ಇದು ಅನ್ಯೋನ್ಯಾಶ್ರಯಕ್ಕಿಂತ ಮುಂದೆ ಹೋಗುತ್ತದೆ. ಮೂರನೆಯ ವಸ್ತುವಿನ ಜ್ಞಾನವು ಮೊದಲನೆಯ ವಸ್ತುವಿನ ಜ್ಞಾನ

ವನ್ನೇ ಬಯಸುತ್ತದೆ. ಹೀಗೆ ತನ್ನ ಬಳಿಗೇ ಲಕ್ಷಣವು ಚಕ್ರದಂತೆ ಸುತ್ತುವುದರಿಂದ ಚಕ್ರಕವೆಂದು ಹೆಸರು.

ಉದಾ : ಬೆಳ್ಳಿಯೆಂದರೆ ಯಾವುದು ? ತವರಕ್ಕಿಂತ ಭಿನ್ನವಾದ ಬಿಳಿಯ ಲೋಹ. ತವರವೆಂದರೆ ಯಾವುದು? ಅಲ್ಯೂಮಿನಿಯಂಗಿಂತ ಭಿನ್ನವಾದ ಬಿಳಿಯ ಲೋಹ. ಅಲ್ಯೂಮಿನಿಯಂ ಯಾವುದು? ಬೆಳ್ಳಿಗಿಂತ ಭಿನ್ನವಾದ ಮತ್ತು ಹಗುರವಾದ ಬಿಳಿಯ ಲೋಹ. ಹೀಗೆ ಹೇಳಿದರೆ ಬೆಳ್ಳಿಯ ಪರಿಚಯವಾಗುವುದೇ ಇಲ್ಲ. ಅಲ್ಯೂಮಿನಿಯಂ ಪರಿಚಯವಾಗ ಬೇಕಾದರೆ ಮತ್ತೆ ಬೆಳ್ಳಿಯ ಪರಿಚಯ ಬೇಕು. ಬೆಳ್ಳಿಯ ಪರಿಚಯವಾಗ ಬೇಕಾದರೆ ಅಲ್ಯೂಮಿನಿಯಂ ಪರಿಚಯ ಬೇಕು. ಅದರ ಪರಿಚಯಕ್ಕೆ ಬೆಳ್ಳಿಯ ಜ್ಞಾನ ಬೇಕಾಗುತ್ತದೆ. ಹೀಗೆ ಲಕ್ಷಣವು ಮೂರರಲ್ಲೇ ಸುತ್ತುವರಿಯುತ್ತದೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಅನವಸ್ಥಾದೋಷ ವೆನಿಸುತ್ತದೆ. ಹೀಗೆಯೇ ಒಂದು ವಸ್ತುವನ್ನು ಪರಿಚಯ ಮಾಡಿ ಕೊಡುವ ಲಕ್ಷಣಗಳನ್ನು ಹೇಳುವಾಗ ಇನ್ನೂ ಮೂರು ದೋಷಗಳು ಬರುವ ಸಂಭವವಿರುತ್ತದೆ. ಹಿಂದೆ ಹೇಳಿದ ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವಗಳಿಲ್ಲದಂತೆ ಅಸಾಧಾರಣ ಧರ್ಮವನ್ನು ಹೇಳಿರಬಹುದು. ಈ ಅಸಾಧಾರಣ ಧರ್ಮದಲ್ಲಿಯೇ ಮತ್ತೆ ಮೂರು ದೋಷಗಳುಂಟಾಗ ಬಹುದು. ಆದ್ದರಿಂದ ಶಾಸ್ತ್ರದಲ್ಲಿ ವಾದಪ್ರತಿವಾದಗಳನ್ನು ಮಾಡುವುದು ಸುಲಭವಲ್ಲ, ಈ ರೀತಿ ಲಕ್ಷಣದ ಗೋಜಿಗೆ ಹೋಗದೆ ಬರಿಯ ಪ್ರಶ್ನೋತ್ತರಗಳಿಂದಲೇ ವಾದವು ಮುಂದುವರಿಯಲು ಸಾಧ್ಯವಿದೆ. ಉತ್ತರ ಕೊಡತಕ್ಕವನು ಬಹುಶ್ರುತನಾಗಿರಬೇಕು. ಈ ವಾದದಲ್ಲಿ ಪರಸ್ಪರ ಪ್ರಶ್ನೋತ್ತರಗಳೂ ನಡೆಯುಬಹುದು. ವಾದಿಯ ಆಕ್ಷೇಪಕ್ಕೆ ಪ್ರತಿವಾದಿಯೂ ಸಮಾಧಾನ ಹೇಳಬೇಕಾಗುತ್ತದೆ. ಆಗ ಪ್ರತಿವಾದಿಯು ವಾದಿಯಂತೆ ತನ್ನ ಪ್ರತಿಪಾದವನ್ನು ಸ್ಥಾಪಿಸಬೇಕಾಗು ತ್ತದೆ. ಆದ್ದರಿಂದ ಪ್ರತಿವಾದಿಯೂ ವಾದಿಗಳ ಗುಂಪಿನಲ್ಲಿಯೇ ಸೇರಿ ಹೋಗುತ್ತಾನೆ. ಹಾಗಲ್ಲದೆ ಪೃಚ್ಛಕರು ಕೇಳುವ ಎಲ್ಲ ಪ್ರಶ್ನೆಗಳಿಗೂ

ಸಮರ್ಥವಾಗಿ ಉತ್ತರಿಸಬಲ್ಲ ವಾದಿಯೂ ಇರುತ್ತಾನೆ. ಈ ಬಗೆಯ ವಾದಕ್ಕೆ ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದು ಸುಂದರವಾದ ಉದಾಹರಣೆ ದೊರೆಯುತ್ತದೆ—

ವಿದೇಹರಾಜನಾದ ಜನಕನು ಬಹಳ ದಕ್ಷಿಣೆಯನ್ನು ಕೊಡಬೇಕಾದ ಒಂದು ಮಹಾಯಾಗವನ್ನು ನಡೆಸಿದನು. ಕಡೆಯ ದಿನ ಋತ್ವಿಜರಿಗೆ ಸಂಭಾವನೆಯನ್ನು ಕೊಡುವ ಪ್ರಸಂಗದಲ್ಲಿ ಒಂದು ಅದ್ಭುತವಾದ ಸಂದರ್ಭವನ್ನುಂಟು ಮಾಡಿದನು. ಒಂದು ಸಾವಿರ ಗೋವುಗಳನ್ನು ತರಿಸಿ ಒಂದೊಂದು ಹಸುವಿನ ಒಂದೊಂದು ಕೊಂಬಿಗೆ ೫ ಸುವರ್ಣ ನಾಣ್ಯಗಳಂತೆ ಕಟ್ಟಿಸಿದನು. ಒಂದು ಹಸುವಿಗೆ ಹತ್ತು ನಾಣ್ಯಗಳಂತೆ ಸಾವಿರ ಹಸುಗಳಿಗೂ ನಾಣ್ಯಗಳನ್ನು ಕಟ್ಟಲಾಯಿತು. ಸಭೆಯಲ್ಲಿ ನಾನಾ ದೇಶಗಳಿಂದ ಬಂದಿದ್ದ ಘನ ವಿದ್ವಾಂಸರು ಕುಳಿತಿದ್ದರು. ಇವರಲ್ಲಿ ಶ್ರೇಷ್ಠನಾದ ಬ್ರಹ್ಮಜ್ಞಾನಿ ಯಾರೆಂಬುದನ್ನು ತಿಳಿಯಲು ಜನಕರಾಜನಿಗೆ ಕುತೂಹಲ ಉಂಟಾಯಿತು. ಅವನು ಆ ಬ್ರಾಹ್ಮಣರನ್ನು ಉದ್ದೇಶಿಸಿ “ಭಗವಂತರಾದ ಬ್ರಾಹ್ಮಣೋತ್ತಮರೆ, ಇಲ್ಲಿ ಒಂದು ಸಾವಿರ ಗೋವುಗಳಿವೆ. ಒಂದೊಂದು ಗೋವಿಗೆ ಹತ್ತು ಸುವರ್ಣ ನಾಣ್ಯಗಳಂತೆ ಇವುಗಳ ಕೊಂಬಿಗೆ ಹತ್ತು ಸಾವಿರ ಸುವರ್ಣ ನಾಣ್ಯಗಳನ್ನು ಕಟ್ಟಿಸಿದ್ದೇನೆ. ಈ ಸಭೆಯಲ್ಲಿರುವ ಬ್ರಹ್ಮಜ್ಞಾನಿಗಳಲ್ಲಿ ಯಾರು ಸರ್ವೋತ್ತಮರೋ ಅವರು ಈ ಎಲ್ಲ ಗೋವುಗಳನ್ನೂ ಒಯ್ಯಬಹುದು. ಆ ಮಹಾಬ್ರಹ್ಮಜ್ಞಾನಿಗೆ ಈ ಗೋವುಗಳನ್ನು ದಕ್ಷಿಣೆಯಾಗಿ ಅರ್ಪಿಸಿದ್ದೇನೆ” ಎಂದು ಘೋಷಿಸಿದನು.

ಬ್ರಾಹ್ಮಣ ಸಭೆಯಲ್ಲಿ ಗುಸುಗುಸು ಪ್ರಾರಂಭವಾಯಿತು. ಆದರೆ ಯಾರಿಗೂ ಮೇಲಕ್ಕೇಳಲು ಧೈರ್ಯವಿಲ್ಲ. ಎಲ್ಲರೂ ಸುಮ್ಮನೆ ಕುಳಿತರು. ಆಗ ಯಾಜ್ಞವಲ್ಕ್ಯ ಮಹರ್ಷಿಗಳು ಮೇಲೆದ್ದು ತಮ್ಮ ಶಿಷ್ಯನಾದ ಬ್ರಹ್ಮಚಾರಿಯನ್ನು ಕರೆದು “ಸೋಮಶ್ರವ, ಈ ಎಲ್ಲ ಗೋವುಗಳನ್ನು ನಮ್ಮ ಆಶ್ರಮಕ್ಕೆ ಹೊಡೆಸಿಕೊಂಡು ಹೋಗು !” ಎಂದು ಆಜ್ಞಾಪಿಸಿದರು. ಆಗ ಉಳಿದ ಬ್ರಾಹ್ಮಣರಿಗೆ ಅಸೂಯೆ ಹುಟ್ಟಿತು. “ಏನು ? ಈ ಯಾಜ್ಞವಲ್ಕ್ಯನು ಎಲ್ಲರಿಗಿಂತಲೂ ಶ್ರೇಷ್ಠನಾದ ಬ್ರಹ್ಮಜ್ಞಾನಿಯೋ ? ಎಷ್ಟು ಇವನ ಅಹಂಕಾರ !” ಎಂದು ಸಿಟ್ಟಿನಿಂದ ಹೇಳಲಾರಂಭಿಸಿದರು. ಜನಕರಾಜನ

ಪುರೋಹಿತನಾದ ಅಶ್ವಲನು "ಓ ಯಾಜ್ಞವಲ್ಕ್ಯ, ನಿನಗೆ ಇಷ್ಟು ಅಹಂಕಾರ ಹುಟ್ಟಿತೆ ? ಇಲ್ಲಿ ಘನವಿದ್ವಾಂಸರಾದ ಬ್ರಹ್ಮಜ್ಞಾನಿಗಳಿದ್ದಾರೆ. ಇವರೆಲ್ಲರಿಗಿಂತ ನೀನು ಶ್ರೇಷ್ಠನೆಂದು ಭಾವಿಸಿದ್ದೀಯಾ ?" ಎಂದು ಗದರಿಸಿ ಮಾತಾಡಿದನು. ಆಗ ಯಾಜ್ಞವಲ್ಕ್ಯರು ಸಭೆಗೆ ಕೈಮುಗಿದು "ಓ ಬ್ರಾಹ್ಮಣೋತ್ತಮರೆ, ಬ್ರಹ್ಮಿಷ್ಠನಾದ ಪ್ರತಿಯೊಬ್ಬ ವಿದ್ವಾಂಸನಿಗೂ ನನ್ನ ನಮಸ್ಕಾರಗಳು. ನೀವೆಲ್ಲರೂ ಮಹಾರಾಜನ ಮಾತನ್ನು ಆಲಿಸಿದ ಮೇಲೆ ಸುಮ್ಮನೆ ಕುಳಿತುಕೊಂಡಿದ್ದೀರಿ. ನನಗಾದರೋ ನನ್ನ ಆಶ್ರಮವನ್ನು ನಡೆಸಿಕೊಂಡು ಹೋಗಲು ಈ ಗೋವುಗಳು ಬೇಕಾಗಿದ್ದವು ! ಆದ್ದರಿಂದ ಇವನ್ನು ಒಯ್ಯುವಂತೆ ನನ್ನ ಶಿಷ್ಯನಿಗೆ ಹೇಳಿದೆ ! ಎಂದರು. ಅಶ್ವಲನು "ಹಾಗಿದ್ದರೆ ನೀನು ಬ್ರಹ್ಮಿಷ್ಠನೆಂದು ಭಾವಿಸಿದ್ದೀಯೆ–ಎಂದಾಯಿತು. ನನ್ನ ಪ್ರಶ್ನೆಗಳಿಗೆ ಉತ್ತರ ಕೊಡು !" ಎಂದನು. "ಯಥೇಚ್ಛವಾಗಿ ಪ್ರಶ್ನೆ ಕೇಳಬಹುದು" ಎಂದು ಯಾಜ್ಞವಲ್ಕ್ಯರು ನುಡಿದರು. ಅಶ್ವಲನು ಪ್ರಶ್ನಿಸಲಾರಂಭಿಸಿ ವೇದಾಂತಕ್ಕೆ ಸಂಬಂಧಿಸಿದ ಕಠಿನವಾದ ಹಲವಾರು ಸಮಸ್ಯೆಗಳನ್ನು ಮುಂದಿಟ್ಟನು. ಎಲ್ಲವಕ್ಕೂ ಯಾಜ್ಞವಲ್ಕ್ಯರಿಂದ ಸಮರ್ಪಕವಾದ ಉತ್ತರ ಬಂದಿತು ಅಶ್ವಲನು ಸುಸ್ತಾಗಿ ತೆಪ್ಪಗೆ ಕುಳಿತನು.

ಅನಂತರ ಜರತ್ಕಾರವನೆಂಬ ವೇದಾಂತಿಯು ಯಾಜ್ಞವಲ್ಕ್ಯರಿಗೆ ಪ್ರಶ್ನೆಗಳನ್ನು ಹಾಕುತ್ತಾನೆ. ಎಲ್ಲ ಪ್ರಶ್ನೆಗಳಿಗೂ ಸಮಂಜಸವಾದ ಉತ್ತರ ದೊರೆಯುತ್ತದೆ. ಹೀಗೆಯೇ ಭುಜ್ಯ, ಚಾಕ್ರಾಯಣ, ಕಹೋಲ–ಎಂಬವರು ಕ್ರಮವಾಗಿ ಯಾಜ್ಞವಲ್ಕ್ಯರಿಗೆ ಪ್ರಶ್ನೆಗಳನ್ನಿತ್ತು ಪರೀಕ್ಷಿಸುತ್ತಾರೆ ಯಾಜ್ಞವಲ್ಕ್ಯರಿಂದ ತಡವಿಲ್ಲದೆ ತಡೆಯಿಲ್ಲದ ಉತ್ತರಗಳು ಬರುತ್ತವೆ ಅನಂತರ ಗಾರ್ಗಿ ಎಂಬ ವಿದುಷಿಯು ಯಾಜ್ಞವಲ್ಕ್ಯರಿಗೆ ಪ್ರಶ್ನೆಗಳನ್ನು ಹಾಕಲಾರಂಭಿಸುತ್ತಾಳೆ. "ಯಾಜ್ಞವಲ್ಕ್ಯರೆ, ಈ ಪೃಥ್ವಿಯು ಜಲದಲ್ಲಿ ಓತಪ್ರೋತವಾಗಿ ನೆಲಸಿದೆಯಷ್ಟೆ ! ಜಲವು ಯಾವುದರಲ್ಲಿ ಓತಪ್ರೋತವಾಗಿ ನಿಂತಿದೆ ?" ಎಂಬುದು ಅವಳ ಮೊದಲನೆಯ ಪ್ರಶ್ನೆ. ಅಭಿಪ್ರಾಯವೇನೆಂದರೆ, ಪೃಥ್ವಿಯ ಹೊರಗಡೆ ಸುತ್ತಲೂ ಜಲವಿದೆ. ಪೃಥ್ವಿಯ ಒಳಭಾಗದಲ್ಲೂ ಜಲವಿದೆ. ಅಲ್ಲದೆ 'ಅದ್ಭ್ಯಃ ಪೃಥಿವೀ' ಇತ್ಯಾದಿ ಶ್ರುತಿಗಳಿಂದ ಪೃಥ್ವಿಯು ಜಲದಿಂದ ನಿರ್ಮಿತವಾಗಿದೆಯೆಂದೂ ಅದಕ್ಕೆ ಜಲವು ಕಾರಣವೆಂದೂ ತಿಳಿದು

ಬರುತ್ತದೆ. ಸೂಕ್ಷ್ಮವಾದ ಕಾರಣವು ಕಾರ್ಯದಲ್ಲಿ ಓತಪ್ರೋತವಾಗಿ ಸೇರಿರುತ್ತದೆ. ಮಣ್ಣು ಗಡಿಗೆಯಲ್ಲಿ ಸೇರಿರುವ ಹಾಗೆ-ಎಂದು, ಜಲಕ್ಕೆ ಮೂಲ ಕಾರಣ ಯಾವುದೆಂದು ಗಾರ್ಗಿಯ ಪ್ರಶ್ನೆಯಾಗಿದೆ. ಅದಕ್ಕೆ ಯಾಜ್ಞವಲ್ಕ್ಯರು ಉತ್ತರ ಹೇಳುತ್ತಾರೆ. ಅವರು ಉತ್ತರ ಹೇಳಿದ ಕೂಡಲೆ "ಅದು ಯಾವುದರಲ್ಲಿ ಓತಪ್ರೋತವಾಗಿದೆ ? ಅದು ಯಾವುದರಲ್ಲಿ ಓತಪ್ರೋತವಾಗಿದೆ ?" ಎಂದು ಕೇಳುತ್ತಲೇ ಇರುತ್ತಾಳೆ. ಯಾಜ್ಞವಲ್ಕ್ಯರ ಉತ್ತರವು ಕ್ರಮೇಣ ಪ್ರಜಾಪತಿ ಲೋಕದ ವರೆಗೆ ಹೋಗುತ್ತವೆ. "ಪ್ರಜಾಪತಿ ಲೋಕವು ಯಾವುದರಲ್ಲಿ ಓತಪ್ರೋತವಾಗಿದೆ ?" ಗಾರ್ಗಿಯ ಪ್ರಶ್ನೆ. ಪರಬ್ರಹ್ಮವೆಂದು ಯಾಜ್ಞವಲ್ಕ್ಯರ ಉತ್ತರ. ಪರಬ್ರಹ್ಮವು ಯಾವುದರಲ್ಲಿ ಓತಪ್ರೋತವಾಗಿದೆ ? ಎಂದು ಗಾರ್ಗಿಯ ಪ್ರಶ್ನೆ. ಆಗ ಯಾಜ್ಞವಲ್ಕ್ಯರು ಗಾರ್ಗಿಯನ್ನು ದಿಟ್ಟಿಸಿ ನೋಡಿ "ಗಾರ್ಗಿ, ನಿನ್ನ ಪ್ರಶ್ನೆ ಅತಿಯಾಯಿತು. 'ಸ್ವೇಮಹಿಮ್ನಿ ಪ್ರತಿಷ್ಠಿತ'ವೂ ಅಜವೂ ಅಮರವೂ ಸರ್ವಲೋಕಾಧಿಷ್ಠಾನವೂ ಆದ ಬ್ರಹ್ಮವಸ್ತುವಿಗೆ ಕಾರಣ ಯಾವುದೆಂದು ಕೇಳುವೆಯಾ ? ನಿಲ್ಲಿಸು. ಇನ್ನೊಮ್ಮೆ ಕೇಳಿದರೆ ನಿನ್ನ ತಲೆ ಉರುಳಿಬಿದ್ದೀತು !" ಎಂದರು. ಗಾರ್ಗಿ ಮಾತಾಡದೆ ಕುಳಿತುಕೊಂಡಳು.

ಆ ಮೇಲೆ ಉದ್ದಾಲಕನೆಂಬ ಪಂಡಿತನು "ಯಾಜ್ಞವಲ್ಕ್ಯ, ಬ್ರಹ್ಮಜ್ಞಾನಿಯಾದ ಒಬ್ಬ ಗಂಧರ್ವನು ಎರಡು ವಿಷಯಗಳನ್ನು ನನಗೆ ತಿಳಿಸಿಕೊಟ್ಟಿದ್ದಾನೆ ಅವನ್ನು ಕುರಿತು ನಾನು ಪ್ರಶ್ನೆಮಾಡುತ್ತೇನೆ. ಸಮರ್ಪಕವಾದ ಉತ್ತರವನ್ನು ನೀನು ಹೇಳಬೇಕು. ಉತ್ತರ ಹೇಳದೆ ಈ ಹಸುಗಳನ್ನು ನೀನು ಒಯ್ಯುವೆಯಾದರೆ ನಿನ್ನ ತಲೆ ಹೋಳುಹೋಳಾದೀತು !" ಎನ್ನುತ್ತಾನೆ. ಆ ಮೇಲೆ ಅವನು ಕೇಳಿದ ಎರಡು ಪ್ರಶ್ನೆಗಳಿಗೂ ಯಾಜ್ಞವಲ್ಕ್ಯರಿಂದ ಸಮರ್ಪಕವಾದ ಉತ್ತರ ದೊರೆಯುತ್ತದೆ. ಉದ್ದಾಲಕನು ತೆಪ್ಪಗೆ ಕುಳಿತುಕೊಳ್ಳುತ್ತಾನೆ.

ಹಿಂದೆ ಪ್ರಶ್ನೆಗಳನ್ನು ಕೇಳಿದ್ದ ಗಾರ್ಗಿಯು ಮತ್ತೆ ಎದ್ದು ನಿಂತು ಸಭೆಯನ್ನುದ್ದೇಶಿಸಿ "ಪೂಜ್ಯರಾದ ಬ್ರಾಹ್ಮಣೋತ್ತಮರೆ, ಈಗ ನಾನು ಯಾಜ್ಞವಲ್ಕ್ಯರಿಗೆ ಎರಡು ಪ್ರಶ್ನೆಗಳನ್ನು ಹಾಕಲಿದ್ದೇನೆ. ಅವುಗಳಿಗೇನಾದರೂ ಅವರು ಸರಿಯಾದ ಉತ್ತರವನ್ನು ಹೇಳಿಬಿಟ್ಟರೆ, ಈ ಯಾಜ್ಞವಲ್ಕ್ಯರನ್ನು ಸರ್ವೋತ್ತಮ ಜ್ಞಾನಿಗಳೆಂದು ಎಲ್ಲರೂ ಒಪ್ಪಬಹುದು. ಅವರನ್ನು

ಗೆಲ್ಲುವುದಕ್ಕೆ ಸಾಧ್ಯವಾಗುವುದೇ ಇಲ್ಲವೆಂದು ತಿಳಿಯಿರಿ !" ಎನ್ನುತ್ತಾಳೆ. ಯಾಜ್ಞವಲ್ಕ್ಯರು, "ಗಾರ್ಗಿ. ನಿನ್ನ ಪ್ರಶ್ನೆಗಳೇನು? ಹೇಳು" ಎನ್ನುತ್ತಾರೆ. ಗಾರ್ಗಿಯು ಆಗ ಎರಡು ಪ್ರಶ್ನೆಗಳನ್ನು ಹಾಕುತ್ತಾಳೆ. ಅವುಗಳಿಗೂ ಸಮಂಜಸ ವಾದ ಸಮಾಧಾನವು ಯಾಜ್ಞವಲ್ಕ್ಯರಿಂದ ಬರುತ್ತದೆ. ಆಗ ಗಾರ್ಗಿಯು "ಬ್ರಾಹ್ಮಣೋತ್ತಮರೆ, ಇನ್ನು ಯಾಜ್ಞವಲ್ಕ್ಯರಿಗೆ ಸರ್ವರೂ ನಮಸ್ಕಾರ ಮಾಡಿರಿ. ಇವರನ್ನು ಗೆಲ್ಲಲು ಸಾಧ್ಯವೆಂದು ಮನಸ್ಸಿನಲ್ಲಿಯೂ ಆಲೋಚಿಸ ಬೇಡಿರಿ !" ಎಂದು ಹೇಳುತ್ತಾಳೆ.

ಇಷ್ಟಾದರೂ ಶಾಕಲ್ಯನೆಂಬ ವಿದ್ವಾಂಸನು ಯಾಜ್ಞವಲ್ಕ್ಯರಿಗೆ ಪ್ರಶ್ನೆ ಗಳನ್ನು ಹಾಕಲು ಪ್ರಾರಂಭಿಸುತ್ತಾನೆ. ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸು ತ್ತಾನೆ. ಪ್ರತಿಯೊಂದು ಪ್ರಶ್ನೆಗೂ ಯಾಜ್ಞವಲ್ಕ್ಯರಿಂದ ಉತ್ತರಬರುತ್ತದೆ. ಶಾಕಲ್ಯನ ಪ್ರಶ್ನೆಗಳಿಗೆ ಅಂತ್ಯವೇ ಇಲ್ಲದಂತೆ ಕಾಣುತ್ತದೆ. ಆಗ ಯಾಜ್ಞ ವಲ್ಕ್ಯರು ಕ್ರೋಧದಿಂದ "ಶಾಕಲ್ಯ, ಬೆಂಕಿಯೊಳಗೆ ಸೌದೆಯು ನುಗ್ಗಿದಂತೆ ನಿನ್ನ ಪರಿಸ್ಥಿತಿಯಾಗಿದೆ. ಈ ಬ್ರಾಹ್ಮಣರು ಸೌದೆಯಂತೆ ನಿನ್ನನ್ನು ಬೆಂಕಿ ಯೊಳಗೆ ತಳ್ಳುತ್ತ ನಿನ್ನನ್ನು ಪ್ರೇರಿಸುತ್ತಿದ್ದಾರೆ ; ಎಚ್ಚರ !" ಎಂದರು. ಶಾಕಲ್ಯನು ಅದನ್ನು ಲೆಕ್ಕಿಸಲೇ ಇಲ್ಲ. ಪ್ರಶ್ನೆಗಳನ್ನು ಕೇಳುತ್ತಲೇ ಹೋದನು. ಕಡೆಗೆ ಯಾಜ್ಞವಲ್ಕ್ಯರು ಅವನ ಪ್ರಶ್ನೆಯನ್ನೇ ತಿರುಗಿಸಿ "ಶಾಕಲ್ಯ, ನಾನು ಕೇಳುವ ಪ್ರಶ್ನೆಗೆ ಉತ್ತರಹೇಳು, ಹೇಳಲಾಗದಿದ್ದರೆ ನೀನು ಸುಟ್ಟು ಬೂದಿ ಯಾಗುತ್ತೀಯೆ !" ಎಂದರು. ಶಾಕಲ್ಯನಿಗೆ ಉತ್ತರಿಸಲಾಗಲಿಲ್ಲ. ಒಡನೆಯೇ ಅವನು ಸುಟ್ಟು ಬೂದಿಯಾದನು. ಆ ಮೇಲೆ ಯಾಜ್ಞವಲ್ಕ್ಯರು "ಎಲೈ ವಿದ್ವಾಂಸರೆ, ನೀವೀಗ ಪ್ರಶ್ನೆಯನ್ನು ಕೇಳಬಹುದು. ಒಬ್ಬೊಬ್ಬರಾಗಿ ಕೇಳಿ ಅಥವಾ ಒಟ್ಟಿಗೇ ಮುಂದಿಡಿರಿ, ಉತ್ತರಿಸುತ್ತೇನೆ" ಎಂದರು. ಒಬ್ಬರೂ ತುಟಿಪಿಟಕ್ಕೆನಿಸದೆ ಸುಮ್ಮನಾದರು.

ಇಲ್ಲಿ ಒಬ್ಬನೇ ವಾದಿ. ಪ್ರತಿವಾದಿಗಳು ಅನೇಕರು. ಅವರು ಕೇವಲ ಹೊಸ ಹೊಸ ಪ್ರಶ್ನೆಯನ್ನು ಹಾಕತಕ್ಕವರು. ವಾದಿಯು ಕೊಟ್ಟ ಉತ್ತರವು ಸರಿಯಲ್ಲವೆಂದು ಅವರು ಪೂರ್ವಪಕ್ಷಮಾಡುವುದಿಲ್ಲ. ವಾದಿಯ ಉತ್ತರ ದಿಂದಲೇ ಪರಾಜಿತರಾಗುತ್ತಾರೆ. ಇಂತಹ ವಾದದಲ್ಲಿ ಪ್ರತಿವಾದಿಗೆ ಹೇಳಿ

ಕೊಳ್ಳುವಂತಹ ಬುದ್ಧಿಕ್ಲೇಶವೇನೂ ಇಲ್ಲ. ತನಗೆ ತೋರಿದ ಒಂದು ಪ್ರಶ್ನೆಯನ್ನು ಕೇಳಿದರಾಯಿತು. ಈ ಕೆಲಸವನ್ನು ಯಾರಾದರೂ ಮಾಡಬಹುದು. ಆದರೆ ಸಮಸ್ತಸಭಾಸದರೂ ಒಪ್ಪಬೇಕಾದ ಉತ್ತರವನ್ನು ನೀಡುವ ಮಹತ್ತರವಾದ ಕ್ಲೇಶವು ವಾದಿಗೆ ಇದ್ದೇ ಇರುತ್ತದೆ. ಈ ರೀತಿಯಾದ ಪ್ರಶ್ನೋತ್ತರಗಳು ನಡೆಯುವಾಗ ಪ್ರತಿವಾದಿಯು ಒಬ್ಬನೇ ಇರಬಹುದು : ಅನೇಕರಿರಬಹುದು. ಆದರೆ ವಾದಿಯು ಮಾತ್ರ ಒಬ್ಬನೇ ಆಗಿರುತ್ತಾನೆ. ಎಲ್ಲ ವಾದಪ್ರಕಾರಗಳಲ್ಲಿಯೂ ವಾದಿಯು ಒಬ್ಬನೇ.

ವಾದಿಯ ನಿಲುವಿಗೆ ಪ್ರತಿಜ್ಞೆಯೆಂದು ಹೆಸರು. ಈ ಪ್ರತಿಜ್ಞೆಗೆ ವಿರುದ್ಧವಾದ ಆಕ್ಷೇಪಣೆಗಳನ್ನೆತ್ತಿ ಪ್ರತಿವಾದಿಯು ಪೂರ್ವಪಕ್ಷವನ್ನು ಮಾಡುವುದೂ ಈ ಪೂರ್ವಪಕ್ಷಕ್ಕೆ ವಾದಿಯು ಉತ್ತರವನ್ನು ಹೇಳುವುದೂ ಒಂದು ಬಗೆ. ಇನ್ನು ವಾದಿಯೇ ಪೂರ್ವಪಕ್ಷದ ಮೇಲೆ ಆಕ್ಷೇಪಗಳನ್ನೆತ್ತಿ ಪ್ರತಿವಾದಿಗೆ ಸವಾಲನ್ನು ಹಾಕುವುದೂ ಉಂಟು. ಆಗ ಪ್ರತಿವಾದಿಯು ಸವಾಲಿಗೆ ಉತ್ತರ ಹೇಳಿ ವಾದಿಯ ಮೇಲೆ ಮತ್ತೆ ಆಕ್ಷೇಪವನ್ನೆತ್ತುತ್ತಾನೆ. ಈ ಎರಡು ಬಗೆಯ ವಾದ ಪ್ರತಿವಾದಗಳಿಗೆ ಶ್ರೀ ಶಂಕರದಿಗ್ವಿಜಯದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಅವುಗಳಲ್ಲಿ ಶಂಕರಾಚಾರ್ಯರಿಗೂ ಮಂಡನಮಿಶ್ರರಿಗೂ ನಡೆಯಿತೆನ್ನಲಾದ ವಾಕ್ಯಾರ್ಥವು ಪ್ರಬಲವಾಗಿದೆ. ಆದರಲ್ಲಿ ಮಂಡನಮಿಶ್ರರು ಸೋತು ಪ್ರತಿವಾದಿಯಾದ ತಮ್ಮ ಪ್ರತಿಜ್ಞೆಯಂತೆ ಸಂನ್ಯಾಸಾಶ್ರಮವನ್ನು ಸ್ವೀಕರಿಸುತ್ತಾರೆ.

ಇನ್ನೂ ಚಮತ್ಕಾರಿಯಾದ ವಾದ ಪ್ರತಿವಾದಗಳ ಸರಣಿಯು ಕಾವ್ಯಗಳಲ್ಲಿ ದೊರೆಯುತ್ತದೆ. ಈ ವಿಚಾರವನ್ನು ಈ ಪ್ರಬಂಧದ ಆದಿಯಲ್ಲಿ ಸೂಚಿಸಲಾಗಿದೆ. ಇಲ್ಲಿ ಕವಿಯೇ ವಾದಿಯೂ ಪ್ರತಿವಾದಿಯೂ ಆಗುತ್ತಾನೆ. ಆದ್ದರಿಂದ ಕವಿಯು ವಾದಿಯೂ ಆಗಿರಬೇಕು. ರಸಭಾವಗಳಿಗೆ ಪೋಷಕವಾದ ಶಬ್ದರಚನೆಯನ್ನೂ ಛಂದಸ್ಸನ್ನೂ ಕವಿಯು ಬಲ್ಲವನಾಗಿರಬೇಕು. ಕಾವ್ಯದಲ್ಲಿ ಮಾಧುರ್ಯ, ಪ್ರಸಾದ, ಓಜಸ್ಸು ಎಂಬ ಮೂರು ರಸಗುಣಗಳಿರುತ್ತವೆ. ಯಾವ ರಸಕ್ಕೆ ಯಾವ ಗುಣವಿರುತ್ತದೆಂದೂ ಅದನ್ನು ವ್ಯಂಜಿಸುವ ಪದರಚನೆ ಹೇಗಿರಬೇಕೆಂದೂ ಕಾವ್ಯಮೀಮಾಂಸೆಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಹಾಗೆಯೇ

ಯಾವ ಸಂದರ್ಭದಲ್ಲಿ ಯಾವ ವೃತ್ತವು ಹಿತಕರವೆಂಬುದನ್ನು ಕ್ಷೇಮೇಂದ್ರನು ತನ್ನ ಸುವೃತ್ತತಿಲಕದಲ್ಲಿ ಸೂಚಿಸಿದ್ದಾನೆ. ಇದೆಲ್ಲವನ್ನೂ ಕವಿಯು ಬಲ್ಲವನಾಗಿದ್ದರೆ ಅವನು ವಾದಿಯೂ ಗಮಕಿಯೂ ಆಗುತ್ತಾನೆ. ಆದರೆ ವಾದಿಯು ಕವಿಯಾಗಿರುತ್ತಾನೆಂಬ ನಿಯಮವೇನೂ ಇಲ್ಲ. ವಾದಿಗೆ ಶಾಸ್ತ್ರಾರ್ಥದಲ್ಲಿ ಅಪ್ರತಿಮವಾದ ಪ್ರತಿಭೆಯೂ ವಾಕ್ಕೌಶಲವೂ ಆವಶ್ಯಕ. ಇಂತಹ ವಾದಿಗಳು ರಾಜಸಭೆಯನ್ನಲಂಕರಿಸುತ್ತಿದ್ದರೆಂದು ಪಂಪಾದಿ ಮಹಾಕವಿಗಳ ವರ್ಣನೆಯಿಂದ ತಿಳಿದುಬರುತ್ತದೆ.

ಮಾರ್ಗೇ ಮಾರ್ಗೇ ನಿರ್ಮಲಂ ಬ್ರಹ್ಮವೃಂದಂ
ವೃಂದೇ ವೃಂದೇ ತತ್ತ್ವಚಿಂತಾನುವಾದಃ ।
ವಾದೇ ವಾದೇ ಜಾಯತೇ ತತ್ತ್ವಬೋಧಃ
ಬೋಧೇ ಬೋಧೇ ಭಾಸತೇ ಚಂದ್ರಚೂಡಃ ॥

—ಸಮಯೋಚಿತ ಪದ್ಯಮಾಲಿಕಾ

# ವಾಗ್ಮಿ

ವಾಗ್ಮಿ ಎಂಬ ಶಬ್ದದ ವ್ಯುತ್ಪತ್ತಿ ಹೇಗೆ ? 'ವಾಚೋ ಗ್ಮಿನಿಃ' ಎಂಬ ಪಾಣಿನಿ ಸೂತ್ರದಿಂದ ವಾಕ್ ಶಬ್ದದ ಮೇಲೆ 'ಗ್ಮಿನಿ' ಎಂಬ ತದ್ಧಿತ ಪ್ರತ್ಯಯವು ಬಂದು ವಾಗ್ಮಿನ್ – ವಾಗ್ಮಿ ಎಂಬ ಶಬ್ದವು ನಿಷ್ಪನ್ನವಾಗಿದೆ. ಇದು ಪ್ರಶಂಸಾರ್ಥದಲ್ಲಿ ಬರುತ್ತದೆ. ಪ್ರಶಂಸನೀಯವಾದ ರೀತಿಯಲ್ಲಿ ಮಾತಾಡ ತಕ್ಕವನು ವಾಗ್ಮಿ. ಒಳ್ಳೆಯ ಭಾಷಣಕಾರ ಎಂದು ಅಭಿಪ್ರಾಯ. ಇದಕ್ಕೆ ವಿರುದ್ಧವಾಗಿ ವಾಚಾಲ, ವಾಚಾಟ – ಎಂಬ ಶಬ್ದಗಳುಂಟು. ಇಲ್ಲಿ 'ಆಲಜಾಟಚೌ ಬಹು ಭಾಷಿಣೆ' ಎಂಬ ಪಾಣಿನಿ ಸೂತ್ರದಿಂದ ಬಹಳ ಮಾತಾಡ ತಕ್ಕವನು ಎಂಬ ಅರ್ಥದಲ್ಲಿ 'ಆಲಚ್, ಆಟಚ್' ಎಂಬ ಪ್ರತ್ಯಯಗಳು ಬಂದು ವಾಚಾಲ, ವಾಚಾಟ ಎಂಬ ಶಬ್ದಗಳು ಹುಟ್ಟಿವೆ. ಈ ಸೂತ್ರದಲ್ಲಿ 'ಕುತ್ಸಿತ ಇತಿ ವಕ್ತವ್ಯಮ್' ಎಂಬ ವಾರ್ತಿಕವಿದೆ. ಯಾವಾತನು ಕುತ್ಸಿತವಾಗಿ ಎಂದರೆ ನಿಂದ್ಯವಾದ ರೀತಿಯಲ್ಲಿ ಬಹಳ ಮಾತಾಡುತ್ತಾನೋ ಅವನು ವಾಚಾಲ-- ವಾಚಾಟ. ಪ್ರಶಂಸನೀಯವಾಗಿ ಬಹಳ ಮಾತಾಡತಕ್ಕವನು ವಾಗ್ಮಿಯೇ ಸರಿ, ವಾಚಾಟನಲ್ಲ. ಕನ್ನಡದಲ್ಲಿ ವಾಚಾಟನನ್ನು ವಾಚಾಳಿ, ಮಾತಾಳಿ ಎಂದು ಹೇಳುವುದುಂಟು. ಇಂಗ್ಲಿಷಿನಲ್ಲಿ ವಾಚಾಟನನ್ನು talkative, garrulous ಎನ್ನಬಹುದು. ವಾಗ್ಮಿಯಾದರೋ orator ಎಂಬ ಪ್ರಶಂಸೆಗೆ ಪಾತ್ರನಾದವನು. ನಮಗೆ ಅನಾವಶ್ಯಕವಾದ ವಿಷಯಗಳನ್ನು ಸೇರಿಸಿ, ಸಂದರ್ಭಕ್ಕೆ ಹೊಂದದಿರುವ ಮಾತುಗಳನ್ನು ಬೆಳೆಸಿ ಬೇಸರ ಹುಟ್ಟಿಸ ತಕ್ಕವನು ವಾಚಾಟ. ಅಂಥವರು ಒಮ್ಮೊಮ್ಮೆ ನಾವು ದಾರಿಯಲ್ಲಿ ಹೋಗುವಾಗ ಎದುರಿಗೆ ಬಂದು ಕಾಲದ ಪರಿವೆಯಿಲ್ಲದೆ ಮಾತನ್ನು ಬೆಳೆಸುತ್ತಲೇ ಇರುತ್ತಾರೆ. ಈ ವಾಚಾಟರು ಕಾಲಭಕ್ಷಕರು !

ವಾಗ್ಮಿಗೆ ಸಮಾಜದಲ್ಲಿ ಒಂದು ಗೌರವಾರ್ಹವಾದ ಸ್ಥಾನ ಉಂಟು. ಈತನು ತನ್ನಲ್ಲಿರುವ ವಾಕ್ ಶಕ್ತಿಯನ್ನು ಅಸಾಧಾರಣವಾದ ರೀತಿಯಲ್ಲಿ ಬಳಸುತ್ತಾನೆ. ಇತರ ಯಾವ ಪ್ರಾಣಿಗೂ ಇಲ್ಲದಿರುವ ಮಾತಾಡುವ ಶಕ್ತಿ ಮನುಷ್ಯನಿಗೆ ಮಾತ್ರ ದೊರಕಿದೆ. ಇದರ ಬಲದಿಂದಲೇ ಮನುಷ್ಯನು ಜ್ಞಾನ ಸಂಪನ್ನನಾಗಿ ಪಶುಗಳಿಗಿಂತ ಶ್ರೇಷ್ಠನೆನಿಸಿಕೊಂಡಿದ್ದಾನೆ. 'ಜ್ಞಾನೇನ ಹೀನಃ

ಪಶುಭಿಃ ಸಮಾನಃ' ಜ್ಞಾನವಿಲ್ಲದವನಿಗೆ ಮನುಷ್ಯಾಕೃತಿ ಇದ್ದರೂ ಅವನು ಪಶುವಿನ ಗುಂಪಿಗೆ ಸೇರತಕ್ಕವನು. ಈ ಜ್ಞಾನಭಂಡಾರಕ್ಕೆ ಪರಮಕಾರಣ ವಾದದ್ದು ವಾಕ್. ಇದೊಂದು ಮನುಷ್ಯನಿಗೆ ದೇವದತ್ತವಾದ ವರ. ಇದು ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸತಕ್ಕ ಜ್ಯೋತಿ.

ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನತ್ರಯವಮ್ ।
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ ॥

ಎಂದು ಮಹಾಕವಿ ದಂಡಿಯು ತನ್ನ ಕಾವ್ಯಾದರ್ಶದಲ್ಲಿ ಹೇಳಿದ್ದಾನೆ. "ಈ ಸಂಸಾರಪ್ರಪಂಚದಲ್ಲಿ ಶಬ್ದವೆಂಬ ಜ್ಯೋತಿಯು ಬೆಳಗದೆ ಹೋಗಿದ್ದರೆ, ಮೂರು ಲೋಕಗಳಲ್ಲಿಯೂ ಘೋರ ಕತ್ತಲೆಯು ಕವಿದು ಹೋಗುತ್ತಿತ್ತು". ವೇದವು ಹೇಳುತ್ತದೆ – 'ದೇವೀಂ ವಾಚಮಜನಯಂತ ದೇವಾಃ' 'ವಾಚಂ ಧೇನುಮುಪಾಸೀತ' ಎಂದು. "ದೇವತೆಗಳು ಈ ವಾಗ್ದೇವಿಯನ್ನು ನಿರ್ಮಿಸಿದರು, ವಾಕ್ಕೆಂಬ ಹಸುವನ್ನು ಉಪಾಸನೆ ಮಾಡಬೇಕು" ಎಂದು. ವ್ಯಾಕರಣ ಶಾಸ್ತ್ರವಂತೂ ವಾಕ್ ಎಂಬುದೇ ಬ್ರಹ್ಮ ಎಂಬ ನಿಲುವನ್ನು ತಳೆದಿದೆ. ಮಹಾವೈಯಾಕರಣನಾದ ಭರ್ತೃಹರಿಯು 'ಅನಾದಿನಿಧನಂ ಬ್ರಹ್ಮ ಶಬ್ದತತ್ತ್ವ ಯದಕ್ಷರಂ'–ನಾಶರಹಿತವಾದ ಎಂದರೆ–ಶಾಶ್ವತವಾದ–ಆದ್ಯಂತಗಳಿಲ್ಲದ ಶಬ್ದ ತತ್ತ್ವವೇ ಬ್ರಹ್ಮ–ಎಂದಿದ್ದಾನೆ. ವಾಗ್ಮಿತೆಗೆ ಮೂಲವಾದದ್ದು ಅಕ್ಷರಾಭ್ಯಾಸ. ಅಕ್ಷರವೆಂದರೇನು ? 'ಅಕ್ಷರಂ ನ ಕ್ಷರಂ ವಿದ್ಯಾತ್' – ಅಕ್ಷರವೆಂದರೆ ಕ್ಷರ ವಲ್ಲದ್ದು ಎಂದು ತಿಳಿಯಬೇಕು. "ಮೂರು ಜ್ಯೋತಿಗಳಿವೆ. ಒಂದು ಸರ್ವಪ್ರಾಣಿಗಳಲ್ಲಿಯೂ ನೆಲಸಿರುವ ಆತ್ಮ. ಎರಡು ಸೂರ್ಯಾಗ್ನಿಗಳಿಂದ ಬರುವ ಬೆಳಕು. ಮೂರನೆಯದು ಶಬ್ದ" ಎಂದು ಪ್ರಾಚೀನರ ಸಿದ್ಧಾಂತ. ಇವುಗಳಲ್ಲಿ ಬೆಳಕಿಗಿಂತ ಶಬ್ದವು ಹೆಚ್ಚಿನದು. ಏಕೆಂದರೆ, ಬೆಳಕು ಕಣ್ಣಿಗೆ ಕಾಣುವುದನ್ನು ಮಾತ್ರ ಪ್ರಕಾಶಗೊಳಿಸುತ್ತದೆ. ಶಬ್ದವಾದರೋ ಬೆಳಕೂ ಸಹ ಪ್ರಕಾಶಪಡಿಸಲಾರದ ವಸ್ತುವನ್ನು ಪ್ರಕಾಶಗೊಳಿಸಬಲ್ಲದು. ಈ ಶಬ್ದವು ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂದು ನಾಲ್ಕು ವಿಧವಾಗಿವೆ. ಮೂಲಾಧಾರ ಚಕ್ರದಲ್ಲಿ ಪರಾ ವಾಕ್ ನೆಲಸಿದೆ. ಕಿವಿಗೆ ಕೇಳುವಂತೆ ಉಚ್ಚರಿಸಲ್ಪಡುವ ಶಬ್ದ ವೈಖರೀ. ಈ ಪರಾವಾಕ್ ಎಂಬುದು ಪಶ್ಯಂತೀ, ಮಧ್ಯಮಾ ಎಂಬ ಎರಡು ಅವಸ್ಥೆಗಳನ್ನು ಸ್ಥಾನಭೇದದಿಂದ ಪಡೆದು ಅನಂತರ

ವೈಖರಿಯಾಗಿ ಪರಿಣಮಿಸುತ್ತದೆ. ವಾಗ್ಮಿಯಲ್ಲಿ ಶಬ್ದವೈಖರಿಯೇ ಮುಖ್ಯವಾದದ್ದು. ಆತನ ಮನಸ್ಸಿನಲ್ಲಿ ನಾನಾವಿಷಯಗಳು ನೆಲಸಿರಬಹುದು. ಅವೆಲ್ಲವನ್ನೂ ವ್ಯವಸ್ಥಿತವಾದ ರೀತಿಯಲ್ಲಿ ಕ್ರಮಬದ್ಧವಾಗಿಯೂ ನಿರರ್ಗಳವಾಗಿಯೂ ಶಬ್ದವೈಖರಿಯಲ್ಲಿ ಪ್ರಕಟಪಡಿಸುವ ಸಾಮರ್ಥ್ಯವಿದ್ದರೆ ಮಾತ್ರ ಅವನು ವಾಗ್ಮಿಯೆನಿಸುತ್ತಾನೆ. ಹೀಗೆ ಪ್ರಕಟಿಸಲಾರದ ವಿದ್ವಾಂಸನನ್ನು ವಿದ್ವಾಂಸನೆನ್ನಬಹುದೇ ಹೊರತು ವಾಗ್ಮಿಯೆನ್ನಲಾಗದು.

ವಾಗ್‌ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನಕೌಶಲಂ ।
ವೈದುಷ್ಯಂ ವಿದುಷಾಂ ತದ್ವತ್ ಭುಕ್ತಯೇ ನ ತು ಮುಕ್ತಯೇ ॥
—ಶ್ಲೋಕ ೬೦

ಎಂದು ಶ್ರೀ ಶಂಕರಾಚಾರ್ಯರು ವಿವೇಕಚೂಡಾಮಣಿಯಲ್ಲಿ ಹೇಳಿದ್ದಾರೆ. ಇಲ್ಲಿ ವಾಗ್ವೈಖರಿಯೆಂದರೆ ಅನುಪ್ರಾಸಾದಿ ಶಬ್ದಾಲಂಕಾರಗಳಿಂದಲೂ ಉಪಮಾದ್ಯರ್ಥಾಲಂಕಾರಗಳಿಂದಲೂ ಕೂಡಿದ ಸರಳಪದರಚನೆ. ಶಬ್ದಝರಿಯೆಂದರೆ ನಿರರ್ಗಳವಾಗಿ ಬಾಯಿಂದ ಹೊರಡುವ ವಾಕ್ಯಗಳ ಪ್ರಯೋಗ ಚಾತುರ್ಯ ಶಾಸ್ತ್ರದ ಪ್ರವಚನಲೇಖನಗಳ ಶಕ್ತಿಯೇ ಶಾಸ್ತ್ರವ್ಯಾಖ್ಯಾನಕೌಶಲ. ಹಾಗೆಯೇ ಪಾಂಡಿತ್ಯ, ಇವೆಲ್ಲವೂ ಭುಕ್ತಿಗಾಗಿಯೇ ಹೊರತು ಮುಕ್ತಿಗಾಗಿ ಅಲ್ಲ ಎಂದು ಶ್ಲೋಕಾರ್ಥ. ಪ್ರಕೃತವಲ್ಲಿ ವಾಗ್ವೈಖರೀ ಶಬ್ದಝರೀ – ಇವೆರಡು ವಾಗ್ಮಿಯ ಲಕ್ಷಣಗಳು. ಇಲ್ಲಿ ಇನ್ನೊಂದು ಸಂಗತಿಯನ್ನು ನೆನಪಿನಲ್ಲಿಡಬೇಕು. ಶಾಸ್ತ್ರವ್ಯಾಖ್ಯಾನಕೌಶಲವೆಂಬುದು ವಾಗ್ಮಿತೆಯಲ್ಲ. ಆ ಕೌಶಲವು ಲೇಖನದಲ್ಲಿ ಅಭಿವ್ಯಕ್ತವಾಗಿರುವುದು ಸಾಧ್ಯ. ಭಾಷಣದ ಕಲೆ ಬೇರೆ, ಲೇಖನದ ಕಲೆ ಬೇರೆ.

"ಮಾತಾಡಿದರೆ ಮುತ್ತು ಸುರಿದಂತಿರಬೇಕು" ಎಂದರು ಶ್ರೀ ಬಸವಣ್ಣನವರು. "ಮಾತೇ ಮಾಣಿಕ್ಯ. ಮಾತುಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ" ಮುಂತಾದ ಗಾದೆಗಳು ಕನ್ನಡದಲ್ಲಿವೆ. ಇವು ಮಾತಿನ ಶಕ್ತಿವೈಶಿಷ್ಟ್ಯಗಳೇನೆಂಬುದನ್ನು ಸಂಕ್ಷೇಪವಾಗಿ ಸೂಚಿಸುತ್ತವೆ. ವಾಗ್ಮಿ ಎಂಬ ಈ ಸಂಸ್ಕೃತ ಶಬ್ದಕ್ಕೆ ಪರ್ಯಾಯವಾದ ಅಚ್ಚಗನ್ನಡ ಶಬ್ದ ಯಾವುದು ? ಮಾತಾಳಿ ಎಂಬ ಶಬ್ದವು ನಿಂದಾರೂಪದಲ್ಲಿ ಬರುತ್ತದೆ.

ಹಿಂದೆ ಹೇಳಿದ ವಾಚಾಟನೇ ಮಾತಾಳಿ. 'ಮಾತುಗಾರ' ಎಂದರೆ ಹೇಗೆ ? ಸಂದರ್ಭಾನುಸಾರವಾಗಿ 'ನಿಂದೆ', 'ಪ್ರಶಂಸೆ' ಗಳೆರಡನ್ನೂ ಅದು ಸೂಚಿಸ ಬಹುದು. ಒಳ್ಳೆಯ ಮಾತುಗಾರ ಎಂಬುದು ವಾಗ್ಮಿಯೆಂಬ ಅರ್ಥವನ್ನೇನೋ ಕೊಡುತ್ತದೆ. ಅಲ್ಲಿ 'ಒಳ್ಳೆಯ' ಎಂಬ ವಿಶೇಷಣದ ಆವಶ್ಯಕತೆ ಇದೆ. ಅದು ಎರಡು ಶಬ್ದಗಳ ಸಮುದಾಯವಾಯಿತೇ ಹೊರತು ಏಕಶಬ್ದವಾಗಲಿಲ್ಲ. ವಾಗ್ಮಿಯೆಂದರೆ ಹೆಸರಾಂತ ಭಾಷಣಕಾರ. ಶ್ರೋತೃಗಳನ್ನು ಆಕರ್ಷಿಸಿ ಮೂಕ ವಿಸ್ಮಿತರನ್ನಾಗಿ ಮಾಡುವ ಭಾಷಣಕಲೆ ಅವನಿಗೆ ಒಲಿದಿರುತ್ತದೆ. ಭಾಷಣಕಲೆ ಹೇಗಿರಬೇಕೆಂಬುದನ್ನು ಕನ್ನಡ ಸಾಹಿತ್ಯದಲ್ಲಿ ಯಾರೂ ವರ್ಣಿಸಿರುವಂತೆ ಕಾಣುವುದಿಲ್ಲ. ಸಂಸ್ಕೃತ ಮಹಾಕವಿ ಭಾರವಿಯು ತನ್ನ ಕಿರಾತಾರ್ಜುನೀಯ ಕಾವ್ಯದಲ್ಲಿ ಮೂರು ಶ್ಲೋಕಗಳಿಂದ ವಾಗ್ಮಿಯ ಭಾಷಣ ಹೇಗಿರುತ್ತದೆ ಯೆಂಬುದನ್ನು ವರ್ಣಿಸಿದ್ದಾನೆ. (ಕಿರಾ. ೧೧–೩೮, ೩೯, ೪೦)

ಪ್ರಸಾದರಮ್ಯಮೋಜಸ್ವಿ ಗರೀಯೋ ಲಾಘವಾನ್ವಿತಮ್ ।
ಸಾಕಾಂಕ್ಷಮನುಪಸ್ಕಾರಂ ವಿಷ್ವಗ್ಗತಿ ನಿರಾಕುಲಮ್ ॥ ॥ ೧ ॥

**ಅರ್ಥ ವಿವರಣೆ—**

ಪ್ರಸಾದರಮ್ಯಂ = ಪ್ರಸಾದಗುಣದಿಂದ ಮನೋಹರವಾದದ್ದು. ಪ್ರಸಾದಗುಣವು ಶಬ್ದಗುಣ, ಅರ್ಥಗುಣ ಎಂದು ಎರಡು ವಿಧ. ದೀರ್ಘ ಸಮಾಸವಿಲ್ಲದ ಬಿಡಿಪದಗಳ ರಚನೆ ಶಬ್ದಗುಣ. ಇದರಲ್ಲಿ ಬಳಸುವ ಅಕ್ಷರಗಳೂ ಮೃದುವಾದವು. ಅರ್ಥವೈಮಲ್ಯವು ಪ್ರಸಾದವೆಂಬ ಅರ್ಥಗುಣ. ಎಲ್ಲರಿಗೂ ಸ್ಫುಟವಾಗಿ ಅರ್ಥವಾಗುವುದೇ ಅರ್ಥದ ವೈಮಲ್ಯ. ಭಾಷಣವು ಈ ಎರಡು ಬಗೆಯ ಪ್ರಸಾದಗುಣಗಳಿಂದಲೂ ಸಹಿತವಾಗಿರಬೇಕು. ಓಜಸ್ವಿ = ಓಜೋ ಗುಣಯುಕ್ತವಾದದ್ದು. ಇದೂ ಎರಡು ಬಗೆ : ದೀರ್ಘ ಸಮಾಸಗಳಿಂದ ಕೂಡಿದ್ದು ಶಬ್ದಗುಣ. ಅರ್ಥದಲ್ಲಿರುವ ಪ್ರೌಢಿ ಅರ್ಥಗುಣ. ಪ್ರೌಢಿ ಎಂದರೇನು ?

ಪದಾರ್ಥೇ ವಾಕ್ಯರಚನಾ ವಾಕ್ಯಾರ್ಥೇ ಚ ಪದಾಭಿಧಾ ।
ಪ್ರೌಢಿರ್ವ್ಯಾಸಸಮಾಸೌ ಚ ಸಾಭಿಪ್ರಾಯತ್ವಮಸ್ಯ ಚ ॥

ಒಂದು ಅರ್ಥವನ್ನು ಒಂದೇ ಶಬ್ದದಿಂದ ಹೇಳಬಹುದಾಗಿದ್ದರೂ ಅದಕ್ಕಾಗಿ ಒಂದು ವಾಕ್ಯವನ್ನೇ ರಚಿಸುವುದು, ಒಂದು ವಾಕ್ಯದಲ್ಲಿ ಹೇಳಬೇಕಾದ್ದನ್ನು ಒಂದೇ ಶಬ್ದದಿಂದ ತಿಳಿಸುವುದು, ವಿಷಯವನ್ನು ಕೆಲವೆಡೆ ವಿಸ್ತರಿಸುವುದು, ಕೆಲವೆಡೆ ಸಂಕ್ಷೇಪಿಸುವುದು. ಅಭಿಪ್ರಾಯಗರ್ಭಿತವಾದ ವಿಶೇಷಣವನ್ನು ಕೊಡುವುದು.–ಇದು ಅರ್ಥದ ಪ್ರೌಢಿಮೆ, ಉದಾ :–

ಪದಾರ್ಥೇ ವಾಕ್ಯ ರಚನಾ = ದುರ್ಯೋಧನನೊಡನೆ ಸಂಧಾನವು ಮರಳಲ್ಲಿ ಎಣ್ಣೆ ತೆಗೆಯುವ ವಿಧಾನ, ಬಿಸಿಲ್ಗುದುರೆಯಲ್ಲಿ ನೀರು ಕುಡಿದು ಬಾಯಾರಿಕೆಯನ್ನು ತೀರಿಸಿಕೊಳ್ಳುವ ಬಗೆ. ಇಲ್ಲಿ 'ವ್ಯರ್ಥ' ಎಂದು ಹೇಳುವುದಕ್ಕೆ ಬದಲಾಗಿ ಶಬ್ದಸಮೂಹವನ್ನೇ ಬಳಸಲಾಗಿದೆ. ವಾಕ್ಯಾರ್ಥೇ ಚ ಪದಾಭಿಧಾ = ಆತನಿಗೆ ತಾಯಿಯ ಮಾತೆಂದರೆ ವೇದ. ತಾಯಿಯ ಮಾತು ಪರಮಪ್ರಮಾಣ, ಮೀರಲು ಸಾಧ್ಯವಿಲ್ಲದ್ದು ಎಂಬಿಷ್ಟು ಅರ್ಥವನ್ನು ವೇದವೆಂಬ ಒಂದೇ ಪದ ಕೊಡುತ್ತದೆ. ವ್ಯಾಸ ಸಮಾಸೌ = ವ್ಯಾಸವೆಂದರೆ ಸಂದರ್ಭಾನುಗುಣವಾಗಿ ವಿಷಯವನ್ನು ವಿಸ್ತರಿಸುವುದು. ಸಮಾಸವೆಂದರೆ ಸಂಕ್ಷೇಪಿಸುವುದು ವಾಗ್ಮಿಯಾದವನು ಯಾವುದನ್ನು ಯಾವಾಗ ವಿಸ್ತರಿಸಿ ಹೇಳಬೇಕು, ಯಾವುದನ್ನು ಸಂಕ್ಷೇಪವಾಗಿ ತಿಳಿಸಬೇಕು ಎಂಬುದನ್ನು ಬಲ್ಲವನಾಗಿರಬೇಕು. ಇದಕ್ಕೆ ಉದಾಹರಣೆ ಅನಾವಶ್ಯಕ.

ಇಲ್ಲೊಂದು ಪ್ರಶ್ನೆ ಹುಟ್ಟುತ್ತದೆ. ಪ್ರಸಾದ, ಓಜಸ್ಸು – ಎಂಬಿವು ವಿರುದ್ಧ ಗುಣಗಳು. ಇವೆರಡೂ ವಾಗ್ಮಿಯ ಭಾಷಣದಲ್ಲಿರಬೇಕೆಂದರೆ, ವಿರೋಧಾಭಾಸವಾಗುತ್ತದೆಯಲ್ಲವೆ ? ಆದರೆ, ವಿರೋಧವೇನೂ ಇಲ್ಲ. ಭಾಷಣದಲ್ಲಿ ವಿಷಯಾನುಗುಣವಾಗಿ ಕೆಲವೆಡೆ ಪ್ರಸಾದಗುಣ ಬೇಕು. ಉದಾಹರಣೆಗೆ, ಬಡವರ ಕಷ್ಟದ ಬಾಳನ್ನು ತಿಳಿಸಿಕೊಡುವಾಗ ಪ್ರಸಾದಗುಣ ಬೇಕು. ಶ್ರೀಮಂತರ ದೌಲತ್ತನ್ನು ವರ್ಣಿಸುವಾಗ ಓಜೋಗುಣ ಬೇಕು ಹೀಗೆ ವಿಷಯಾನುಸಾರವಾಗಿ ಎರಡು ಗುಣಗಳೂ ಒಂದೇ ಭಾಷಣದಲ್ಲಿ ಬರಬಹುದು.

ಗರೀಯಃ = ಮಾತು ಅರ್ಥಗರ್ಭಿತವಾಗಿರಬೇಕು. ಶಬ್ದಾಡಂಬರದಲ್ಲಿ ಮುಕ್ತಾಯವಾಗಬಾರದು. ಲಾಘವಾನ್ವಿತಂ = ಲಘುವಾದ ವರ್ಣನೆ

ಆವಶ್ಯಕ. ಅನಾವಶ್ಯಕವಾಗಿ ಅತಿವಿಸ್ತಾರವನ್ನು ಮಾಡತಕ್ಕದ್ದಲ್ಲ. ಸಾಕಾಂಕ್ಷಂ=ಒಂದು ವಾಕ್ಯದಲ್ಲಿರುವ ಪ್ರತಿಯೊಂದು ಶಬ್ದಕ್ಕೂ ಅರ್ಥಾನುಗುಣವಾಗಿ ಅದೇ ವಾಕ್ಯದಲ್ಲಿರುವ ಇನ್ನೊಂದು ಶಬ್ದದೊಡನೆ ಅನ್ವಯವಿರಲೇಬೇಕು. ಪ್ರತಿಯೊಂದು ಪದವೂ ಇನ್ನೊಂದರೊಡನೆ ಸಂಬಂಧವನ್ನು ಅಪೇಕ್ಷಿಸುತ್ತದೆ. ಈ ಅಪೇಕ್ಷೆಗೆ ಆಕಾಂಕ್ಷೆಯೆಂದು ಹೆಸರು. ಸಾಕಾಂಕ್ಷವೆಂದರೆ ಈ ರೀತಿ ಅನ್ವಯಾಪೇಕ್ಷೆಗೆ ತಕ್ಕಂತೆ ಸಂಬಂಧವಿರುವ ಪದಗಳ ಸಮೂಹವೆಂದರ್ಥ. ಹೀಗಿದ್ದರೆ ಮಾತ್ರ ವಾಕ್ಯವು ಒಂದು ಪೂರ್ಣವಾದ ಅರ್ಥವನ್ನು ಕೊಡಬಲ್ಲದು. ಈ ವಾಕ್ಯವನ್ನು ನೋಡಿ : 'ನಾಳೆ ಪ್ರಾತಃಕಾಲದಲ್ಲಿ ಮುಖ್ಯಮಂತ್ರಿಗಳು ಸಭೆಗೆ ಬಂದು ಗಾಂಧೀಜಿಯವರ ವಿಷಯದಲ್ಲಿ ಭಾಷಣ ಮಾಡುವರು'. ಈ ವಾಕ್ಯದಲ್ಲಿರುವ ಪ್ರತಿಯೊಂದು ಪದಕ್ಕೂ ಇನ್ನೊಂದು ಪದದಲ್ಲಿ ಅನ್ವಯವಿದ್ದು ಆಕಾಂಕ್ಷೆಯು ಪೂರ್ಣವಾಗಿದೆ. ಈ ವಾಕ್ಯವನ್ನು ನೋಡಿ : "ಇದುವರೆಗೆ ನಾನು ಹೇಳಿದ ವಿಷಯಗಳು, ಈಗ ಪ್ರಕೃತಕ್ಕೆ ಬರೋಣ". ಇಲ್ಲಿ 'ವಿಷಯಗಳು' ಎಂಬ ಪದಕ್ಕೆ ಎಲ್ಲಿ ಅನ್ವಯ ? ಇಂತಹ ಮಾತುಗಳನ್ನು ಅನೇಕ ಜನರ ಉಪನ್ಯಾಸಗಳಲ್ಲಿ ಕೇಳಬಹುದು. ಮುದ್ರಿತ ಪಠ್ಯಪುಸ್ತಕಗಳಲ್ಲಿ ಸಹ ಈ ಬಗೆಯ ವಾಕ್ಯಗಳನ್ನು ಕಾಣಬಹುದು. ಸಾಮಾನ್ಯವಾಗಿ ಆಕಾಶವಾಣಿ ಮತ್ತು ದೂರದರ್ಶನದ ವಾರ್ತಾಪ್ರಸಾರಗಳಲ್ಲಿ ಇಂತಹ ಮಾತುಗಳು ಹೊರಡುತ್ತವೆ. ಈ ರೀತಿಯಲ್ಲಿ ನಿರಾಕಾಂಕ್ಷವಾದ ಪದಗಳನ್ನು ಬಳಸಬಾರದು. ನಿರಾಕಾಂಕ್ಷವೆಂದರೆ ಅನ್ವಿತವಾಗಬೇಕಾದ ಪದದ ಆಕಾಂಕ್ಷೆ ಇದ್ದರೂ ಆ ಪದದ ಪ್ರಯೋಗವಿರುವುದಿಲ್ಲ ಎಂದರ್ಥ. ಇದು ವಾಕ್ಯ ರಚನೆಯ ದೋಷ. ಕೆಲವು ಸಲ ಒಂದು ಪದವನ್ನು ಅಧ್ಯಾಹಾರ ಮಾಡಿಕೊಳ್ಳಬಹುದಾಗಿರುತ್ತದೆ. ಅದು ಯಾವ ಪದವೆಂದು ಸುಲಭವಾಗಿ ಗೊತ್ತಾಗಿಬಿಡುತ್ತದೆ. ಆ ಸಂದರ್ಭದಲ್ಲಿ ಆ ವಾಕ್ಯರಚನೆ ದೋಷಯುಕ್ತವೆಂದು ತಿಳಿಯಬಾರದು. 'ಪೇಟೆಗೆ ಹೋಗಿ ಸಾಮಾನುಗಳನ್ನು ತರುತ್ತೇನೆ'. ಇಲ್ಲಿ 'ನಾನು' ಎಂಬುದು ಅಧ್ಯಾಹಾರ. ಇದು ಶ್ರೋತೃಗಳಿಗೆ ಸುಲಭವಾಗಿ ಗೊತ್ತಾಗುವುದರಿಂದ ದೋಷವಲ್ಲ. ಅನುಪಸ್ಕಾರಂ=ಅಧ್ಯಾಹಾರದೋಷ ರಹಿತವಾದದ್ದು. ಈಗಷ್ಟೇ ಅಧ್ಯಾಹಾರವು ದೋಷವಲ್ಲವೆಂದು ಹೇಳಿದ್ದೇವೆ. ಈಗ ಅಧ್ಯಾಹಾರವು ಹೇಗೆ ದೋಷವಾಯಿತು ? ಇದರ ಅಭಿಪ್ರಾಯ

ವೇನೆಂದರೆ, ಎಲ್ಲಿ ಅಧ್ಯಾಹಾರವು ಶ್ರೋತೃಗಳಿಗೆ ಥಟ್ಟನೆ ಗೋಚರಿಸುವುದಿಲ್ಲವೋ ಅಲ್ಲಿ ಅಧ್ಯಾಹಾರವನ್ನಿಡುವುದು ದೋಷ. ಉದಾ : "ಅಹಿಂಸಾ ಪರಮೋ ಧರ್ಮಃ – ಎಂದು ಹೇಳುತ್ತಾರೆ. ಆದರೆ ಹಿಂಸೆಯೂ ಧರ್ಮವೇ". ಹಿಂಸೆಯೂ ಯಾವಾಗ ಧರ್ಮವಾಗುತ್ತದೆ ? ಯುದ್ಧಸಮಯದಲ್ಲಿ, ಆಪತ್ಕಾಲದಲ್ಲಿ ಇತ್ಯಾದಿ ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಭಾಷಣಕಾರನ ಅಭಿಪ್ರಾಯವೇನೆಂಬುದು ಶ್ರೋತೃವಿಗೆ ತಿಳಿಯುವುದಿಲ್ಲ. "ದೇವರನ್ನು ಪ್ರತ್ಯಕ್ಷವಾಗಿ ನೋಡಬಹುದೆಂದು ಹೇಳಿದ್ದಾರೆ", ಯಾರು ಹೇಳಿದ್ದಾರೆ? ಇಲ್ಲಿ ಅಧ್ಯಾಹಾರವು ಸುಲಭವಲ್ಲ. ಇಂತಹ ಸ್ಥಳದಲ್ಲಿ ಅಧ್ಯಾಹಾರ ಮಾಡಿಕೊಳ್ಳುವಂತೆ ಮಾತಾಡುವುದು ದೋಷ. ವಿಷ್ವಗ್ಗತಿ = ಭಾಷಣಕ್ಕೆ ಯಾವುದು ವಿಷಯವೋ ಅದಕ್ಕೆ ಸಂಬಂಧಿಸಿದ ಸಮಸ್ತ ಅಂಶಗಳನ್ನೂ ಪ್ರಸ್ತಾವಿಸಿ ವಿವರಿಸುವುದು. ವಾಗ್ಮಿಯು ಯಾವುದೋ ಒಂದು ಅಂಶವನ್ನು ತಿಳಿಸಿ ಉಳಿದದ್ದನ್ನು ಕೈಬಿಡಕೂಡದು. ನಿರಾಕುಲಂ = ವಿಷಯಕ್ಕೆ ಅಸಂಬದ್ಧವಾದ ಯಾವುದೇ ಅಂಶವನ್ನು ಮಾತಿನಲ್ಲಿ ಸೇರಿಸಿ ಕಲಬೆರಕೆ ಮಾಡಕೂಡದು.

ಈ ಶ್ಲೋಕದಲ್ಲಿರುವ ಒಂದು ವಿಶೇಷವನ್ನು ಗಮನಿಸಬೇಕು – ಪ್ರಸಾದರಮ್ಯ – ಓಜಸ್ವಿ, ಗರೀಯ – ಲಾಘವಾನ್ವಿತ ಇತ್ಯಾದಿ ಶಬ್ದಗಳ ಜೋಡಿಯು ಪರಸ್ಪರ ವಿರುದ್ಧವಾಗಿ ವಿರೋಧಾಭಾಸವಿರುವಂತೆ ತೋರುತ್ತದೆ. ಆದರೆ ಅವುಗಳಲ್ಲಿ ಯಾವ ವಿರೋಧವೂ ಇಲ್ಲದೆ ಒಂದೇ ವಿಷಯವನ್ನು ಎರಡೆರಡು ಪದಗಳು ಸೇರಿ ಗಟ್ಟಿಮಾಡುತ್ತವೆ. ಕವಿಯ ವಾಗ್ಮಿತೆಯೂ ಇಲ್ಲಿ ಪ್ರಕಟವಾಗಿದೆ.

> ನ್ಯಾಯನಿರ್ಣೀತಸಾರತ್ವಾತ್ ನಿರಪೇಕ್ಷಮಿವಾಗಮೇ ।
> ಅಪ್ರಕಂಪ್ಯತಯಾನ್ಯೇಷಾಮಾಮ್ನಾಯ ವಚನೋಪಮಮ್ ॥ ॥ ೨ ॥

ವಾಗ್ಮಿಯ ಭಾಷಣದಲ್ಲಿ ಪ್ರತಿಪಾದ್ಯವಾದ ವಿಷಯದ ಮುಖ್ಯಸಾರವು ಸಮುಚಿತವಾದ ಯುಕ್ತಿ, ಗಾದೆ, ಅನುಭವಗಳಿಂದ ನಿರ್ಣೀತವಾಗಿಬಿಡುತ್ತದೆ. ಅದು ಶ್ರೋತೃಗಳ ಅಂತರಂಗಕ್ಕೆ ನಾಟುವುದರಿಂದ ಇನ್ನೊಂದು ಆಧಾರ ವಚನವು ಬೇಕಾಗಿಲ್ಲವೆಂಬಂತೆ ಕಾಣಿಸುತ್ತದೆ. ಆತನ ವಾಗ್ಧೋರಣೆಯು

ಹೇಗಿರುತ್ತದೆಯೆಂದರೆ, ಇತರರು ಅದನ್ನು ಅಲ್ಲಾಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅದೊಂದು ವೇದವಾಕ್ಯವೋ ಎಂಬಂತಿರುತ್ತದೆ.

ಅಲಂಘ್ಯತ್ವಾಜ್ಜನೈರನ್ಯೈಃ ಕ್ಷುಭಿತೋದನ್ವದೂರ್ಜಿತವ್ ।
ಔದಾರ್ಯಾದರ್ಥಸಂಪತ್ತೇಃ ಶಾಂತಂ ಚಿತ್ತಮೃಷೇರಿವ ॥ ॥ ३ ॥

ವಾಗ್ಮಿಯ ಹೇಳಿಕೆಯಲ್ಲಿ ದೋಷವನ್ನು ಹುಡುಕಿ ಖಂಡಿಸಲು ಸಾಧ್ಯವಾಗುವುದಿಲ್ಲ. ಅಲ್ಲೋಲಕಲ್ಲೋಲವಾಗಿ ಉಕ್ಕೇರುತ್ತಿರುವ ಮಹಾಸಾಗರದಂತೆ ಅತಿಗಂಭೀರವಾಗಿರುವ ಆತನ ಹೇಳಿಕೆಯನ್ನು ಉಲ್ಲಂಘಿಸಲು ಯಾರಿಗೂ ಶಕ್ಯವಾಗುವುದಿಲ್ಲ. ಇಷ್ಟಾದರೂ ಯಾರ ಮನಸ್ಸಿಗೂ ನೋವಾಗದಂತೆ ಉದಾರವಾದ ಅರ್ಥಸಂಪತ್ತಿನಿಂದ ತುಂಬಿದ ಭಾಷಣವು, ಋಷಿಯ ಅಂತಃಕರಣದಂತೆ ಯಾವ ಉದ್ವೇಗಕ್ಕೂ ಆಸ್ಪದಕೊಡದೆ ಶಾಂತವಾಗಿರುತ್ತದೆ !

ವಾಗ್ಮಿಯ ಭಾಷಣವು ಹೇಗಿರಬೇಕೆಂಬುದನ್ನು ಈ ಮೂರು ಶ್ಲೋಕಗಳಿಂದ ಭಾರವಿಯು ತೋರಿಸಿಕೊಟ್ಟಿದ್ದಾನೆ. ಇಲ್ಲಿರುವ ಒಂದೊಂದು ವಿಶೇಷಣವೂ ಸಾರ್ಥಕವಾದದ್ದು. ಅರ್ಥಪುಷ್ಟಿಯುಳ್ಳದ್ದು. ಇವುಗಳಲ್ಲಿ 'ಶಾಂತಂ ಚಿತ್ತಮೃಷೇರಿವ' ಎಂಬುದು ಅತ್ಯಂತ ಗಮನೀಯವಾಗಿದೆ. 'ಋಷಿರ್ದರ್ಶನಾತ್' ಎಂಬ ಯಾಸ್ಕರ ಸೂತ್ರದಂತೆ ವೇದದ್ರಷ್ಟಾರನೂ ಮಹಾತಪಸ್ವಿಯೂ ಆದ ಯೋಗಿಯನ್ನು ಇಲ್ಲಿ ಋಷಿಯೆಂದು ಗ್ರಹಿಸಬೇಕು. ಆ ಋಷಿಯ ಮನಸ್ಸು ಸದಾ ಶಾಂತವಾಗಿರುತ್ತದೆ. ಕ್ರೋಧ, ಅಸೂಯೆ, ದ್ವೇಷ ಮುಂತಾದ ಕೊಳೆಗಳಿಂದ ದೂರವಾಗಿ ನಿರ್ಮಲವಾಗಿರುತ್ತದೆ. ವಾಲ್ಮೀಕಿ ಮುನಿಗಳು ಶ್ರೀಮದ್ರಾಮಾಯಣದಲ್ಲಿ ತಮಸಾನದಿಯ ತೀರ್ಥವನ್ನು "ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋ ಯಥಾ" ಎಂದು ವರ್ಣಿಸಿದ್ದಾರೆ. ತಿಳಿನೀರಿನಿಂದ ತುಂಬಿದ ಸ್ನಾನತೀರ್ಥವು ಸಜ್ಜನರ ಮನಸ್ಸಿನಂತೆ ನಿರ್ಮಲವಾಗಿದ್ದಿತಂತೆ. ಪ್ರಕೃತದಲ್ಲಿ ವಾಗ್ಮಿಯ ಮಾತುಗಾರಿಕೆ ಯಾರನ್ನೂ ದೂಷಿಸತಕ್ಕದ್ದಾಗಿರಬಾರದು, ಆತನ ವಾಗ್ವಿಲಾಸವು ಶಬ್ದಾಡಂಬರಗಳಿಂದ ಉಜ್ವಲವಾದರೂ ಯಾರನ್ನೂ ಉದ್ವೇಗಪಡಿಸತಕ್ಕದ್ದಲ್ಲ. ಆತನ ಶಬ್ದ ವೈಖರಿಯು ಪ್ರತಿಪಾದ್ಯ ವಿಷಯವನ್ನು ದೃಢಪಡಿಸುವುದಕ್ಕಾಗಿಯೇ ಹೊರತು ಅನ್ಯರ ಅಭಿಪ್ರಾಯವನ್ನು ಖಂಡಿಸುವುದಕ್ಕಲ್ಲ. ತನ್ನ

ಸಿದ್ಧಾಂತವನ್ನು ದೃಢಪಡಿಸುವಾಗ ಅನ್ಯರ ಅಭಿಪ್ರಾಯದ ಖಂಡನೆ ಪರ್ಯಾಯ ವಾಗಿ ಬಂದಿದ್ದರೂ ಅದು ಮೃದುಪದಗಳಿಂದ ಹಿತಮಿತವಾಗಿರುತ್ತವೆ. ಕೆಲವು ವೇಳೆ ವಿನೋದದಲ್ಲಿ ಪರ್ಯವಸಾನವಾಗಬಹುದು. ಆದರೆ ಯಾರಿಗೂ ವ್ಯಥೆ ಯಾಗುವ ಚುಚ್ಚುಮಾತುಗಳನ್ನು ಅವನೆಂದಿಗೂ ಬಳಸುವುದಿಲ್ಲ. ಇನ್ನೊಬ್ಬ ರನ್ನು ಹಂಗಿಸುವ ಪ್ರಸಕ್ತಿಯೇ ವಾಗ್ಮಿಯ ಭಾಷಣದಲ್ಲಿ ಬರುವುದಿಲ್ಲ.

ಈ ಕಾಲದಲ್ಲಿ ರಾಜಕೀಯಸ್ಥರ ಭಾಷಣವು ಈ ಸಂದರ್ಭದಲ್ಲಿ ಪ್ರತ್ಯುದಾಹರಣೆಯಾಗಬಲ್ಲುದು. ನಿಂದಾಪೂರ್ಣವಾದ ಉಪನ್ಯಾಸವನ್ನು ಬಿಗಿಯತಕ್ಕವರು ವಾಚಾಟರೇ ಹೊರತು ವಾಗ್ಮಿಗಳಲ್ಲ. ವಾಚಾಳಿತನದ ಪ್ರತ್ಯುದಾಹರಣೆಗಳು ಸಾಹಿತ್ಯ ಸಭೆಗಳಲ್ಲಿ ಸಾಹಿತಿಗಳನ್ನು ಭಾಷಾಸಂಬಂಧಿ ಸಭೆಗಳಲ್ಲಿ ಭಾಷಾಂಧರನ್ನು ಅಪ್ಪಿಕೊಳ್ಳುತ್ತವೆ. ಧಾರ್ಮಿಕ ಸಭೆಗಳಲ್ಲಿ ಮತಾಂಧರನ್ನು ಕಟಾಕ್ಷಿಸದೆ ಇರುವುದಿಲ್ಲ. ವಿಚಾರಸ್ವಾತಂತ್ರ್ಯದ ಹೆಸರಿನಲ್ಲಿ ಈ ವಾಚಾಟರು ಸಂಸ್ಕೃತವನ್ನು 'ಸತ್ತ ಭಾಷೆ' ಎನ್ನುತ್ತಾರೆ. ಇವರು ಬಳಸುವ ನುಡಿಯಲ್ಲಿ ಸಂಸ್ಕೃತಭಾಷಾ ಶಬ್ದಗಳು ತುಂಬಿಕೊಂಡಿರುತ್ತವೆ. ಶ್ರೀಮದ್ ರಾಮಾಯಣದ ಮೇಲೆಯೂ ಮಾತಾಡುತ್ತಾರೆ. ನಿಷ್ಕಾರಣವಾಗಿ ಸೀತಾದೇವಿಯ ಚಾರಿತ್ರವನ್ನು ಜರೆಯುತ್ತಾರೆ. ಶ್ರೀರಾಮನಿಗೆ ಸಲ್ಲದ ಆರೋಪಗಳನ್ನು ಹೊರಿಸುತ್ತಾರೆ. ಈ ವಾಚಾಟರಿಗೆ ಗೊತ್ತಿಲ್ಲದ ವಿಷಯವೇ ಇಲ್ಲ ! ಸರಸ್ವತಿಯ ಗೋಣುಮುರಿಯತಕ್ಕವರೆಂದರೆ ಇವರೇ. ಮಾತಿ ನಲ್ಲೇನೋ ವಾಗ್ವೈಖರಿ ಇರುತ್ತದೆ. ಅದನ್ನು ದುರುಪಯೋಗಪಡಿಸಿ ಕೊಳ್ಳತಕ್ಕ ಜನರು ಇವರು. ಭಗವಂತನು ಅನುಗ್ರಹಿಸಿದ ವಾಕ್‌ಶಕ್ತಿಯನ್ನು ಮನಸ್ಸು ಬಂದಂತೆ ತೂರಾಡತಕ್ಕವರು ಈ ವಾಚಾಳಿಗಳು ! ಪಿತ್ರಾರ್ಜಿತವಾದ ಧನವನ್ನು ಹೆಂಡದಂಗಡಿಗೆ ಸುರಿಯುತಕ್ಕವರು. ಇವರು ವಾಗ್ಮಿಗಳ ಗುಂಪಿಗೆ ಸೇರತಕ್ಕವರಲ್ಲ. 'ವಾಗ್ಭೂಷಣಂ ಭೂಷಣಂ' ಎಂದು ಭರ್ತೃಹರಿ ವಾಕ್ಕನ್ನು ಹೊಗಳಿದ್ದೇನೋ ಸರಿ ಪಾಮರರಿಗೆ ಇಂತಹ "ವಾಗ್‌ಭೂಷಣಗಳು" ರಂಜಕಗಳಾಗಬಹುದು. ಬಲ್ಲವರು ಮಾತ್ರ ಈ ಭೂಷಣಗಳ ಬಳಕೆಯನ್ನು ಕಂಡು ನಕ್ಕು ಸುಮ್ಮನಾಗಬಹುದು. ಏಕೆಂದರೆ, ಈ ವಾಚಾಟರು ಗುಲಾಬಿ

ಹೂವನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳತಕ್ಕವರು. ಮುಕ್ತಾಹಾರವನ್ನು ಕಾಲಿಗೆ ಸುತ್ತಿಕೊಳ್ಳತಕ್ಕವರು. ಕಿವಿಗೆ ಉಂಗುರವನ್ನು ಹಾಕಿಕೊಂಡು ಕೊರಳಲ್ಲಿ ರಿಸ್ಟ್‌ವಾಚ್ ಧರಿಸತಕ್ಕವರು !

ತಾತ್ಪರ್ಯವೇನಾಯಿತೆಂದರೆ, ವಾಗ್ಮಿಯು ಸಭೆಯಲ್ಲಿ ನಿರರ್ಗಳವಾಗಿ ತನ್ನ ವಾಗ್ವೈಭವವನ್ನು ಮೆರೆಸುತ್ತಾನೆ. ಶ್ರೋತೃಗಣವನ್ನು ತನ್ನ ವಿದ್ಯೆ ಅನುಭವಗಳ ಬಲದಿಂದ ವಶಪಡಿಸಿಕೊಳ್ಳುತ್ತಾನೆ. ತಾನು ಪ್ರತಿಪಾದಿಸಬೇಕಾದ ವಿಷಯವನ್ನು ಅತಿಸಂಕ್ಷೇಪವೂ ಆಗದೆ ಅತಿವಿಸ್ತಾರವೂ ಆಗದಂತೆ ವಿವರಿಸುತ್ತಾನೆ. ಜನರನ್ನು ತಲೆದೂಗಿಸಿ ಮೆಚ್ಚಿಸುತ್ತಾನೆ. ವಾಗ್ಮಿಯ ಮಾತು ಕಠಿನ ಪದಗಳಿಂದ ಕೂಡಿರುವುದಿಲ್ಲ. ಅದು ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತದೆ. ಸಭಾಸದಸ್ಯರನ್ನು ಮೆಚ್ಚಿಸುವ ಕಲೆ ಅವನಿಗೆ ಒಲಿದಿರುತ್ತದೆ. ಈ ವಾಗ್ಮಿಯ ನುಡಿಗಳಿಂದ ಯಾರಿಗೂ ನೋವಾಗುವುದಿಲ್ಲ ; ಬೇಸರವಾಗುವುದಿಲ್ಲ. ಆತನ ಮಾತು ಸದಸ್ಯರ ಮೇಲೆ ತನ್ನ ಪ್ರಭಾವಮುದ್ರೆಯನ್ನೊತ್ತುತ್ತದೆ. ಅವನ ಮಾತಿನಲ್ಲಿ ಅಸಭ್ಯತೆಯಾಗಲಿ ಅನ್ಯರ ನಿಂದೆಯಾಗಲಿ ಇರದೆ ಸರ್ವರಿಗೂ ಸಂತೋಷವನ್ನೀಯುವ ರಮಣೀಯತೆ ಇರುತ್ತದೆ.

ಮಹಾಕವಿ ಭಾರವಿಯು ವಾಗ್ಮಿತೆ ಹೇಗಿರಬೇಕೆಂಬ ವಿಷಯವಾಗಿ ಒಂದು ಕಲ್ಪನೆಯನ್ನು ಚಿತ್ರಿಸಿದನಷ್ಟೆ. ಅದೇನೋ ಮೆಚ್ಚತಕ್ಕದ್ದು. ಕಾವ್ಯದಲ್ಲಿ ಲೇಖನ ರೂಪದಲ್ಲಿ ತಿಳಿಸಿಕೊಡುವದೇನೂ ಕಠಿನವಲ್ಲ. ಸ್ವತಃ ವೇದಿಕೆಯ ಮೇಲೆ ನಿಂತು ಅಂತೆಯೇ ಭಾಷಿಸುವುದು ಸುಲಭವಲ್ಲ. ಸ್ವತಃ ಭಾರವಿಯು ವಾಗ್ಮಿಯಾಗಿದ್ದನೋ ಇಲ್ಲವೋ ನಮಗೆ ತಿಳಿಯದು ! ಆದರೆ ಅವನ ಲಕ್ಷಣಕ್ಕೆ ಲಕ್ಷ್ಯವಾಗತಕ್ಕ ಭಾಷಣದ ಉದಾಹರಣೆ ಅವನ ಕಿರಾತಾರ್ಜುನೀಯ ಕಾವ್ಯದಲ್ಲಿಯೇ ದೊರೆಯುತ್ತದೆ. ಅದನ್ನು ಪರಿಶೀಲಿಸಿದರೆ ವಾಗ್ಮಿತೆಗೆ ಆದರ್ಶಭೂತವಾದ ಭಾಷಣ ನಮ್ಮ ಕಣ್ಣಮುಂದೆ ನಿಲ್ಲುತ್ತದೆ.

ಅರ್ಜುನನಿಗೂ ಕಿರಾತವೇಷದಲ್ಲಿ ಪ್ರಸನ್ನನಾದ ಪರಮೇಶ್ವರನಿಗೂ ನಡೆದ ಯುದ್ಧಾದಿಗಳ ವರ್ಣನೆಯಿರತಕ್ಕ ಕಾವ್ಯ ಕಿರಾತಾರ್ಜುನೀಯ. ವೇದವ್ಯಾಸರಿಂವ ಇಂದ್ರಮಂತ್ರೋಪದೇಶವನ್ನು ಪಡೆದ ಅರ್ಜುನನು, ಅವರ ಪ್ರೇರಣೆ

ಯಂತೆ ಹಿಮಾಲಯದ ಇಂದ್ರಕೀಲಪರ್ವತದಲ್ಲಿ ದೇವೇಂದ್ರನನ್ನುದ್ದೇಶಿಸಿ ತಪಸ್ಸು ಮಾಡುತ್ತಾನೆ. ಅವನ ಕಠೋರವಾದ ತಪಸ್ಸಿಗೆ ಮೆಚ್ಚಿದ ದೇವೇಂದ್ರನು ವೃದ್ಧಬ್ರಾಹ್ಮಣನ ವೇಷದಲ್ಲಿ ಅರ್ಜುನನಿಗೆ ಪ್ರತ್ಯಕ್ಷವಾಗಿ, ಅವನ ಪರೀಕ್ಷೆಗೆಂದು ಸಂಭಾಷಣೆಯಲ್ಲಿ ತೊಡಗುತ್ತಾನೆ. ಅವನು ಏನೂ ಗೊತ್ತಿಲ್ಲದವನಂತೆ ನಟಿಸುತ್ತ ಅರ್ಜುನನನ್ನು ಕುರಿತು "ಅಯ್ಯಾ ನೀನು ಯಾರು ? ಏಕೆ ತಪಸ್ಸು ಮಾಡುತ್ತಿರುವೆ ? ತಪಸ್ವಿಯ ಬಳಿ ಧನುಸ್ಸು, ಕತ್ತಿ ಮುಂತಾದ ಯುದ್ಧಸಾಧನಗಳೇಕೆ ? ಇವನ್ನು ತ್ಯಜಿಸಿ ಶಾಂತಭಾವದಿಂದ ತಪಸ್ಸನ್ನಾಚರಿಸಬೇಕು" ಎಂದು ಹೇಳುತ್ತಾನೆ. ಇಲ್ಲಿ ಇಂದ್ರನ ಬೋಧನೆಯು ವಾಗ್ವಿಲಾಸವು ವಾಗ್ಮಿಯ ಭಾಷಣಕ್ಕೆ ಪ್ರಥಮೋದಾಹರಣೆಯಾಗಬಲ್ಲುದು. ಅದನ್ನೇ ಅರ್ಜುನನು, ಹಿಂದೆ ಬರೆದ 'ಪ್ರಸಾದರಮ್ಯಮೋಜಸ್ವಿ....' ಇತ್ಯಾದಿ ಯಾಗಿ ಮೂರು ಶ್ಲೋಕಗಳಿಂದ ಪ್ರಶಂಸೆಮಾಡಿದ್ದಾನೆ. ತರುವಾಯ ಅರ್ಜುನನು ಇಂದ್ರನಿಗೆ ಉತ್ತರವನ್ನು ಹೇಳುತ್ತಾನೆ. ಅದೂ ಸಹ ವಾಗ್ಮಿತೆಯ ಉತ್ತಮಪ್ರದರ್ಶನವಾಗಿದೆ. ಅಲ್ಲಿ ಭಾರವಿಯು ತನಗೆ ಸಂಮತವಾದ ವಾಗ್ಮಿತೆಯ ಸ್ವರೂಪವನ್ನು ಪ್ರಕಟಿಸಿದ್ದಾನೆ. ಆ ಶ್ಲೋಕಗಳ ಭಾವಾನುವಾದ ವನ್ನು ಮಾದರಿಗಾಗಿ ಇಲ್ಲಿ ಬರೆಯಲಾಗಿದೆ. ಅರ್ಜುನನು ಹೇಳಿದ್ದೇನೆಂದರೆ– "ಅಪ್ಪಾ, ನೀನು ಸಂಮಾನ್ಯನಾದ ಅತಿಥಿಯಾಗಿದ್ದೀಯೆ. ಇದುವರೆಗೆ ನೀನು ಆಡಿದ ಮಾತೆಲ್ಲವೂ ಅರ್ಥವತ್ತಾದದ್ದು. ಅದು ಪ್ರಸಾದರಮ್ಯವೂ ಓಜಸ್ವಿಯೂ ಆಗಿ ವಾಗ್ಮಿಗೆ ಭೂಷಣಪ್ರಾಯವಾಗಿದೆ. ಇಷ್ಟು ಪ್ರಿಯವಾದ ರೀತಿಯಲ್ಲಿ ನನ್ನ ಹಿತಕಾಮನೆಯಿಂದ ಇನ್ನು ಯಾವ ವಕ್ತೃವು ಮಾತಾಡಿ ಯಾನು ? ಆದರೆ, ಅಯ್ಯಾ, ಬ್ರಾಹ್ಮಣೋತ್ತಮ, ನನ್ನ ಪೌರ್ವಾಪರ್ಯವು ನಿನಗೆ ಗೊತ್ತಿಲ್ಲ, ಆದುದರಿಂದ ನಾನೊಬ್ಬ ಮುನಿಯೆಂದು ಭಾವಿಸಿಕೊಂಡು ಮುನಿಗಳಿಗೆ ಯೋಗ್ಯವಾದ ಧರ್ಮವನ್ನು ನನಗೆ ಬೋಧಿಸಲು ಉದ್ಯುಕ್ತ ನಾಗಿದ್ದೀಯೆ. ಪ್ರಕೃತ ಸಂದರ್ಭವೇನೆಂಬುದನ್ನರಿಯದೆ ಮಾತಾಡತಕ್ಕವನು ವಾಚಸ್ಪತಿಯೇ ಆಗಿದ್ದರೂ ಅವನ ಉಪದೇಶವು ವ್ಯರ್ಥವಾಗಿಬಿಡುತ್ತದೆ; ಮರಳುಗಾಡಿನಲ್ಲಿ ಬತ್ತವನ್ನು ಬಿತ್ತಿದಂತಾಗುತ್ತದೆ. ನಕ್ಷತ್ರಗಳು ರಾತ್ರಿಯಲ್ಲಿ ಬೆಳಗುತ್ತವೆಯೇ ಹೊರತು ಹಗಲಿನಲ್ಲಲ್ಲ. ನಾನಾದರೋ ಕ್ಷತ್ರಿಯ. ಪಾಂಡು ರಾಜನ ಮಗ. ಕುಂತೀಪುತ್ರನಾದ ಪಾರ್ಥ. ಧನಂಜಯನೆಂದೇ ನನ್ನನ್ನು

ಕರೆಯುತ್ತಾರೆ. ನನ್ನ ಹಿರಿಯಣ್ಣನಾದ ಧರ್ಮರಾಜನನ್ನು ನಮ್ಮ ದಾಯಾದಿಗಳು ದೂರಮಾಡಿದರು. ಅಣ್ಣನಾದ ಧರ್ಮರಾಜನ ಆಜ್ಞೆಯಂತೆ ನಡೆಯತಕ್ಕವನು ನಾನು ಕೃಷ್ಣದ್ವೈಪಾಯನ ಮಹರ್ಷಿಗಳ ಆದೇಶದಂತೆ ನಾನು ಈ ತಪೋವ್ರತದಲ್ಲಿ ತೊಡಗಿದ್ದೇನೆ. ಸ್ವರ್ಗಾಧಿಪತಿಯಾದ ದೇವೇಂದ್ರನನ್ನು ಒಲಿಸಿಕೊಳ್ಳುವುದು ನನ್ನ ಉದ್ದೇಶವಾಗಿದೆ ನನ್ನ ಅಣ್ಣ ಧರ್ಮರಾಜನು ಕಪಟದ್ಯೂತದಲ್ಲಿ ಸಿಕ್ಕಿಕೊಂಡು, ನಮ್ಮ ವಧುವಾದ ದ್ರೌಪದಿಯನ್ನೂ ಅಣ್ಣತಮ್ಮಂದಿರಾದ ನಮ್ಮ ನಾಲ್ವರನ್ನೂ ಪಣವಾಗಿಟ್ಟು ಸೋತುಹೋದನು. ಧರ್ಮರಾಜನು ಈಗ ಅರಣ್ಯವಾಸಿಯಾಗಿದ್ದಾನೆ. ದ್ರೌಪದಿಯೊಡನೆಯೂ ಭೀಮಸೇನಾದಿ ಸೋದರರೊಡನೆಯೂ ವನದಲ್ಲಿ ಪರಿತಪಿಸುತ್ತಿದ್ದಾನೆ. ಈಗ ನಾನು ಜೊತೆಯಲ್ಲಿಲ್ಲದ್ದರಿಂದ ರಾತ್ರಿಯೂ ನಿದ್ರೆಮಾಡದೆ ಕೊರಗಿ ಸೊರಗಿ ಹೋಗುತ್ತಿದ್ದಾನೆ. ಅಪ್ಪಾ ಬ್ರಾಹ್ಮಣ, ಇಷ್ಟೇ ಅಲ್ಲ. ತುಂಬಿದ ಸಭೆಗೆ ನಮ್ಮ ದ್ರೌಪದಿಯನ್ನು ಕೌರವರು ಎಳೆದುತಂದು ಅವಳ ಸೀರೆಯನ್ನೆಳೆದು ನಾಚುವಂತೆ ಮಾಡಿದರು. ಮರ್ಮಭೇದಕವಾದ ದುರ್ವಾಕ್ಯಗಳಿಂದ ನಮ್ಮನ್ನು ಜರೆದರು. ಇರಿದರು. ಹಿರಿಯರಾದ ಭೀಷ್ಮದ್ರೋಣಾದಿಗಳ ಸಂನಿಧಿಯಲ್ಲಿ, ಪತಿವ್ರತಾ ಶಿರೋಮಣಿಯಾದ ನಮ್ಮ ದ್ರೌಪದಿಯ ಕೇಶಪಾಶವನ್ನು ಜಗ್ಗಿದರಲ್ಲ, ಅವಳ ಸೀರೆಯನ್ನು ಸೆಳೆದರಲ್ಲ ನಮ್ಮ ದಾಯಾದಿ ವೈರಿಗಳು, ಅವರಿಗೆ ಆ ಕೆಟ್ಟಬುದ್ಧಿಯನ್ನು ಕೊಟ್ಟವನು ಸಾಕ್ಷಾತ್ ಅಂತಕನೇ ಸರಿ ! ಅವರೆಲ್ಲರನ್ನೂ ತನ್ನ ನಗರಕ್ಕೆ ಒಯ್ಯುತ್ತೇನೆಂದು ಅಂತಕನು ಪ್ರತಿಜ್ಞೆಮಾಡಿ, ತನ್ನ ಸತ್ಯಪ್ರತಿಜ್ಞೆಗೆ ಸಾಕ್ಷಿಯಾಗಿರುವಂತೆ ಆ ದುರ್ಬುದ್ಧಿಯನ್ನು ನಮ್ಮ ವೈರಿಗಳಿಗೆ ಕೊಟ್ಟಿರಬೇಕು ! ದುಃಶಾಸನನು ದ್ರೌಪದಿಯನ್ನು ಸಭೆಗೆ ಎಳೆದು ತರುವಾಗ ಪರಾಙ್ಮುಖಳಾಗಿದ್ದ ಆ ದೇವಿಯು ಸಂಜೆಯ ಹೊತ್ತು ಮಹಾ ವೃಕ್ಷದ ಹಿಂದಿರುವ ನೆರಳಿನಂತೆ ವಿಚ್ಛಾಯಳಾಗಿದ್ದಳು. ಸಭೆಯಲ್ಲಿ ನೆರೆದಿದ್ದವರು ಒಂದು ಕ್ಷಣಕಾಲ ಆ ದೃಶ್ಯವನ್ನು ಕಂಡು, ನೋಡಲಾರದೆ ಕಣ್ಣುಮುಚ್ಚಿಕೊಂಡರು. ಓ ಬ್ರಾಹ್ಮಣ, ದ್ರೌಪದಿಯ ಕಣ್ಣಿಂದ ಬಳಬಳನೆ ನೀರು ಸುರಿಯುತ್ತಿತ್ತು. ಐವರು ಪತಿಗಳಿದ್ದರೂ ಕೈಲಾಗದವರಂತೆ ಸುಮ್ಮನೆ ಕುಳಿತಿದ್ದಾರಲ್ಲ – ಎಂಬ ನಿಕೃಷ್ಟಭಾವದಿಂದ ಅವಳು ನಮ್ಮನ್ನು ನೋಡಲು ಬಯಸಲಿಲ್ಲವೋ ಏನೋ ? ಗುಣಪ್ರಿಯನಾದ ನಮ್ಮ ಅಣ್ಣನು ಅಂತಹ

ದುಃಸ್ಥಿತಿಯನ್ನೂ ನೋಡುತ್ತ ಸುಮ್ಮನೆ ಕುಳಿತಾಗ, ಅವನ ಇಚ್ಛೆಗೆ ವಿರುದ್ಧವಾಗಿ ನಾವು ಎದುರಾಗುವುದು ಹೇಗೆ ? ಶತ್ರುಗಳನ್ನು ಇನ್ನೊಮ್ಮೆ ಧ್ವಂಸಮಾಡಲಾದೀತು, ಲೋಕಾಪವಾದಕ್ಕೆ ಹೆದರಬೇಕು – ಎಂದು ನಾವು ಸುಮ್ಮನಾದೆವು. ಆ ಧೃತರಾಷ್ಟ್ರನ ಮಕ್ಕಳನ್ನು ನಾವು ಎಷ್ಟೆಷ್ಟು ಪ್ರೀತಿಸಿದೆವೋ ಅಷ್ಟಷ್ಟು ವೈರವನ್ನೇ ಅವರು ಕಾರುತ್ತ ಬಂದರು ಕುಸಿದು ಬೀಳುತ್ತಿರುವ ನದೀತೀರದ ನೆಲದಲ್ಲಿ ನೆರಳಿಗಾಗಿ ನಾವು ಕುಳಿತಂತಾಯಿತು. ಕೆಟ್ಟ ಹೆಸರಿಗೆ ಅಂಜದೆ, ಗುಣವನ್ನು ದೋಷವಾಗಿಯೇ ಭಾವಿಸುವ ದುರ್ಜನರ ಹೃದಯವನ್ನು ಯಾರು ಬಲ್ಲರು ? ಆ ವೈರಿಗಳಿಗೆ ತಕ್ಕ ಪ್ರತೀಕಾರವನ್ನು ಒಂದಲ್ಲ ಒಂದು ದಿನ ನಾನು ಮಾಡುತ್ತೇನೆಂಬ ಧೈರ್ಯವು ನನ್ನ ಪ್ರಾಣವನ್ನು ಇದುವರೆಗೆ ಹಿಡಿದು ನಿಲ್ಲಿಸಿದೆ. ಇಲ್ಲದಿದ್ದರೆ ಅಷ್ಟು ಅವಮಾನವನ್ನು ಅನುಭವಿಸಿದ ನನ್ನ ಹೃದಯವು ಆಗಲೇ ಒಡೆದು ಸೀಳಾಗಿ ಹೋಗುತ್ತಿತ್ತು ! ಅಯ್ಯಾ ವಿಪ್ರೋತ್ತಮ, ಹೀಗೆ ಅವಮಾನದಿಂದ ಲಜ್ಜೆಗೆಟ್ಟು ಬಾಳುತ್ತಿರುವ ನಾವು ಐವರು ಸೋದರರು ನಮ್ಮಲ್ಲಿಯೇ ಒಬ್ಬರ ಮುಖವನ್ನೊಬ್ಬರು ನೋಡಲಾರದೆ ನಾಚಿಕೆಯಿಂದ ತಲೆ ತಗ್ಗಿಸುತ್ತಿದ್ದೇವೆ ! ಇನ್ನು ಹೊರಗಿನವರ ಮುಖವನ್ನು ನಾವು ತಲೆಯೆತ್ತಿ ನೋಡುವುದು ಹೇಗೆ ? ಪುಕ್ಕಲು ಜಿಂಕೆಗಳಂತೆ ಕಾಡಿನಲ್ಲಿ ಅಲೆಯುತ್ತಿದ್ದೇವೆ. ಮಾನಮರ್ಯಾದೆಗಳನ್ನು ಕಳೆದುಕೊಂಡು ಗೌರವವಿಲ್ಲದ ನಿಃಸಾರವಾದ ಬದುಕನ್ನು ಸಾಗಿಸುತ್ತ, ಶಕ್ತಿಯಿಲ್ಲದೆ ತಲೆ ಬಾಗಿ ನಡೆಯುತ್ತಿರುವ ಮನುಷ್ಯನಿಗೂ ಒಣಹುಲ್ಲಿಗೂ ವ್ಯತ್ಯಾಸವೇನೂ ಇಲ್ಲ. ಎಲ್ಲಿಯ ವರೆಗೆ ಸಮಾಜದಲ್ಲಿ ಒಬ್ಬನಿಗೆ ಗೌರವವಿರುತ್ತದೆಯೋ ಅಲ್ಲಿಯ ವರೆಗೆ ಅವನು ಮನುಷ್ಯ. ಗೌರವ ಹೋದ ಮೇಲೆ ಅವನು ಮನುಷ್ಯನೇ ಅಲ್ಲ ! ಮನುಷ್ಯನಾಗಿ ಹುಟ್ಟಿದ ಮೇಲೆ ಆತನ ಸತ್ಕೀರ್ತಿಯು ಸರ್ವತ್ರ ವಿಜೃಂಭಿಸುವಂತೆ ಬಾಳಬೇಕು. ಅಂತಹ ಕೀರ್ತಿಶಾಲಿಯಿಂದ ಅವನ ಪೂರ್ವಜರಿಗೂ ಗೌರವ ಬರುತ್ತದೆ. ಭೂಮಿಗೆ 'ರತ್ನಗರ್ಭಾ' ಎಂಬ ಹೆಸರುಂಟು. ರತ್ನವೆಂದರೆ ನನ್ನ ದೃಷ್ಟಿಯಲ್ಲಿ ಕೀರ್ತಿ ಸಂಪನ್ನನಾದವನು. ಮರಕ್ಕೆ ಬರಸಿಡಿಲೆರಗುವಂತೆ ಯಾವ ಕ್ಷತ್ರಿಯನ ಕ್ರೋಧವು ವೈರಿಗೆ ಬಡಿಯುವುದೋ ಆತನು ಅನ್ಯ ಕ್ಷತ್ರಿಯರಿಗೆ ಮಾರ್ಗದರ್ಶಿಯಾಗುವನು. ಬ್ರಾಹ್ಮಣೋತ್ತಮ, ಕ್ಷತ್ರಿಯನಾದ ನನಗೆ ಸುಖದ ವ್ಯಾಮೋಹವಿಲ್ಲ. ಧನದ ಆಸೆ ಇಲ್ಲ. ಸಮುದ್ರದ ಅಲೆಗಳಂತೆ

ಅವೆಲ್ಲವೂ ಕ್ಷಣಿಕವಾದವು. ಅಥವಾ ಜಗತ್ತಿಗೆ ಅನಿತ್ಯತೆಯೆಂಬ ಸಿಡಿಲು ಬಡಿಯುತ್ತದೆ-ಎಂದು ಭಾವಿಸಿ ನಾನು ಬ್ರಹ್ಮ ಪದವಿಯನ್ನು ಬಯಸುವುದಿಲ್ಲ. ನಾನು ಬಯಸುವುದೇನೆಂದರೆ, ಮೋಸದಿಂದ ನಮಗೆ ಅಪಕೀರ್ತಿಯೆಂಬ ಕೆಸರನ್ನು ಅಂಟಿಸಿದರಲ್ಲ, ಆ ಕೆಸರನ್ನು ನಿಃಶೇಷವಾಗಿ ತೊಡೆದು ಹಾಕಬೇಕೆಂಬುದನ್ನು ಮಾತ್ರ. ಯಾವುದರಿಂದ ಆ ಅಪಕೀರ್ತಿಯನ್ನು ತೊಳೆಯಬೇಕೆಂದರೆ, ನನ್ನ ವೈರಿಗಳ ಮಡದಿಯರಿಗೆ ವೈಧವ್ಯವನ್ನು ತಂದೊಡ್ಡಿದಾಗ ಆ ಸ್ತ್ರೀಯರು ಬಳಬಳನೆ ಕಣ್ಣೀರು ಕೋಡಿಯನ್ನು ಹರಿಸುವರಲ್ಲ, ಆ ಕಣ್ಣೀರಿನಿಂದ ! ಈ ಕಾರ್ಯದಿಂದ ನಾನು ಹಿಂದಕ್ಕೆ ಸರಿಯತಕ್ಕವನಲ್ಲ. ನನ್ನ ಉದ್ಯಮವನ್ನು ನೋಡಿ ವಿದ್ವಾಂಸರು ಬೇಕಾದರೆ ನನ್ನನ್ನು ಅಪಹಾಸ್ಯ ಮಾಡಲಿ ! ನನಗೆ ಬುದ್ಧಿ ಕೆಟ್ಟಿದೆಯೆಂದಾದರೂ ಹೇಳಿಕೊಳ್ಳಲಿ ! ಎಂತಹ ಚಲಗಾರನಿಗೆ ಬುದ್ಧಿ ಹೇಳಲು ಹೊರಟೆನೆಂದು ನಿನಗೆ ಪಶ್ಚಾತ್ತಾಪವಾಗಿ ನಾಚಿದರೂ ಚಿಂತೆಯಿಲ್ಲ ! ನನ್ನ ಗುರಿಯಿಂದ ನಾನು ಹಿಂದಕ್ಕೆ ಸರಿಯತಕ್ಕವನಲ್ಲ ! ಕೀರ್ತಿಯೇ ನನ್ನ ವಂಶಲಕ್ಷ್ಮಿ. ಶತ್ರುಗಳನ್ನು ಸದೆಬಡಿದು ಅವಳನ್ನು ನಾನು ಮೇಲಕ್ಕೆತ್ತಲೇ ಬೇಕು. ಅದಕ್ಕೆ ಮೊದಲು ಮೋಕ್ಷವನ್ನು ಕೂಡ ನಾನು ಬಯಸುವುದಿಲ್ಲ. ಜಯಲಕ್ಷ್ಮಿಯನ್ನು ಪಡೆಯುವುದಕ್ಕೆ ಅದು ಅಡ್ಡಿಯೆಂದೇ ಭಾವಿಸುತ್ತೇನೆ ! ಅರಿಗಳು ಅಪಹರಿಸಿದ ಯಶಸ್ಸನ್ನು ಯಾವಾತನು ತನ್ನ ಶರಜಾಲಗಳಿಂದ ಅರಿಗಳ ತಲೆಗಳನ್ನು ತರಿದು, ಮತ್ತೆ ಯಶಸ್ಸನ್ನು ವಶಪಡಿಸಿಕೊಳ್ಳುವುದಿಲ್ಲವೋ ಆತನು ಪುರುಷನೆ ? ಅಂತಹನು ಹುಟ್ಟಲೇ ಬಾರದು ! ಹುಟ್ಟಿದರೂ ಅವನು ಸತ್ತವನೇ ! ಸಾಯದಿದ್ದರೆ ಅದೊಂದು ಹುಲ್ಲುಕಡ್ಡಿಯೆಂದು ತಿಳಿಯಬೇಕು.

"ಓ ತಪೋಧನ, ನೀನೇ ಹೇಳು. ವೈರಿಗಳನ್ನು ಅರೆದು ಹಾಕದೆ ಯಾವಾತನ ಕ್ರೋಧವು ತಾನಾಗಿ ಇಂಗಿ ಹೋಗುವುದೋ ಆತನು ಗಂಡಸೇ ? ಯಾವಾತನ ಹೆಸರನ್ನು ಕೇಳಿದರೆ, ಆ ಹೆಸರೇ ವೈರಿಗಳ ತೇಜಸ್ಸನ್ನು ನುಂಗುತ್ತಿರುವಂತೆ ಭಾಸವಾಗುತ್ತದೆಯೋ ಅದು ನಿಜವಾಗಿ ಹೆಸರು ! ಯಾವಾತನ ಹೆಸರನ್ನು ಶತ್ರುಗಳೂ ಸಹ ಗೌರವದಿಂದ ಕಾಣುತ್ತಾರೋ ಆ ಪುರುಷನೇ ನಿಜವಾದ ಪುರುಷ ! ತಪೋಧನ, ಪ್ರತಿಜ್ಞಾನುಸಾರವಾಗಿ ವೈರಿಗಳನ್ನು ಸಂಹಾರಮಾಡುವುದಕ್ಕಾಗಿ ನನ್ನ ಅಣ್ಣನಾದ ಧರ್ಮರಾಜನು ನನ್ನನ್ನೇ

ನಂಬಿಕೊಂಡಿದ್ದಾನೆ. ಬಾಯಾರಿದವನು ನೀರನ್ನು ಅಪೇಕ್ಷಿಸುವಂತೆ ನನ್ನ ಪರಾಕ್ರಮವನ್ನು ಅವಲಂಬಿಸಿದ್ದಾನೆ. ನಾನು ಕ್ಷತ್ರಿಯ ಯೋಧನಾಗಿದ್ದೇನೆ. ಯುದ್ಧದಲ್ಲಿ ವೈರಿಗಳನ್ನೆದುರಿಸಿ ಹೋರಾಡಿ ನನ್ನ ವಂಶದ ಕೀರ್ತಿಯನ್ನು ಉಳಿಸುವುದು ನನ್ನ ಕರ್ತವ್ಯ. ಅದೇ ನನಗೆ ಧರ್ಮ ! ನನ್ನ ಕರ್ತವ್ಯವನ್ನು ಪಾಲಿಸದೆ, ಕ್ಷತ್ರಿಯ ಧರ್ಮವನ್ನು ಉಲ್ಲಂಘಿಸಿ ವಾನಪ್ರಸ್ಥನೋ ಸಂನ್ಯಾಸಿಯೋ ಆಗಿಬಿಡಲೆ ? ಯುದ್ಧಕ್ಕೆ ಅಂಜುವ ಹೇಡಿಯೆಂದು ಜಗತ್ತು ನನ್ನನ್ನು ನಿಂದಿಸದೆ ಬಿಟ್ಟೀತೆ ? ಅದೆಂದಿಗೂ ಆಗತಕ್ಕದಲ್ಲ. ಓ ತಪಸ್ವಿ, ನನ್ನ ನಿರ್ಧಾರವನ್ನು ಕೇಳು. ಮೋಡವು ಗಾಳಿಯ ಹೊಡೆತಕ್ಕೆ ಸಿಕ್ಕಿ ಚೂರುಚೂರಾಗಿ ಕರಗಿಹೋಗುವುದನ್ನು, ಈ ಪರ್ವತ ಶಿಖರದಲ್ಲಿ ನಾನು ನೋಡಿದ್ದೇನೆ. ಅಂತೆಯೇ ನಾನು ಈ ಗಿರಿಶಿಖರದಲ್ಲಿ ತಪಸ್ಸುಮಾಡುತ್ತಾ ಮಾಡುತ್ತಾ ಆ ಮೋಡದಂತೆ ಕರಗಿಯಾದರೂ ಹೋಗುತ್ತೇನೆ ! ಅಥವಾ ದೇವೇಂದ್ರನನ್ನು ಆರಾಧನೆಯಿಂದ ಮೆಚ್ಚಿಸಿ, ಎದೆಗೆ ನೆಟ್ಟಿರುವ ಅಪಕೀರ್ತಿಯೆಂಬ ಭರ್ಜಿಯ ನ್ನಾದರೂ ಕಿತ್ತೆಸೆಯುತ್ತೇನೆ ! ಇದು ನನ್ನ ನಿಶ್ಚಯ" ಎನ್ನುತ್ತಾನೆ. ಆಗ ದೇವೇಂದ್ರನು ಸುಪ್ರಸನ್ನನಾಗಿ ತನ್ನ ನಿಜರೂಪದಿಂದ ಅರ್ಜುನನನ್ನು ಆಲಿಂಗಿಸಿಕೊಂಡು "ಅರ್ಜುನ, ನೀನು ನನ್ನ ವರಪುತ್ರನಾಗಿದ್ದೀಯೆ. ನಿನ್ನ ಇಷ್ಟಾರ್ಥವು ಪೂರ್ಣವಾಗಿ ಸಿದ್ಧಿಸಬೇಕಾದರೆ ನೀನು ಪರಮೇಶ್ವರನನ್ನು ಕುರಿತು ತಪಸ್ಸುಮಾಡು. ಆತನು ಪ್ರಸನ್ನನಾದಾಗ, ನಾನೊಬ್ಬನೇ ಅಲ್ಲ, ಎಲ್ಲ ದಿಕ್ಪಾಲರೂ ಪ್ರಸನ್ನರಾಗಿ ನಿನ್ನ ಇಷ್ಟಾರ್ಥವನ್ನು ಪೂರೈಸುತ್ತಾರೆ, ನಿನ್ನ ಕಾರ್ಯಸಿದ್ಧಿಯಾಗುವುದು" ಎಂದು ನುಡಿದು ಅಂತರ್ಧಾನ ಹೊಂದುತ್ತಾನೆ.

ವಾಗ್ಮಿಯಾದವನು ಭಾಷಣಮಾಡುವ ಶೈಲಿ ಹೇಗಿರುತ್ತದೆಯೆಂಬುದನ್ನಿಲ್ಲಿ ಭಾರವಿಯು ತಿಳಿಸಿದ್ದಾನೆ. ಸಂಸ್ಕೃತ ಶ್ಲೋಕಗಳಲ್ಲಿರುವ ಪ್ರಸಾದ, ಓಜೋ ಗುಣಗಳನ್ನು ಈ ಭಾವಾನುವಾದದಲ್ಲಿ ಕಾಣಲಾಗುವುದಿಲ್ಲ. ವೃದ್ಧಬ್ರಾಹ್ಮಣನು ಪ್ರಬಲವಾಗಿಯೇ ಪ್ರತಿಪಾದಿಸಿದ ಅಂಶವನ್ನು ಅರ್ಜುನನು ಪ್ರಬಲವಾಗಿಯೇ ನಿರಾಕರಿಸಿದ್ದಾನೆ. ಆದರೆ ವೃದ್ಧಬ್ರಾಹ್ಮಣನ ಮನಸ್ಸಿಗೆ ನೋವಾಗುವ ಮಾತು ಇದರಲ್ಲಿಲ್ಲ ಅರ್ಜುನನು ಮಾತನ್ನಾರಂಭಿಸುವಾಗಲೇ 'ಪ್ರಸಾದ ರಮ್ಯಮೋಜಸ್ವಿ....' ಎಂದು ಆ ಬ್ರಾಹ್ಮಣನ ವಾಗ್ವಿಲಾಸವನ್ನು ಶ್ಲಾಘಿಸಿ ದ್ದಾನೆ. ಬ್ರಾಹ್ಮಣನ ಹಿತೋಪದೇಶವು ಅಲೌಕಿಕವಾದ ಪರಲೋಕಾದಿ

ಶ್ರೇಯಸ್ಸನ್ನು ಬಯಸತಕ್ಕ ಮುನಿಗೆ ಯೋಗ್ಯವಾದದ್ದೇ. ಆದರೆ "ನಾನು ಯಾರು ? ಏಕೆ ತಪಸ್ಸನ್ನು ಮಾಡುತ್ತಿದ್ದೇನೆ-ಎಂಬುದನ್ನರಿಯದೆ ಉಪದೇಶಿಸುತ್ತಿದ್ದೀಯೆ. ನನ್ನ ತಪಸ್ಸಿನ ಉದ್ದೇಶವೇ ನಿನಗೆ ಗೊತ್ತಿಲ್ಲದ್ದರಿಂದ ನಿನ್ನ ಹಿತೋಪದೇಶವು ನನಗೆ ಅನ್ವಯಿಸುವುದಿಲ್ಲ" ಎಂಬ ಮೃದುವಚನಗಳಿಂದಲೇ ಅವನ ಬೋಧನೆಯನ್ನು ಅರ್ಜುನನು ನಿರಾಕರಿಸಿದ್ದಾನೆ. ತೇಜೋವಧೆಯನ್ನು ಮಾಡುವ ಖಂಡನೆಯು ಮಾತು ಅರ್ಜುನನ ಬಾಯಲ್ಲಿ ಬಂದಿಲ್ಲ.

ಸಾಮಾನ್ಯವಾಗಿ ಕಾವ್ಯಗಳಲ್ಲಿ ವಸ್ತುವರ್ಣನೆ ಪ್ರಧಾನವಾಗಿರುತ್ತದೆ. ಭಾಷಣವನ್ನು ಕವಿಗಳು ಬೆಳೆಸುವುದು ವಿರಳವಾದರೂ ಕೆಲವು ಸಂನಿವೇಶಗಳಲ್ಲಿ ಅದನ್ನು ಸಮುಚಿತವಾಗಿ ವರ್ಣಿಸುವುದುಂಟು. ಕಾಳಿದಾಸನ ಕುಮಾರಸಂಭವದಲ್ಲಿ ಶಿವ – ಪಾರ್ವತಿಯರ ಸಂವಾದವು ಸರಸ ಮನೋಹರವಾಗಿದೆ. ರಘುವಂಶ ಕಾವ್ಯದಲ್ಲಿ ಕಾಂತಾವಿಯೋಗ ಸಂತಪ್ತನಾದ ಅಜಮಹಾರಾಜನಿಗೆ ವಸಿಷ್ಠರು ಶಿಷ್ಯನ ಮೂಲಕ ಕಳಿಸಿದ ಸಂದೇಶವೂ ವಾಗ್ಮಿತೆಗೆ ಉದಾಹರಣೆಯಾಗುತ್ತದೆ. ಬಾಣಕವಿಯ ಗದ್ಯಕಾವ್ಯವಾದ ಕಾದಂಬರಿಯಲ್ಲಿ ಶುಕನಾಸೋಪದೇಶ-ಮೊದಲಾದ ಸಂದರ್ಭಗಳಲ್ಲಿ ಬಾಣನ ವಾಗ್ವೈಖರಿಯು ಅಸದೃಶವಾಗಿ ಬಂದಿದೆ. ಶ್ರೀಮದ್ರಾಮಾಯಣ, ಮಹಾಭಾರತಗಳಲ್ಲಿ ಇಂತಹ ವಿಪುಲ ನಿದರ್ಶನಗಳನ್ನು ಕಾಣಬಹುದು. ಕನ್ನಡ ಕಾವ್ಯಗಳಲ್ಲಿ ಮಾತುಗಾರಿಕೆಯ ವೈಭವವನ್ನು ಪ್ರಕಟಿಸುವ ಸಾಮರ್ಥ್ಯ ಕುಮಾರವ್ಯಾಸನಿಗೆ ಮೀಸಲು. ಪಂಪಮಹಾಕವಿಯ ವಿಕ್ರಮಾರ್ಜುನ ವಿಜಯ, ರನ್ನನ ಗದಾಯುದ್ಧ, ರಾಘವಾಂಕನ ಹರಿಶ್ಚಂದ್ರಕಾವ್ಯ-ಮುಂತಾದ ಕೆಲವು ಕಾವ್ಯಗಳಲ್ಲಿಯೂ ಸಂಭಾಷಣೆಯ ವಿಲಾಸವನ್ನು ಕಾಣಬಹುದು. ಈ ವಾಗ್ಮಿತೆಯ ಯಶಸ್ಸು ಕವಿಗೆ ಸೇರುತ್ತದೆಯೇ ಹೊರತು ಆಯಾ ಪಾತ್ರಕ್ಕಲ್ಲ. ಭಾಷಣವನ್ನು ರುಚಿರವಾಗಿ ಬೆಳಸಿ ಬರೆಯುವ ಸಾಮರ್ಥ್ಯ ಈ ಕವಿಗಳಿಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಕವಿಗಳು ಸ್ವತಃ ವಾಗ್ಮಿಗಳಾಗಿದ್ದರೇ ಇಲ್ಲವೇ ಎಂಬುದನ್ನು ನಾವು ಹೇಳಲಾಗುವುದಿಲ್ಲ. ಏಕೆಂದರೆ, ಗ್ರಂಥಗಳನ್ನು ಲೇಖಿಸುವ ಶಕ್ತಿ ಬೇರೆ, ಸಭೆಯಲ್ಲಿ ಮಾತಾಡುವ ಶಕ್ತಿ ಬೇರೆ. ವಾಗ್ಮಿಯು ಭಾಷಣಕಾರ; ಲೇಖಕನಲ್ಲ. ಭಾಷಣ ಲೇಖನ ಕಲೆಗಳು ಪರಸ್ಪರ ವಿಭಿನ್ನವಾದವು.

ಆದಿಕವಿಯೆನಿಸಿದ ವಾಲ್ಮೀಕಿಮುನಿಗಳು ವಾಗ್ಮಿತೆಯನ್ನು ವಿಶೇಷವಾಗಿ ಮೆಚ್ಚಿಕೊಂಡು ಹೊಗಳಿದ್ದಾರೆ. ಅವರ ಶ್ರೀಮದ್ರಾಮಾಯಣದ ಆದಿಯಲ್ಲಿಯೇ ನಾರದರನ್ನು 'ವಾಗ್ವಿದಾಂ ವರಃ' ಎಂದು ಪ್ರಶಂಸೆಮಾಡಿದ್ದಾರೆ. ರಾಮಾಯಣದಲ್ಲಿ ಬರುವ ಪ್ರತಿಯೊಂದು ಪಾತ್ರವೂ ವಾಗ್ವಿಲಾಸವನ್ನು ಪ್ರಕಟಿಸಿ ವಾಗ್ಮಿಗೆ ಉದಾಹರಣೆಯಾಗುತ್ತದೆಯೆಂದರೆ ಅತ್ಯುಕ್ತಿಯಲ್ಲ. ದಶರಥ, ಕೈಕೇಯಿ, ಕೌಸಲ್ಯೆ, ಶ್ರೀರಾಮ, ಸೀತಾ, ಭರತ, ಲಕ್ಷ್ಮಣ – ಇವರೆಲ್ಲರೂ ಉತ್ತಮ ವಾಗ್ಮಿಗಳೇ. ಹನುಮಂತ, ವಾಲಿ, ಸುಗ್ರೀವ, ತಾರೆಯರೂ ವಾಗ್ವಿಲಾಸ ಪ್ರದರ್ಶನದಲ್ಲಿ ಕಡಮೆಯವರಲ್ಲ. ರಾವಣ, ವಿಭೀಷಣ, ಕುಂಭಕರ್ಣ, ಮಂಡೋದರಿಯರೂ ಸಹ ವಾಗ್ಮಿಗಳ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಅವರಲ್ಲಿ ಮುಖ್ಯವಾಗಿ ಶ್ರೀರಾಮ ಮತ್ತು ಆಂಜನೇಯ ಇವರಿಬ್ಬರನ್ನು ವಾಲ್ಮೀಕಿ ಮುನಿಗಳು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಕಿಷ್ಕಿಂಧಾಕಾಂಡದಲ್ಲಿ ಶ್ರೀರಾಮನಿಗೆ ಹನುಮಂತನ ಪ್ರಥಮದರ್ಶನವಾಗುತ್ತದೆ. ಶ್ರೀರಾಮ ಲಕ್ಷ್ಮಣರು ಸೀತಾದೇವಿಯನ್ನು ಅನ್ವೇಷಿಸುತ್ತ ಪಂಪಾಸರಸ್ಸಿನ ಬಳಿಗೆ ಬಂದಿದ್ದಾರೆ. ಕಬಂಧನ ಸೂಚನೆಯಂತೆ ಸುಗ್ರೀವನು ಎಲ್ಲಿರಬಹುದೆಂದು ಸುತ್ತಲೂ ನೋಡುತ್ತಿದ್ದಾರೆ. ಋಷ್ಯಮೂಕ ಪರ್ವತ ಶಿಖರದಲ್ಲಿದ್ದ ಸುಗ್ರೀವನು ಈ ರಾಜಪುತ್ರರನ್ನು ಕಂಡು ಸಂಶಯದಿಂದ ಭೀತನಾಗಿದ್ದಾನೆ. ವಾಲಿಯು ಇವರನ್ನು ತನ್ನ ಸಂಹಾರಕ್ಕಾಗಿ ಕಳಿಸಿರಬಹುದೆಂದು ಸುಗ್ರೀವನಿಗೆ ಸಂಶಯ. ಅನಂತರ ಅವರಿಬ್ಬರು ಯಾರೆಂದು ತಿಳಿದು ಬರುವಂತೆ ಹನುಮಂತನನ್ನು ಕಳುಹಿಸುತ್ತಾನೆ. ಹನುಮಂತನು ಒಬ್ಬ ಭಿಕ್ಷುವಿನ ವೇಷವನ್ನು ಧರಿಸಿ ಶ್ರೀರಾಮ ಲಕ್ಷ್ಮಣರ ಬಳಿಗೆ ಬಂದು ಅವರಿಗೆ ವಿನಯದಿಂದ ನಮಸ್ಕರಿಸಿ ಹೇಳುವ ಮಾತಿದು "ಎಲೈ ಮಹಾತ್ಮರೆ, ರಾಜರ್ಷಿಗಳಂತೆಯೂ ದೇವಕುಮಾರರಂತೆಯೂ ಇರುವ ನೀವು ಕಠಿನ ವ್ರತವನ್ನು ಕೈಗೊಂಡು ತಾಪಸವೇಷವನ್ನು ಧರಿಸಿದ್ದೀರಿ. ನಿಮ್ಮಿಬ್ಬರ ಮೈಬಣ್ಣವೂ ಬಹಳ ಶ್ರೇಷ್ಠವಾಗಿದೆ. ನೀವು ಈ ಪ್ರಾಂತಕ್ಕೆ ಯಾವ ನಿಮಿತ್ತದಿಂದ ಬಂದಿರಬಹುದು ? ಈ ಕಾಡಿನಲ್ಲಿರುವ ಮೃಗಗಳೂ ವನಚಾರಿಗಳೂ ನಿಮ್ಮನ್ನು ಕಂಡು ಅಂಜುತ್ತಿದ್ದಾರೆ. ಪಂಪಾ ತೀರದಲ್ಲಿರುವ ವೃಕ್ಷಗಳನ್ನು ಸುತ್ತಲೂ ನಿರೀಕ್ಷಿಸುತ್ತಿದ್ದೀರಿ. ಇಲ್ಲಿ ಹರಿಯುವ ತಿಳಿನೀರಿನ ಈ ನದಿಗೆ ತಪಸ್ವಿಗಳಾದ ನಿಮ್ಮ ಆಗಮನದಿಂದ ಅಪೂರ್ವವಾದ

ಶೋಭೆಯುಂಟಾಗಿದೆ. ಧೀರರಾದ ನೀವು ಸುವರ್ಣದಂತೆ ಥಳಥಳಿಸುವ ನಿಮ್ಮ ದೇಹಕ್ಕೆ ನಾರು ಬಟ್ಟೆಯನ್ನು ಸುತ್ತಿಕೊಂಡಿದ್ದೀರಲ್ಲ ! ಮಾರ್ಗಾಯಾಸದಿಂದ ನಿಟ್ಟುಸಿರುಬಿಡುತ್ತಿದ್ದೀರಿ, ಆಜಾನುಬಾಹುಗಳಾದ ನಿಮ್ಮನ್ನು ಕಂಡು ಇಲ್ಲಿರುವ ಪ್ರಾಣಿಗಳು ಹೆದರುತ್ತಿವೆ. ನಿಮ್ಮ ನೋಟವು ಸಿಂಹಗಳ ನೋಟದಂತೆ ಗಂಭೀರವಾಗಿದೆ. ಪರಾಕ್ರಮದಲ್ಲಿ ಸಿಂಹಗಳನ್ನು ಮೀರಿಸುವ ವೀರಾಗ್ರಣಿಗಳು ನೀವು. ಇಂದ್ರಚಾಪಗಳಂತಿರುವ ದಿವ್ಯಚಾಪಗಳನ್ನು ಹಿಡಿದ ಶತ್ರುಸೂದನರು ನೀವು. ಕಾಂತಿಶಾಲಿಗಳೂ ರೂಪಸಂಪನ್ನರೂ ಆಗಿದ್ದೀರಿ. ಮಹಾವೃಷಭ ದಂತೆ ಹಜ್ಜೆಯಿಡುತ್ತಿದ್ದೀರಿ. ನಿಮ್ಮ ದೀರ್ಘಬಾಹುಗಳು ಆನೆಯ ಶುಂಡಾ ದಂಡದಂತೆ ಕಂಗೊಳಿಸುತ್ತಿವೆ. ತೇಜೋವಂತರಾದ ನರಶ್ರೇಷ್ಠರು ನೀವು. ನಿಮ್ಮ ದೇಹಪ್ರಭೆಯಿಂದ ಈ ಋಷ್ಯಮೂಕಪರ್ವತಕ್ಕೆ ಒಂದು ಶೋಭೆ ಯುಂಟಾಗಿದೆ. ದೇವತಾಸದೃಶರಾದ ನೀವು ರಾಜ್ಯವನ್ನಾಳುವ ಸಾಮರ್ಥ್ಯ ವುಳ್ಳವರು. ಹೀಗಿರುವಾಗ ನೀವು ಈ ಅರಣ್ಯಕ್ಕೆ ಬಂದಿರುವ ನಿಮಿತ್ತವಾದರೂ ಯಾವುದು ? ವೀರಾಗ್ರೇಸರರಾದ ನಿಮ್ಮ ನೇತ್ರಗಳು ಪದ್ಮದಳದಂತಿವೆ. ಜಟೆಗಳನ್ನು ಧರಿಸಿದ್ದೀರಿ. ರೂಪಲಾವಣ್ಯಗಳಲ್ಲಿ ಒಬ್ಬರಿಗೊಬ್ಬರು ಹೋಲು ತ್ತಿದ್ದೀರಿ. ಶೂರರಾದ ನೀವು ದೇವಲೋಕದಿಂದ ಇಳಿದು ಬಂದಂತೆ ಕಾಣುತ್ತೀರಿ. ನಿಮ್ಮನ್ನು ನೋಡಿದರೆ ಚಂದ್ರಸೂರ್ಯರೇ ಸ್ವೇಚ್ಛೆಯಿಂದ ಧರೆಗೆ ಇಳಿದು ಬಂದಂತೆ ಕಾಣುತ್ತದೆ. ವಿಶಾಲವಕ್ಷರಾದ ನೀವು ದೇವರೂಪಿ ಗಳಾದ ಮನುಷ್ಯರಾಗಿರಬಹುದೆ? ನಿಮ್ಮ ಪುಷ್ಟವಾದ ಈ ದೀರ್ಘಬಾಹುಗಳು ಪರಿಘದಂತೆ ದೃಢವಾಗಿವೆ. ಸಕಲಭೂಷಣಗಳಿಂದ ಭೂಷಿತವಾಗಿರಬೇಕಾದ ಈ ಬಾಹುಗಳು ಭೂಷಣಗಳನ್ನು ತೊಡದಿರಲು ಕಾರಣವೇನು ? ನೀವಿಬ್ಬರೂ ಈ ಜಗತ್ತನ್ನೇ ಸಂರಕ್ಷಿಸಲು ಸಮರ್ಥರೆಂದು ನನಗೆ ತೋರಿದೆ. ನಿಮ್ಮ ಈ ಬತ್ತಳಿಕೆಗಳು ನಿಶಿತಾಸ್ತ್ರಗಳಿಂದ ತುಂಬಿವೆ, ಘೋರವಾದ ಈ ಅಸ್ತ್ರಗಳು ಶತ್ರುವಿನ ಜೀವಿತವನ್ನು ಕೊನೆಗಾಣಿಸಬಲ್ಲವು, ಈ ಖಡ್ಗಗಳು ರೋಷದಿಂದ ಬುಸುಗುಟ್ಟುವ ಸರ್ಪಗಳಂತೆ ಕಾಣುತ್ತವೆ. ಎಲೈ ಮಹಾತ್ಮರೆ, ಈ ಪ್ರಕಾರ ದಲ್ಲಿ ನಾನು ಮಾತನಾಡಿಸುತ್ತಿದ್ದರೂ ನೀವೇಕೆ ಉತ್ತರವನ್ನು ಹೇಳದೆ ಸುಮ್ಮನಿದ್ದೀರಿ ? (ಕಿಷ್ಕಿಂಧಾ : ೩೦೬-೧೯)

ಈ ಪ್ರಕಾರವಾಗಿ ಹನುಮಂತನು ಇನ್ನೂ ಕೆಲವು ಮಾತುಗಳನ್ನಾಡುತ್ತಾನೆ. ಸುಗ್ರೀವನನ್ನು ದಂಡಿಸುವುದಕ್ಕಾಗಿ ಇವರು ವಾಲಿಯಿಂದ ಪ್ರೇಷಿತರೆ ? ಅಲ್ಲವೆ ? – ಎಂದು ತಿಳಿಯುವುದು ಹನುಮಂತನ ಉದ್ದೇಶವಾಗಿದೆ. ಒಂದು ವೇಳೆ ವಾಲಿಯು ಅವರನ್ನು ಕಳಿಸಿದ್ದರೆ, ಅವರ ಮನಸ್ಸನ್ನು ಪರಿವರ್ತಿಸಬೇಕೆಂಬ ದೂರದ ಆಶಯವೂ ಹನುಮಂತನ ಮನಸ್ಸಿನಲ್ಲಿದೆ. ಆದುದರಿಂದಲೇ ಶ್ರೀರಾಮಲಕ್ಷ್ಮಣರನ್ನು ಹೃದಯಪೂರ್ವಕವಾಗಿ ಹೊಗಳುವ ಮಾತನ್ನಾಡಿದ್ದಾನೆ. ಅನಂತರ ತಾನು ಸುಗ್ರೀವನ ದೂತನೆಂದು ತನ್ನ ಪರಿಚಯವನ್ನು ಹೇಳಿಕೊಳ್ಳುತ್ತಾನೆ. ಇಷ್ಟು ವಿನಯಗುಣ ಸಂಪನ್ನನಾದ ದೂತನು ಸುಗ್ರೀವನಿಗಿರುವಾಗ, ಇವನ ಸ್ವಾಮಿಯಾದ ಸುಗ್ರೀವನೂ ಯೋಗ್ಯವ್ಯಕ್ತಿಯಾಗಿರಬೇಕೆಂಬ ಭಾವನೆ ಯಾರಿಗಾದರೂ ಬರುವುದು ಸಹಜ. ಅಲ್ಲದೆ ಶ್ರೀರಾಮಲಕ್ಷ್ಮಣರ ಧೀರೋದಾತ್ತಲಕ್ಷಣವನ್ನೂ ವ್ಯಕ್ತಿಗಾಂಭೀರ್ಯವನ್ನೂ ಪರಿಶೀಲಿಸಿದ ಹನುಮಂತನಿಗೆ ಅವರ ವಿಷಯದಲ್ಲಿ ಸದ್ಭಾವನೆಯೇ ಹುಟ್ಟಿರಬೇಕು. ಇಂತಹ ಮಹಾಪುರುಷರು ವಾಲಿಯ ಮಾತನ್ನು ಕೇಳಿಕೊಂಡು ಸ್ವಲ್ಪವೂ ಪರಿಚಯವಿಲ್ಲದ ಸುಗ್ರೀವನನ್ನು ಕೊಲ್ಲಲು ಒಂದುಬಿಡುತ್ತಾರೆಯೆ ? ಇದು ಸರ್ವಥಾ ಅಸಂಭವ–ಎಂದು ಹನುಮಂತನಿಗೆ ನಿಶ್ಚಯವಾಗಿದೆ. ಆದುದರಿಂದಲೇ ತಾನು ಸುಗ್ರೀವನ ಆಪ್ತನೆಂದು ತಿಳಿಸಿದ್ದಾನೆ.

ಹನುಮಂತನ ಈ ನುಡಿಗಳಿಂದ ಶ್ರೀರಾಮನು ಸಂತುಷ್ಟನಾಗುತ್ತಾನೆ. ಆತನ ನಯಪೂರ್ಣವಾಕ್ಯಗಳಿಂದ ಸುಪ್ರೀತನಾಗಿ ಅವನೊಡನೆ ಮಾತಾಡುವಂತೆ ಲಕ್ಷ್ಮಣನಿಗೆ ಹೇಳುತ್ತಾನೆ –

> ಏತಚ್ಛ್ರುತ್ವಾ ವಚಸ್ತಸ್ಯ ರಾಮೋ ಲಕ್ಷ್ಮಣಮಬ್ರವೀತ್
> ಪ್ರಹೃಷ್ಟವದನಃ ಶ್ರೀಮಾನ್ ಭ್ರಾತರಂ ಪಾರ್ಶ್ವತಃ ಸ್ಥಿತಮ್
> ಸಚಿವೋಽಯಂ ಕಪೀಂದ್ರಸ್ಯ ಸುಗ್ರೀವಸ್ಯ ಮಹಾತ್ಮನಃ
> ತಮೇವ ಕಾಂಕ್ಷಮಾಣಸ್ಯ ಮಮಾಂತಿಕಮುಪಾಗತಃ

ಹನುಮಂತನ ಮಾತನ್ನು ಕೇಳಿ ಶ್ರೀರಾಮನ ಮುಖವು ಅರಳಿತು. ಅವನ ಪಾರ್ಶ್ವದಲ್ಲಿ ನಿಂತಿದ್ದ ತಮ್ಮನಾದ ಲಕ್ಷ್ಮಣನ ಕಡೆಗೆ ತಿರುಗಿ ಉಲ್ಲಾಸದಿಂದ "ಸೌಮಿತ್ರಿ, ಇವನು ಮಹಾತ್ಮನೂ ಕಪೀಂದ್ರನೂ ಆದ ಸುಗ್ರೀವನ

ಸಚಿವನಂತೆ. ಅವನನ್ನೇ ಹುಡುಕುತ್ತಿರುವ ನಮ್ಮ ಬಳಿಗೆ ದೈವಿಕವಾಗಿ ಬಂದಿದ್ದಾನೆ.

> ಅಭಿಭಾಷಸ್ವ ಸೌಮಿತ್ರೇ ಸುಗ್ರೀವಸಚಿವಂ ಕಪಿಮ್
> ವಾಕ್ಯಜ್ಞಂ ಮಧುರೈರ್ವಾಕ್ಯೈಃ ಸ್ನೇಹಯುಕ್ತಮರಿಂದಮ

ಲಕ್ಷ್ಮಣ, ಸುಗ್ರೀವನ ಸಚಿವನಾದ ಈತನೊಡನೆ ಮಾತನಾಡು. ಇವನು ಮಾತಿನ ಭಾವವನ್ನು ಅರಿಯಬಲ್ಲ. ಮೃದುವಾಕ್ಯಗಳಿಂದ ಸ್ನೇಹಯುಕ್ತವಾಗಿ ಸಂಭಾಷಿಸು.

> ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ
> ನಾಸಾಮವೇದವಿದುಷಃ ಶಕ್ಯಮೇವಂ ಪ್ರಭಾಷಿತುಮ್

ಋಗ್ವೇದ, ಯಜುರ್ವೇದ, ಸಾಮವೇದಗಳನ್ನು ಅರ್ಥಸಹಿತವಾಗಿ ಅಧ್ಯಯನ ಮಾಡದಿರುವವನಿಗೆ ಈ ರೀತಿಯಲ್ಲಿ ಮಾತನಾಡಲು ಶಕ್ಯವಿಲ್ಲ.

> ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾ ಶ್ರುತಮ್
> ಬಹು ವ್ಯಾಹರತಾನೇನ ನ ಕಿಂಚಿದಪಶಬ್ದಿತಮ್

ಈ ಹನುಮಂತನು ಸಮಸ್ತ ವ್ಯಾಕರಣ ಶಾಸ್ತ್ರವನ್ನೂ ಅನೇಕ ಸಲ ಚೆನ್ನಾಗಿ ವ್ಯಾಸಂಗ ಮಾಡಿರುವುದೇ ನಿಶ್ಚಯ. ಇವನು ಇಷ್ಟು ಮಾತನಾಡಿದರೂ ಒಂದು ಅಪಶಬ್ದವೂ ಹೊರಡಲಿಲ್ಲ.

> ನ ಮುಖೇ ನೇತ್ರಯೋರ್ವಾಪಿ ಲಲಾಟೇ ಚ ಭ್ರುವೋಸ್ತಥಾ
> ಅನ್ಯೇಷ್ವಪಿ ಚ ಗಾತ್ರೇಷು ದೋಷಃ ಸಂವಿದಿತಃ ಕ್ವಚಿತ್

ಇವನು ಮಾತನಾಡುವಾಗ ಮುಖ, ಕಣ್ಣು, ಹಣೆ, ಹುಬ್ಬುಗಳಲ್ಲಾಗಲಿ ಇತರ ಅಂಗಾಂಗಗಳಲ್ಲಾಗಲಿ ಯಾವ ವಿಕಾರವೂ ಕಾಣಿಸಲಿಲ್ಲ.

> ಅವಿಸ್ತರಮಸಂದಿಗ್ಧಮವಿಲಂಬಿತಮದ್ರುತಮ್
> ಉರಃಸ್ಥಂ ಕಂಠಗಂ ವಾಕ್ಯಂ ವರ್ತತೇ ಮಧ್ಯಮೇ ಸ್ವರೇ

ಈತನು ಮಾತನ್ನು ಅನಾವಶ್ಯಕವಾಗಿ ವಿಸ್ತರಿಸಲಿಲ್ಲ. ಸಂದೇಹಕ್ಕೆ ಎಡೆ ಯಾಗುವ ಅಸ್ಫುಟವಾದ ಉಚ್ಚಾರಣೆ ಇಲ್ಲ, ಸ್ವಲ್ಪವೂ ತಡವರಿಸಲಿಲ್ಲ.

(ಅರ್ಥವಾಗದಂತೆ) ಬಹುವೇಗವಾಗಿಯೂ ಮಾತಾಡಲಿಲ್ಲ. ಇವನ ವಾಕ್ಯವು ಉರಸ್ಥವೂ ಕಂಠಗವೂ ಆಗಿ ಮಧ್ಯಮಸ್ವರದಲ್ಲಿದೆ.

> ಸಂಸ್ಕಾರಕ್ರಮಸಂಪನ್ನಾಮದ್ರುತಾಮವಿಲಂಬಿತಾಮ್
> ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್

ಲಕ್ಷ್ಮಣ, ಇವನು ವ್ಯಾಕರಣಶುದ್ಧವಾಗಿಯೂ ಕ್ರಮಬದ್ಧವಾಗಿಯೂ ಮಾತಾಡುತ್ತಾನೆ. ಇವನ ವಾಕ್ಯರಚನೆ ತ್ವರಿತವೂ ಅಲ್ಲ, ವಿಲಂಬಿತವೂ ಅಲ್ಲ. ಮಾತಿನ ಶೈಲಿ ಮಧುರವೂ ಚೇತೋಹಾರಿಯೂ ಆಗಿದೆ.

> ಅನಯಾ ಚಿತ್ರಯಾ ವಾಚಾ ತ್ರಿಸ್ಥಾನವ್ಯಂಜನಸ್ಥಯಾ
> ಕಸ್ಯ ನಾರಾಧ್ಯತೇ ಚಿತ್ತಮುದ್ಯತಾಸೇರರೇರಪಿ

ಉರಸ್ಸು, ಕಂಠ, ಶಿರಸ್ಸುಗಳಲ್ಲಿ ಅಭಿವ್ಯಕ್ತವಾಗಿ ಆಶ್ಚರ್ಯಕರವಾದ ಈ ವಾಣಿಯು ಯಾರನ್ನು ಆನಂದಗೊಳಿಸದು? ಕತ್ತರಿಸಲು ಕೈಯನ್ನೆತ್ತಿದ ಶತ್ರುವಿನ ಚಿತ್ತವನ್ನೂ ಇದು ಪ್ರಸನ್ನಗೊಳಿಸುವುದು !

(ಕಿಷ್ಕಿಂಧಾ: ೩. ೨೫-೩೩)

ಈ ಮಾತುಗಳಿಂದ ಭಾಷಣಕಾರನ ವಾಗ್ಮಿತೆಯು ಹೇಗಿರುತ್ತದೆ – ಹೇಗಿರಬೇಕು ಎಂಬುದು ಸ್ಫುಟವಾಗುತ್ತದೆ. ಭಾಷಣಕಾರನ ಮಾತು ವ್ಯಾಕರಣಶುದ್ಧವಾಗಿರಬೇಕೆಂಬುದು ಮುಖ್ಯವಾದದ್ದು. ಅಪಶಬ್ದಗಳನ್ನು ಬಳಸಿ ಅನನ್ವಿತವಾದ ಮಾತುಗಳು ಅವನ ಬಾಯಿಂದ ಬರಬಾರದು. ಭಾಷಣ ಕಾರನು ಈ ವಿಷಯವನ್ನು ಗಣಿಸದೆ ಹೋದರೆ ಶ್ರೋತೃಗಳಿಗೆ ಉದ್ವೇಗ ವುಂಟಾಗಿ, ಆತನು ವಿದ್ಯಾವಂತನಲ್ಲವೆಂಬ ಭಾವನೆ ಹುಟ್ಟಿಬಿಡುತ್ತದೆ. ಹಾಗಾಯಿತೆಂದರೆ ಭಾಷಣದ ಪ್ರಭಾವ ಕುಗ್ಗಿಹೋಗುತ್ತದೆ ಮನಸ್ಸಿಗೆ ಬಂದಂತೆ ಏನನ್ನೋ ಹಲುಬುತ್ತಾನೆ–ಎಂಬ ಅಸಡ್ಡೆ ಸಭಾಸದರಿಗೆ ಉಂಟಾಗಿ ಬಿಡುತ್ತದೆ. ಆಗ ಆತನು ಸಮಂಜಸವಾದ ವಿಚಾರವನ್ನು ಮುಂದಿಟ್ಟರೂ ಸಭಾಸದರಿಗೆ ಪೂರ್ಣವಾಗಿ ವಿಶ್ವಾಸ ಹುಟ್ಟದೇ ಹೋಗಬಹುದು. ವ್ಯಾಕರಣ ಶುದ್ಧಿಯೆನ್ನುವುದು ಒಬ್ಬ ವ್ಯಕ್ತಿಯ ಭವ್ಯವಾದ ಆಕೃತಿ, ನಿಲುವು, ಸ್ವಚ್ಛವಾದ ಉಡಿಗೆಗಳಿದ್ದಂತೆ. ಅದು ಬಾಹ್ಯವಸ್ತುವಾದರೂ ಜನರ ಮೇಲೆ ಪ್ರಭಾವದ

ಪ್ರಥಮ ಮುದ್ರೆಯನ್ನೊತ್ತುವುದು. ಆದುದರಿಂದಲೇ ಶ್ರೀರಾಮನ ಮಾತಿನಲ್ಲಿ ಹನುಮಂತನು ಬಳಸಿದ ಶಬ್ದ, ಉಚ್ಚಾರಣೆ, ಶೈಲಿಗಳ ವರ್ಣನೆಯೇ ವಿಶೇಷವಾಗಿ ಬಂದಿದೆ. ಹನುಮಂತನು ಮೂರುವೇದಗಳನ್ನೂ ಅಧ್ಯಯನಮಾಡಿರಬೇಕೆಂಬ ಊಹೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಅವನು ವೇದಾಧ್ಯಯನ ಮಾಡಿರಬೇಕೆಂಬುದಕ್ಕೆ ಕುರುಹುಗಳೇನು ? ಆತನ ಮಾತಿನಲ್ಲಿ ವೇದಪ್ರತಿಪಾದ್ಯವಾದ ಅರ್ಥವೇನೂ ಇಲ್ಲ. ವೇದಾಧ್ಯಯನ ಮಾಡಿದವನು ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಬಲ್ಲ. ಅದ್ರುತವೂ ಅವಿಲಂಬಿತವೂ ಆದ ರೀತಿಯಲ್ಲಿ ಮಧುರವಾಗಿ ಮಧುರಸ್ವರದಿಂದ ಹೇಳಬೇಕೆಂಬ ಶಬ್ದೋಚ್ಚಾರಣ ವಿಧಿಯನ್ನು ಗುರುವಿನಿಂದ ಕಲಿತಿರುತ್ತಾನೆ. ವರ್ಣಗಳು ಹುಟ್ಟುವ ಸ್ಥಾನ ಪ್ರಯತ್ನಗಳನ್ನು ಗಮನಿಸಿ ಅವನ್ನು ಹೇಗೆ ಉಚ್ಚರಿಸಬೇಕೆಂಬುದನ್ನು ತಿಳಿದಿರುತ್ತಾನೆ. ಪಾಣಿನೀಯ ಶಿಕ್ಷೆ ಹೇಳುತ್ತದೆ –

> ವ್ಯಾಘ್ರೀ ಯಥಾ ಹರೇತ್ ಪುತ್ರಾನ್ ದಂಷ್ಟ್ರಾಭ್ಯಾಂ ನ ಚ ಪೀಡಯೇತ್
> ಭೀತಾ ಪತನಭೇದಾಭ್ಯಾಂ ತದ್ವದ್ ವರ್ಣಾನ್ ಪ್ರಯೋಜಯೇತ್

ಹೆಣ್ಣುಹುಲಿ ತನ್ನ ಮರಿಗಳನ್ನು ಹಲ್ಲುಗಳಿಂದ ಕಚ್ಚಿ ಹಿಡಿದು ಸಂಚರಿಸುತ್ತದೆ. ಮೆಲ್ಲಗೆ ಕಚ್ಚಿದರೆ ಮರಿಗಳು ಕೆಳಗೆ ಬಿದ್ದು ಹೋಗಬಹುದೆಂದು ಅಂಜಿಕೆ; ಗಟ್ಟಿಯಾಗಿ ಹಲ್ಲುಗಳಿಂದ ಹಿಡಿದರೆ ಮರಿಗಳಿಗೆ ಗಾಯವಾಗಬಹುದೆಂಬ ಭಯ. ಆದ್ದರಿಂದ ಒಂದು ಮಧ್ಯಸ್ಥವಾದ ರೀತಿಯಲ್ಲಿ ಮರಿಗಳನ್ನು ಬಾಯಲ್ಲಿ ಹಿಡಿದು ತಿರುಗಾಡುತ್ತದೆ. ಹಾಗೆ ಭಾಷಣಕಾರನು ಅಕ್ಷರಗಳನ್ನು ತೇಲಿಸಲೂ ಬಾರದು. ಕರ್ಕಶವಾಗಿ ಒತ್ತಿಹೇಳಲೂ ಬಾರದು. ಹಿತಕರವಾದ ಮಧ್ಯಮಾರ್ಗದಲ್ಲಿ ಅಕ್ಷರಗಳನ್ನು ಉಚ್ಚರಿಸಬೇಕು.

ವಾಗ್ಮಿಯು ತನ್ನ ವಾಗ್ವೈಖರಿಯನ್ನು ಮೆರೆಸುವಾಗ ಮುಖದಲ್ಲಿ ಯಾವ ವಿಕಾರವನ್ನೂ ತೋರಿಸತಕ್ಕದ್ದಲ್ಲ. ಕೈ ಕಾಲುಗಳನ್ನು ಕುಣಿಸಿ ಅಂಗ ಚೇಷ್ಟೆಗಳನ್ನೂ ಮಾಡತಕ್ಕದ್ದಲ್ಲ. ಏನಿದ್ದರೂ ಅಂಗಚೇಷ್ಟೆಯು ಹಿತಮಿತವಾಗಿರಬೇಕು. ಅಭಿನಯವು ಅತಿಯಾದರೆ ಹಾಸ್ಯಾಸ್ಪದವಾಗುತ್ತದೆ. ಶ್ರೀರಾಮನ ಪ್ರಶಂಸಾವಾಕ್ಯದಲ್ಲಿ 'ಉರಃಸ್ಥಂ ಕಂಠಗಂ ವಾಕ್ಯಂ ವರ್ತತೇ

ಮಾಧ್ಯಮೇ ಸ್ವರೇ' ಎಂಬ ಮಾತು ಬಂದಿದೆಯಷ್ಟೆ. ಅದಕ್ಕೆ ವಿವರಣೆಯಾಗಿ ಪಾಣಿನೀಯ ಶಿಕ್ಷೆಯ ಈ ಶ್ಲೋಕವನ್ನು ಗಮನಿಸಬೇಕು–

ಮಾಧುರ್ಯಮಕ್ಷರವ್ಯಕ್ತಿಃ ಪದಚ್ಛೇದಸ್ತು ಸುಸ್ವರಃ
ಧೈರ್ಯಂ ಲಯಸಮರ್ಥಂ ಚ ಷಡೇತೇ ಪಾಠಕಾಗುಣಾಃ

ಕೇಳಲು ಇಂಪಾಗಿರುವುದು, ಸ್ಫುಟವಾದ ಅಕ್ಷರೋಚ್ಚಾರಣೆ, ಅರ್ಥವಾಗುವಂತೆ ಪದಗಳನ್ನು ವಿಂಗಡಿಸಿಕೊಳ್ಳುವುದು. ಸದಸ್ಯರಿಗೆ ಕೇಳುವಷ್ಟು ಗಟ್ಟಿಯಾದ ಧ್ವನಿ, ಸಭಾಕಂಪವಿಲ್ಲದೆ ಧೈರ್ಯವಾಗಿ ಹೇಳುವುದು, ಲಯಬದ್ಧವಾಗಿರುವುದು–ಇವು ಆರು ಪಾಠಕನಲ್ಲಿರಬೇಕಾದ ಗುಣಗಳು.

ಇವೆಲ್ಲವೂ ವೇದಾಧ್ಯಯನದಲ್ಲಿ ವಿದ್ಯಾರ್ಥಿಗಳಿಗೆ ಗುರುವು ಹೇಳಿಕೊಡುವ ನಿಯಮಗಳು. ಇವು ಭಾಷಣಕಾರನಿಗೂ ಅನ್ವಯಿಸುತ್ತವೆ. ಕಾವ್ಯವಾಚನ ಮಾಡುವ ಗಮಕಿಗೂ ಅನ್ವಯಿಸುತ್ತವೆ. ಹೀಗೆಯೇ ಹನುಮಂತನ ವಾಗ್ಮಿತೆಗೆ ಶ್ರೀಮದ್ರಾಮಾಯಣದಲ್ಲಿ ಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ.

ಕನ್ನಡ ಮಹಾಕಾವ್ಯಗಳಲ್ಲಿ ಬರುವ ಕೆಲವೇ ಉದಾಹರಣೆಗಳನ್ನಿಲ್ಲಿ ಪರಿಶೀಲಿಸಬಹುದು. ಈ ಉದಾಹರಣೆಗಳು ಕವಿಯು ವರ್ಣಿಸಿದ ಪೂರ್ಣ ಪಾಠವೂ ಅಲ್ಲ. ಪರಿಪೂರ್ಣ ಭಾಷಣವೂ ಅಲ್ಲ. ವಾಗ್ಮಿತಾ ಶಕ್ತಿಯನ್ನು ಅಭಿವ್ಯಕ್ತಿಗೊಳಿಸುವ ಕೆಲವು ಝಲಕುಗಳು ಇವು. ಆ ಶಕ್ತಿಯು ಈ ಪದ್ಯಗಳಲ್ಲಿ ಬೀಜರೂಪವಾಗಿದೆಯೆಂಬುದನ್ನು ತೋರಿಸುವುದು ಮಾತ್ರ ಇಲ್ಲಿ ಉದ್ದಿಷ್ಟವಾಗಿದೆ, ಪಂಪಭಾರತದಲ್ಲಿ ಶ್ರೀ ಕೃಷ್ಣನು ಪಾಂಡವರಿಗೆ ಅರ್ಧ ರಾಜ್ಯವನ್ನು ಕೊಡಿಸಬೇಕೆಂದು ಸಂಧಾನಕ್ಕಾಗಿ ದುರ್ಯೋಧನನ ಆಸ್ಥಾನಕ್ಕೆ ಬಂದಿದ್ದಾನೆ. ಅಲ್ಲಿ ದುರ್ಯೋಧನನನ್ನು ಉದ್ದೇಶಿಸಿ ಶ್ರೀ ಕೃಷ್ಣನು ಹೇಳುವ ಪ್ರಕಾರವಿದು–

೧. "ದುರ್ಯೋಧನ, ನಿನ್ನ ನಯ–ನೀತಿ–ಪರಾಕ್ರಮಗಳು ಅಸದೃಶವಾದವು. ಯಶೋಲಕ್ಷ್ಮಿಯು ನಿನಗೆ ಒಲಿದಿದ್ದಾಳೆ. ನಿನ್ನ ಮಾತಿನಲ್ಲಿ ಸತ್ಯಸಂಧತೆಯೂ ಪಾಂಡಿತ್ಯದಲ್ಲಿ ವಿನಯವೂ ಹಿರಿಯರಲ್ಲಿ ಗೌರವಬುದ್ಧಿಯೂ

ಇರುವ ನೀನು ಆದರ್ಶಪ್ರಾಯನಾದ ಚಕ್ರವರ್ತಿಯಾಗಿದ್ದೀಯೆ. ಸಿರಿಯಿದ್ದರೂ ನಿನ್ನಲ್ಲಿ ಸೌಜನ್ಯವಿದೆ. ಚಂದ್ರನು ತನ್ನ ಬೆಳದಿಂಗಳಿಂದ ಸಮಸ್ತ ಪೃಥ್ವಿಯನ್ನೇ ಬೆಳಗಿಸುತ್ತಾನೆ. ಅವನು ಕನ್ನೈದಿಲೆಗಳನ್ನು ಎಂದಾದರೂ ದೂರ ಮಾಡುತ್ತಾನೆಯೆ ? ಪಾಂಡವರು ನಿನಗೆ ದೂರವಾಗಿ ನವೆಯುತ್ತಿದ್ದರೆ ನಿನ್ನ ಹಿರಿಮೆಗೆ ಕುಂದಾಗುತ್ತದೆಯಲ್ಲವೆ ? ಯಾವುದೋ ಕಾರಣದಿಂದ ನಿಮ್ಮಲ್ಲಿ ವೈರಸ್ಯ ಉಂಟಾಯಿತು. ಪಾಂಡುಪುತ್ರರು ದೂರವಾದರು. ಆ ವೈರಸ್ಯವೇನು ಶಾಶ್ವತವೆ ? ಅಣ್ಣತಮ್ಮಂದಿರಾದ ನಿಮ್ಮಲ್ಲಿ ಒಡಕು ಇದೆಯೆಂದಾದರೆ ನಿನ್ನ ಪ್ರತಿಷ್ಠೆಗೆ ಅಪಕೀರ್ತಿ ಬರುತ್ತದೆ. ಪಾಂಡವರಾದರೋ ಧರ್ಮನಿಷ್ಠರು. ಯುದ್ಧದಲ್ಲಿ ಪರಮಶೂರರು. ಅವರೊಡನೆ ನೀನು ಸೋದರ ವಾತ್ಸಲ್ಯವನ್ನು ಬೆಳೆಸಿಕೊಂಡರೆ, ನಿನ್ನನ್ನು ಈ ವಿಶ್ವದಲ್ಲಿ ಎದುರಿಸತಕ್ಕವರು ಯಾರಿರುತ್ತಾರೆ ? ಏಕಚ್ಛತ್ರಾಧಿಪತಿಯಾದ ನಿನ್ನ ಕೀರ್ತಿಪತಾಕೆ ಎಲ್ಲೆಲ್ಲಿಯೂ ವಿಜೃಂಭಿಸುವುದು. ಅವರೇನೂ ಆಸೆಯಿಂದ ಬಹಳ ನೆಲವನ್ನು ನಿನ್ನಿಂದ ಕೇಳುವುದಿಲ್ಲ. ನೀನು ಕೊಟ್ಟುದನ್ನು ಸಂತೋಷದಿಂದ ಸ್ವೀಕರಿಸಿ ತೃಪ್ತರಾಗುತ್ತಾರೆ. ನಿನ್ನ ಪ್ರೀತಿಯನ್ನೂ ಗಳಿಸುವುದಕ್ಕಾಗಿ ಕಾದಿದ್ದಾರೆ. ಆದುದರಿಂದ, ದುರ್ಯೋಧನ, ದೂತರನ್ನು ಕಳುಹಿಸಿ ಪಾಂಡವರನ್ನು ಬರಮಾಡಿಕೊ. ನಿನ್ನನ್ನು ನಂಬಿಸಿ ಜಗಳಕ್ಕೆ ಕಾಲು ಕೆರೆಯುವ ಉದರಂಭರಿಗಳ ಮಾತನ್ನು ನಂಬಬೇಡ. ನಿನ್ನ ಕಷ್ಟಸುಖಗಳಿಗೆ ಭಾಗಿಗಳಾಗಿ ನಿನಗೆ ನೆರವು ನೀಡುವ ಪಾಂಡವರಂತೆ, ಬೇರೆಯವರು ಇರುವುದಿಲ್ಲ. ನನ್ನ ಮಾತನ್ನು ಕೇಳು. ನೀವೆಲ್ಲರೂ ಆನಂದದಿಂದ ಸಹಬಾಳ್ವೆ ನಡೆಸುವುದು ನನಗೆ ಪ್ರಿಯವಾದುದು " (ಪಂಪಭಾರತ : ೯ನೆಯ ಆಶ್ವಾಸ ೩೫ ರಿಂದ ೪೨ನೆಯ ಪದ್ಯಗಳ ವರೆಗೆ ಭಾವಾನುವಾದ)

೨. ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ವಿಶ್ವಾಮಿತ್ರನು ಮಾಯೆಯಿಂದ ಸೃಷ್ಟಿಸಿದ ಹೊಲತಿಯರಿಗೂ ಹರಿಶ್ಚಂದ್ರ ಮಹಾರಾಜನಿಗೂ ನಡೆದ ಸಂಭಾಷಣೆ, ಸಂವಾದಗಳು ಬಹು ಸುಂದರವಾಗಿ ಬಂದಿವೆ. ಆ ಸ್ತ್ರೀಯರು ಬೇಡಿದ ಶ್ವೇತಚ್ಛತ್ರವನ್ನು ಕೊಡಲು ಸಾಧ್ಯವಿಲ್ಲವೆಂದು ಹರಿಶ್ಚಂದ್ರನು ಹೇಳಿದಾಗ, ಹಾಗಿದ್ದರೆ ತಮ್ಮನ್ನು ಮದುವೆಯಾಗೆಂದು ಹೊಲತಿಯರು

ಗಂಟುಬೀಳುತ್ತಾರೆ. ಆಗ ಅವರೀರ್ವರಿಗೂ ನಡೆದ ಭಾಷಣವು 'ವಾದಿ' ಎಂಬ ಲೇಖನದಲ್ಲಿ ಬಂದಿದೆ. (ಪುಟ : ೧೧೧-೧೧೩)

ಈ ಸಂವಾದದಲ್ಲಿ ವಿವಾದಗ್ರಸ್ತ ವಿಷಯವೂ ಸೇರಿಕೊಂಡಿದೆ. ಇಲ್ಲಿ ಹರಿಶ್ಚಂದ್ರ-ಹೊಲತಿಯರು ವಾದಿ ಪ್ರತಿವಾದಿಗಳಾಗಿ ಮಾತಾಡಿದ್ದಾರೆ. ಅವರ ಮಾತಿನಲ್ಲಿ ವಾಗ್ವೈಖರಿಯೂ ಸೇರಿಕೊಂಡಿದೆ. ಇದು ವಾದಿ-ವಾಗ್ಮಿಗಳಿಬ್ಬರ ಮಾತುಗಳಿಗೂ ಸಂಮಿಶ್ರವಾದ ಉದಾಹರಣೆಯೆಂದು ತಿಳಿಯಬೇಕು.

ರನ್ನನ ಗದಾಯುದ್ಧದಲ್ಲಿ ಭೀಮಸೇನನು ತೆರಪಿಲ್ಲದಂತೆ ಐದು ಸಲ ಗದೆಯಿಂದ ದುರ್ಯೋಧನನನ್ನು ಪ್ರಹರಿಸುತ್ತಾನೆ. ಆಗ ಭೀಮಸೇನನು ಹೇಳುವ ರೋಷಪೂರ್ಣ ವಚನವಿದು-

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿವಾ ನಾಡ ಜೂದಿಂ
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಲೋಕನ ಭ್ರಾಂತಿಗೆಂದೋ
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದುರಮಂ ಕೆನ್ನೆಯಂ ನೆತ್ತಿಯಂ ಕೋ
ಪದಿನೈದುಂ ದುರ್ಣಯಕ್ಕೈದೆಡೆಯನುರುಗದಾದಂಡದಿಂ ಭೀಮಸೇನಂ ॥

ಈ ಪದ್ಯದಲ್ಲಿ ಯಾವ ಅಲಂಕಾರವೂ ಇಲ್ಲ. 'ಇದು' ಎಂಬ ಶಬ್ದ ಮತ್ತೆ ಮತ್ತೆ ಆವೃತ್ತವಾದರೂ ದೋಷವಲ್ಲ. ಭೀಮಸೇನನ ವಾಗ್ಧೋರಣೆಯನ್ನು ಅದು ಪ್ರಕಟಿಸುತ್ತ ರೌದ್ರರಸವನ್ನು ಉಕ್ಕೇರಿಸುತ್ತದೆ.

ಕಾವ್ಯ ಪ್ರಪಂಚದಲ್ಲಿ ಭಾಷಣ ವೈಖರಿಯನ್ನು ಪ್ರದರ್ಶಿಸುವುದು ಕ್ಲಿಷ್ಟವೇ ಹೌದು. ಮಾತನ್ನು ಬೆಳೆಸಬಹುದು. ಆದರೆ ಕಾವ್ಯದಲ್ಲಿ ಅದನ್ನು ರಸವತ್ತಾಗಿ ಬೆಳೆಸ ಬೇಕಾಗುತ್ತದೆ. ಇಲ್ಲದಿದ್ದರೆ ಅದು ಕಾವ್ಯತ್ವವನ್ನೇ ಕಳೆದುಕೊಂಡೀತು. ಸಹೃದಯರಿಗೆ ಆಕರ್ಷಕವಾಗುವ ರೀತಿಯಲ್ಲಿ ವಾಗ್ವೈಭವವನ್ನು ಮೆರೆಸಬೇಕಾಗುತ್ತದೆ. ಗ್ರಂಥವೂ ವಿಸ್ತೃತವಾಗುತ್ತದೆ ಕವಿಪ್ರತಿಭೆಗೆ ಈ ವಿಸ್ತರವು ಒಂದು ಒರೆಗಲ್ಲು. ಈ ಒರೆಗಲ್ಲಿನಿಂದ ಉಜ್ಜಿದಾಗಲೂ ಚಿನ್ನದಂತೆ ಹೊಳೆಯುತ್ತ ಯಶಸ್ವಿಯಾದವರೂ ಇದ್ದಾರೆ. ಸಂಸ್ಕೃತದಲ್ಲಿ ಮಹಾಭಾರತವನ್ನು ರಚಿಸಿದ ವೇದವ್ಯಾಸರೂ ಕನ್ನಡದಲ್ಲಿ ದಶಪರ್ವಭಾರತವನ್ನು ರಚಿಸಿದ ಗದುಗಿನ ನಾರಣಪ್ಪನೂ ಈ ನಿಟ್ಟಿನಲ್ಲಿ ಅಗ್ರಪಂಕ್ತಿಗೆ ಸೇರುತ್ತಾರೆ.

ಧರ್ಮರಾಜನ ರಾಜಸೂಯಾಧ್ವರದಲ್ಲಿ ಅಗ್ರಪೂಜೆಯು ಶ್ರೀಕೃಷ್ಣನಿಗೆ ಸಲ್ಲಬೇಕೆಂದು ಭೀಷ್ಮನು ಹೇಳುತ್ತಾನೆ. ಅದನ್ನು ಶಿಶುಪಾಲನು ವಿರೋಧಿಸಿದಾಗ ಭೀಷ್ಮನು ಶ್ರೀಕೃಷ್ಣನ ಅರ್ಹತೆಯನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತಾನೆ. (೬೧ ಭಾಮಿನೀ ಷಟ್ಪದಿಗಳಲ್ಲಿ ಭೀಷ್ಮನ ವಾಗ್ವೈಖರಿ ಪ್ರಕಟವಾಗಿದೆ-ಸಭಾಪರ್ವ : ೯ನೆಯ ಸಂಧಿ). ಇಂತಹ ಹಲವಾರು ನಿದರ್ಶನಗಳನ್ನು ಗದುಗಿನ ಭಾರತದ ಉದ್ದಕ್ಕೂ ನೋಡಬಹುದು. ವಾಗ್ಮಿತೆಯನ್ನು ಚೇತೋಹಾರಿಯಾಗಿ ವಿಸ್ತರಿಸುವುದರಲ್ಲಿ ಕುಮಾರವ್ಯಾಸನನ್ನು ಸರಿಗಟ್ಟತಕ್ಕ ಕವಿಯಾದರೂ ಯಾರು ?

ಇವೆಲ್ಲವೂ ಕಾವ್ಯಪ್ರಪಂಚದಲ್ಲಿ ಕವಿಸಂದೃಬ್ಧ (ಕವಿನಿರ್ಮಿತ) ವಾಗ್ಮಿಗಳ ಮಾತಾಯಿತು. ವ್ಯವಹಾರ ಪ್ರಪಂಚದಲ್ಲಿಯೂ ಉತ್ತಮ ವಾಗ್ಮಿಗಳಿದ್ದಾರೆ. ಉತ್ತಮ ಭಾಷಣಕಾರರೆಂದು ವಿಖ್ಯಾತರಾದವರಿದ್ದಾರೆ. ಕೆಲವರ ವಿಷಯವಾಗಿ ಕೇಳಿದ್ದೇವೆ. ಕೆಲವರನ್ನು ನೋಡಿಯೂ ಇದ್ದೇವೆ. ಸ್ವಾಮಿವಿವೇಕಾನಂದ, ಸ್ವಾಮಿಚಿನ್ಮಯಾನಂದ, ಜೆ. ಕೃಷ್ಣಮೂರ್ತಿ – ಮೊದಲಾದ ಮಹನೀಯರು ದಾರ್ಶನಿಕ ವಿಚಾರಗಳಲ್ಲಿ ವಿಖ್ಯಾತರಾದ ವಾಗ್ಮಿಗಳು. ನ್ಯಾಯವಾದಿಗಳು ಪ್ರಾಯೇಣ ವಾಗ್ಮಿಗಳು. ಅವರ ವೃತ್ತಿಯೇ ಅಂತಹದು. ರಾಜಕೀಯದಲ್ಲಿ, ಸಾಹಿತ್ಯ-ಸಾಮಾಜಿಕ ವಿಚಾರಗಳಲ್ಲಿ ಶ್ರೇಷ್ಠರಾದ ಭಾಷಣಕಾರರಿರುತ್ತಾರೆ. ಶ್ರೀ ಲೋಕಮಾನ್ಯತಿಲಕರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿದ್ದ ಆಶುತೋಷ ಮುಖರ್ಜಿ, ಅವರ ಸುಪುತ್ರರೇ ಆಗಿದ್ದು ಲೋಕಸಭಾ ಸದಸ್ಯರಾಗಿದ್ದ ಶ್ಯಾಮಪ್ರಸಾದ ಮುಖರ್ಜಿ, ತೇಜಬಹದ್ದೂರ್ ಸಪ್ರು, ಭೂಲಾಭಾಯಿ ದೇಸಾಯಿ, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ರೈ॥ ಶ್ರೀನಿವಾಸ ಶಾಸ್ತ್ರಿ. ಡಾ॥ ರಾಧಾಕೃಷ್ಣನ್ ಮೊದಲಾದವರು ಸುಪ್ರಸಿದ್ಧ ಭಾಷಣಕಾರರು. ಅಂತೆಯೇ ಕನ್ನಡ ಸಾಹಿತಿಗಳಲ್ಲಿ ಶ್ರೀ ಬಿ.ಎಂ. ಶ್ರೀಕಂಠಯ್ಯನವರು, ಜಿ.ಪಿ. ರಾಜರತ್ನಂ, ಅ.ನ. ಕೃಷ್ಣರಾಯರು. ಇವರೆಲ್ಲರು ತಮ್ಮ ನಿರರ್ಗಳ ವಾಣಿಯಿಂದ ಸಭೆಯನ್ನು ಆಕರ್ಷಿಸುವುದರಲ್ಲಿ ತುಂಬ ಗಟ್ಟಿಗರು. ಈ ಹೆಸರುಗಳು ಕೇವಲ ನಿದರ್ಶನಕ್ಕಾಗಿ. ಇಂತಹ ವಿದ್ಯಾವಂತರಾದ ಉಪನ್ಯಾಸಕಾರರು ಹಿಂದೆ ಇದ್ದರು, ಈಗಲೂ ಇದ್ದಾರೆ. ಅಧ್ಯಾಪಕರಿಗಂತೂ ಈ ವಾಕ್‌ಶಕ್ತಿ ಅತ್ಯಾವಶ್ಯಕ, ಅಧ್ಯಾಪಕನು ಯಶಸ್ವಿಯಾಗಿ ವಿದ್ಯಾರ್ಥಿಗಳ

ಪ್ರೀತಿಗೌರವಗಳನ್ನು ಪಡೆಯಬೇಕಾದರೆ ಅವನಲ್ಲಿ ಉತ್ತಮವಾದ ವಾಗ್ಮಿತೆ ಇರಬೇಕು.

## ಉಪಸಂಹಾರ

ವಾಲ್ಮೀಕಿ ಮುನಿಗಳು ಶ್ರೀಮದ್ರಾಮಾಯಣದ ಮೊದಲನೆಯ ಶ್ಲೋಕದಲ್ಲಿಯೇ ನಾರದರನ್ನು 'ವಾಗ್ವಿದಾಂ ವರಂ' ಎಂದು ವಿಶ್ಲೇಷಿಸಿದ್ದಾರೆ. ಶ್ರೀರಾಮನ ಗುಣಗಣಗಳನ್ನು ಗಣಿಸುವಾಗ "ಬುದ್ಧಿಮಾನ್ ನೀತಿಮಾನ್ ವಾಗ್ಮೀ" ಎಂದು ಹೇಳಿ ಶ್ರೀರಾಮನನ್ನು ವಾಗ್ಮಿಯೆಂದು ಕರೆದಿದ್ದಾರೆ. ಶ್ರೀರಾಮನು ಮಿತಭಾಷಿಯಾದರೂ ಸಂದರ್ಭ ವಿಶೇಷದಲ್ಲಿ "ಉತ್ತರೋತ್ತರಯುಕ್ತೀನಾಂ ವಕ್ತಾ ವಾಚಸ್ಪತಿರ್ಯಥಾ = ಉತ್ತರಕ್ಕೆ ಉತ್ತರವನ್ನಿತ್ತು ಒಂದಾದ ಮೇಲೆ ಇನ್ನೊಂದು ಯುಕ್ತಿಯನ್ನು ಬಳಸಿ ಮಾತಾಡುವುದರಲ್ಲಿ ಆತನು ಬೃಹಸ್ಪತಿಯಂತೆ ವಾಗ್ಮಿ." ಶ್ರೀರಾಮನು "ಸ್ಮಿತಪೂರ್ವಾಭಿಭಾಷಿ, ಮಧುರಭಾಷಿ, ಪೂರ್ವಭಾಷಿ, ಪ್ರಿಯಂವದ" ಎಂದು ವರ್ಣಿಸಿದ್ದಾರೆ. ಈ ವರ್ಣನೆಗೆ ಪೋಷಕವಾದ ನಿದರ್ಶನಗಳು ಶ್ರೀಮದ್ರಾಮಾಯಣದಲ್ಲಿ ವಿಪುಲವಾಗಿ ದೊರೆಯುತ್ತವೆ. ಮಾತಾಡುವ ಕಲೆಯನ್ನು ಹೀಗೆ ವಿಶದವಾಗಿ ಕೊಂಡಾಡುವುದು ವಾಕ್‌ಶಕ್ತಿಯಲ್ಲಿರುವ ಅಸಾಧಾರಣವಾದ ವೈಶಿಷ್ಟ್ಯದಿಂದ. ವಾಗ್ಮಿಗೆ ವಶನಾಗದವನೇ ಇಲ್ಲ. ವಾಗ್ಮಿತೆಯು ಮಾತ್ರ ಸುಲಭವಾಗಿ ವಶವಾಗತಕ್ಕದ್ದಲ್ಲ. ಮನುಷ್ಯನು ತನ್ನ ಪ್ರಯತ್ನದಿಂದ ಏನನ್ನು ಬೇಕಾದರೂ ಸಾಧಿಸಬಲ್ಲನು. ವಾಕ್‌ಶಕ್ತಿಯನ್ನು ಮಾತ್ರ ಹಾಗೆ ಸಾಧಿಸಲಾರ. ಅದು ಪುಣ್ಯಬಲದಿಂದ ಕೆಲವರಿಗೆ ಸ್ವತೋಲಭ್ಯವಾಗಿರುತ್ತದೆ. ಅದೊಂದು ದೇವದತ್ತವಾದ ಭಾಗಧೇಯ.

ಕವಿ, ಗಮಕಿ, ವಾದಿ, ವಾಗ್ಮಿಗಳಲ್ಲಿ ವಾಗ್ಮಿತೆ ಇದ್ದೇ ಇದೆ. ಅವರೆಲ್ಲರೂ ಅದರ ಹಿನ್ನೆಲೆಯಿಂದ ಸ್ಫೂರ್ತಿಯನ್ನೂ ಪಡೆದವರೇ. ಒಂದಾನೊಂದು ಶಕ್ತಿವಿಶೇಷವು ಪ್ರಮುಖವಾಗಿ ಪ್ರಕಟವಾಗುವುದರಿಂದ ಕವಿ, ಗಮಕಿ, ಮುಂತಾದ ವಿಭಿನ್ನ ನಾಮಧೇಯಗಳು. ಕಾವ್ಯರಚನಾಪ್ರತಿಭೆಯು ಎದ್ದು ವಿಜೃಂಭಿಸಿದಾಗ ಕವಿಯೆನಿಸುತ್ತಾನೆ. ಗಮಕಿಯಲ್ಲಿ ಅದು, ಹಾಲಿನಲ್ಲಿರುವ ಸಿಹಿಯಂತೆ ಸುಪ್ತವಾಗಿದ್ದು, ಕಾವ್ಯವಾಚನ ಶೈಲಿಯಲ್ಲಿ ತೋರಿಕೊಳ್ಳುತ್ತದೆ. ಖಂಡನೆ

ಮಂಡನೆಗಳಲ್ಲಿ ಬುದ್ಧಿಶಕ್ತಿಯನ್ನು ವಿನಿಯೋಗಿಸುವ ವಾಗ್ಮಿಯೇ ವಾದಿಯೆನಿಸುತ್ತಾನೆ. ಈ ಮೂವರಲ್ಲಿರುವ ವಿಶಿಷ್ಟ ಸಾಮರ್ಥ್ಯವನ್ನು ಗೌಣವಾಗಿರಿಸಿ, ವಾಕ್‌ಶಕ್ತಿಯೇ ಪ್ರಧಾನವಾಗಿ ಪ್ರಕಾಶಿಸಿದಾಗ ವಾಗ್ಮಿಯೆನಿಸುತ್ತಾನೆ.

**ಕೇಯೂರಾಣಿ ನ ಭೂಷಯಂತಿ ಪುರುಷಂ ಹಾರಾ ನ ಚಂದ್ರೋಜ್ಜ್ವಲಾಃ**
**ನ ಸ್ನಾನಂ ನ ವಿಲೇಪನಂ ನ ಕುಸುಮಂ ನಾಲಂಕೃತಾ ಮೂರ್ಧಜಾಃ ।**
**ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾ ಧಾರ್ಯತೇ**
**ಕ್ಷೀಯಂತೇಽಖಿಲಭೂಷಣಾನಿ ಸತತಂ ವಾಗ್ಭೂಷಣಂ ಭೂಷಣಮ್ ॥**

—ಭರ್ತೃಹರಿಯ ನೀತಿಶತಕ



ಗಮಕಿ ಶ್ರೀ ಆರ್. ಶಂಕರನಾರಾಯಣ್ ಅವರ ಹುಟ್ಟೂರು ಆನೇಕಲ್ ತಾಲೂಕು ರಾಚಮಾನಹಳ್ಳಿ. ವಿದ್ಯಾಭ್ಯಾಸ ಬೆಂಗಳೂರಿನಲ್ಲಿ. ದೂರವಾಣಿ ಕಾರ್ಖಾನೆಯಲ್ಲಿ ಕಸುಬು. ವೃತ್ತಿಯಲ್ಲಿದ್ದಾಗ ಸಂಗೀತ ಸಾಹಿತ್ಯಾಭ್ಯಾಸ. ಸಹೃದಯ ಗೋಷ್ಠಿಯ ಸಂಪರ್ಕದಿಂದ ಗಮಕ, ಸಾಹಿತ್ಯ ಪಾಂಡಿತ್ಯ ಸಂಪಾದನೆ. ೧೯೭೯ರಲ್ಲಿ ಕನ್ನಡ ಎಂ.ಎ. ಪದವಿ. ಸಾಹಿತ್ಯ ಸಂಸ್ಕೃತಿ ಪ್ರಸಾರ ಜೀವನದ ಸುಖ ಸಂಪಾದನೆಗೆ ಕೈಕೊಂಡ ಹವ್ಯಾಸ. 'ಗಮಕ' ಕಲೆಯ ಅಭ್ಯಾಸದ ಆಧಾರದಿಂದ ಕಾವ್ಯ ರಚನಾ ಪಾಂಡಿತ್ಯ ಸಂಪಾದನೆ. ಪುರಾಣ, ಸಂಪ್ರದಾಯ ವ್ರತ ಕಥೆಗಳ ವಸ್ತುಗಳನ್ನುಳ್ಳ ಕಾವ್ಯರಚನೆ. 'ವಾರ್ಧಕ ಷಟ್ಪದಿ' ಅವರು ಮೆಚ್ಚಿ ಆರಿಸಿಕೊಂಡ ಛಂದೋಮಾರ್ಗ. ಸರಳ, ಸಹೃದಯ ಮನೋವೃತ್ತಿಯಿಂದ ಸುಸಂಸ್ಕೃತರ ಸಹವಾಸ ಲಾಭವನ್ನು ಪಡೆದುಕೊಂಡು ಕಾವ್ಯ ರಚನಾ ಸಂಪತ್ತನ್ನೂ, ಕಾವ್ಯಶಾಸ್ತ್ರ ವಿದ್ವತ್ತನ್ನೂ ಗಳಿಸಿಕೊಂಡರು. ಕನ್ನಡ, ಸಾಹಿತ್ಯ ಮತ್ತು ಗಮಕ ಕಲೆಗೆ ಅವಿರತವಾದ ಸೇವೆ ಅವರ ಬದುಕಿನ ಗುರಿ.

---



ಶ್ರೀ ರಂಗನಾಥ ಶರ್ಮಾ ಅವರು ಹುಟ್ಟಿದ್ದು ೧೯೧೬ರಲ್ಲಿ. ಅವರ ಊರು ಸೊರಬ ತಾಲೂಕಿನ ನಡಹಳ್ಳಿ. ಅವರ ವಿದ್ಯಾಭ್ಯಾಸ - ಹುಟ್ಟೂರು, ಶಿವಮೊಗ್ಗ, ಬೆಂಗಳೂರು, ಮೈಸೂರು, ಮದರಾಸ್‌ಗಳಲ್ಲಿ ನಡೆಯಿತು. ಅವರ ಕಲಿಕೆ ವಿಶೇಷವಾಗಿ ಸಂಸ್ಕೃತ ಭಾಷೆ, ಸಾಹಿತ್ಯ. ಕನ್ನಡವನ್ನು ಸ್ವಂತ ಆಸಕ್ತಿಯಿಂದ ಕಲಿತು ವಿದ್ವಾಂಸರಾದರು. ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರ ಪ್ರಾಧ್ಯಾಪಕರಾಗಿ ಲೌಕಿಕ ವೃತ್ತಿಯನ್ನು ಕೈಗೊಂಡರು. ಸಂಸ್ಕೃತ, ಕನ್ನಡ ಸಾಹಿತ್ಯವನ್ನು ರೂಢಿಸಿಕೊಂಡು ಆ ಎರಡೂ ಭಾಷೆಗಳಿಗೆ, ಸಾಹಿತ್ಯಗಳಿಗೆ ಅಪೂರ್ವ ಮತ್ತು ಅಮೂಲ್ಯ ಸೇವೆ ಸಲ್ಲಿಸಿದರು. ಹಲವಾರು ಗ್ರಂಥಗಳನ್ನು ಸಂಸ್ಕೃತದಲ್ಲಿ ಕನ್ನಡದಲ್ಲಿ ರಚಿಸಿದರು. ಅನೇಕ ಪ್ರಶಸ್ತಿಗಳನ್ನು ಸಂಪಾದಿಸಿದರು. ನಿಃಸ್ವಾರ್ಥ, ಸೌಜನ್ಯಶೀಲ ಆಚಾರ್ಯರಾಗಿ ಕೀರ್ತಿಗಳಿಸಿದ್ದಾರೆ. 'ರಾಮಾಯಣ'ದ ಕನ್ನಡ ಅನುವಾದ ಅವರ ಪ್ರತಿಷ್ಠಿತ ಗ್ರಂಥ.